ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER
ಕ್ಲಾಸಿಫೈಡ್ಸ್

LONG TERM OFFICE RENTAL ON OLD AIRPORT ROAD
7447 Sqft FULLY Fitted Out Office with
☞96 Workstations, ☞5 Cabins,
☞3 Meeting Rooms, ☞1 Board,
☞1 MD Cabin, ☞1 Cafeteria
On Old airport road next to HAL museum.
Msg only by WhatsApp: 98450 31550
for more details. Brokers excuse !

COMMERCIAL SITE for Sale 50x80 Nagarabhavi 100`ft Road West facing, next`to BDA Complex Opposite`to Lifeline Hospital.`Call: 8310719986/ 9448061555

Commerical

Kengeri

4500 sqft, South West Corner, Nagadevanahalli Ring Road. Ideal for Shopping Mall, Gas Station, Hospital, etc. **Call : 9845780996**

REAL ESTATE SELLING

Sites

Arkavathi Layout

55X100 PROPERTY For Sale at Arkavathi Latout, Srirampura (Revenue Title). Contact: 7676900174 6363496142

Banashankari

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

SRINIVASA NAGAR BSK I Stage 43x60 SW Corner 40 Square Building 20 Years old JP.Nagar 7th Phase. 1800 Sft Site NW Corner Nataraja layout Adjacent Brigade Millenium. Contact: 98443-76310

SALE BDA Site No. 834 30x40 9400 per sqft BSK 6th Phase 7th Block north facing direct registration No agreement No broker owner 9844270806

BANASHANKARI 6TH Stage, 4th Block, BDA Site, 30x40, South Facing Genuine Buyers Contact: 9844216344

Gnanabharathi

SALE SITE 30x40 East Face Betterment A Khata Bairava Nagar (Gnanabharathi BDA Attach) Contact: 9148306669

Hesaraghatta

***MEI LAYOUT** Bagalkunte* 40x60 @ 13000/ slightly negotiable south facing available oppto park 9353199141

Isro Layout

SALE COMMERCIAL Site 40x60 east south corner both side 40 feet road Opp BOB 9945760502

J P Nagar

SALE BDA SITE 20x30 South Facing 30 feet Road, JP Nagar 9th Phase, 4th Block, 8971799337

JPNAGAR 8TH Phase, Royal County Phase 2, 40x60, BDA,N/F,Semi- Commercial 60"Road Near BDA Park,16500/- 9845600007

Kengeri

KENGERI UPANAGAR BDA Site 25X42. E/F Banashankari 6th Stage, 7th Block. 20X30. W/F 9632822225, 9110467577.

Kanakapura Road

SALE 3660 sft. corner site BMRDA approved excellent Vasthu in gated community Near Art of Living Hqrs. Call 8660840328.

Kempegowda Layout

NADAPRABHU KEMPEGOWDA Layout 1st block K sector 30x40 W/F 82 lakhs,9th block D sector 80x65 South west corner commercial site ₹6500/-.and Vishveshwaraiah Layout 3rd block 40x60 E/F.Contact: 9686469799

Multiple Locations

"SALE COMMERCIAL Sites/ Buildings Jayanagar 40x60, 60x80, Banashankari 2nd Stage 50x70, Genuine Bbuyers Call: 9845286505"

Mysore

SALE: 30X40 SITE No.182, Athmananda Sagara Layout, Nagawala-Mysore, Bank loan available. Contact: 6360318172

Nagarabhavi

"NAGARABHAVI BDA Complex 30x45 North, 30x50 East BDA Site, Full`white, Immediate Registration. 9448432633/ 7022218837

Nelamangala

"30X50 SOUTH facing Site for sale`@ Nelamangala Rashi Developers close`to 'D'Mart, Tumkur Highway. 9845268611"

Out-Station

DOCTORS LAYOUT 2nd Phase Vajamangala, Mysore 2144 sft West Facing 2,475/- Sft Call 9448181786, 9886332364 (Brokers Excuse)

Rajajinagar

***RAJAJINAGAR* 5TH** Block 68th cross 1517sqft South Facing Rs.23500/- sqft Slightly Negotiable.Contact: 9686469799

Tumkur

11.75 GUNTA DC Converted Plot Sale at Gubbi Town Near Police Station, Clear Titles: 9880419865

Vishweshwariah Layout

"30X40 RESIDENTIAL Conversion BBMP Site Sale Arunachalam Layout near 100 feet Road Vishveshwaraiah Layout- 9845143579"

**"COMMERCIAL WEST`SOUTH** Corner 2212`Sqft site for sale at`Kanakashree Layout 80`feet Road, near 100`feet Road, Ready to Construct. 9880031654"

AVAILABLE VISHWESHWARIAH Layout 1st Block 40X60 West BDA Site Good Location Near Shirke Apartments: 9901156708

AVAILABLE 5TH Block Vishweshwariah Layout 30X40 BDA Site Good Location Near by Vidyaniketan School: 9844603127

"VISHVESHWARAIAH 1ST Block 50x80 North 40ft Road, parallel to`80ft Road near Shirckey circle. 9886908408"

SALE BDA Vishweshwaraiah Layout, 5th Block 30x40, SF, 40 Feet Road, KLE Law College. 7411685851

DIRECT OWNER: 30x40, 40x60 Commercial Site for Sale. Near RTO Office. Vishweshwaraiah Layout. 8971851966, 9880781399

VISVESVARAYA LAYOUT BDA 9th Block 20x30 Site West facing 77 lakhs negotiable ABHILASHA CONSULTANT. 9480565758

Vidyaranyapura

SALE: 40'X60.6" Site West face 13th Cross, 1st Block, BEL Society, Vidyaranyapura, Brokers Excuse. Contact: 9177029009/ 7799029712.

VIDYARANYAPURA HMT Layout 40X60 BDA APPROVED Site Excellent Location 40 Feet Road For Sale, Call:9341260828

Bidadi

SITE SALE Direct owner. 50X60 Corner Site, BMRDA Approved layout, at BIDADI. Rs:2500/= Call: 9019555646

Bannerghatta Road

SALE HULIMAVU 20,000Sft, VACANT, A-Khata, Clear Titles, Suitable for Apartment, 43feet Road Width, East Facing, North Corner, 5000/-sft, CALL VERNA DEVELOPERS: 9916310226/ 9353128035.

Tumkur Road

URGENT SITE SALE 60x40 Include 1BHK, Makali Alur Road, Unibic Factory 2300/- sqft. 9632330007/ 9986420007.

Majestic And Around

SULTANPET CIRCLE 984 sft (21x46) South - facing Plot with old structure Price 9.35Cr (brokers excuse) Bharadwaj Estates 9845019934.

House

Banashankari

HOUSE SALE (G+3) 2BHK Per Floor @ Banashankari 5th Stage BDA 30x40 South Plot NEAR PATALAMMA TEMPLE Bus Stop Rs 3 Crores RENUKA 9632444445/ 9632356565 Shivakumar 9845875555

Indiranagar

DOMLUR 2ND Stage 4800Sqft Corner House 4BHK with Garden and near 12th Main 45x60 North Facing with House for Sale details.Call an 9845004248

J P Nagar

JP-NAGAR 2ND Near Central Mall 40X60 Old House, 6,0000000/ 30X50 3 Unit House, 4,5000000 3rd Near Mini Forest 30X40 House 3,8000000/ 60X90 Two Unit House 16,5000000: 9739995042

J.P.NAGAR RBI Layout 30x50 North, 4BHK Duplex 3,90,00000/- 2nd- 30x40, West 3,10,00000/- Mahalakshmi Enterprise: 9845144365

JP-NAGAR 4TH Dollars Colony Residential 50X80 House, 11,50,00,000/ SITE 50X85, 40 Feet Road 7,23,00000: 9739995042

Vidyaranyapura

VIDYARANYAPURA- 60'X40'- BEL layout- 2 Block, 4 BHK Indpendent Duplex, Ready to move House:: 9449059015.

Mysore

1200 SQFT Site Semi Furnished House Sale in Vijayanagar 4th Stage Near SVEI School,Mysore.No Brokers. 8762059656.

Basaveshwaranagar

SALE BUILDING 2500 SQUARE FEET TWO FLOORS A KHATHA RS.1 CRORE 90 LAKHS: 9035883017

Flat

Cunningham Road

READY TO Move in 3BHK Super Luxury Apartment on Cunningham Crecesnt RoadOne Flat per floor each 3700sft with Formal Living/ Family Room/ Dining/ Sepetate servant quarters/ 2 car-parking/ Junk room in the basement/ False celling/AC /Lightings/ Marble Flooring/ Marble Bathrooms/ 100% power back up/ 25KW power sanction per flat/ Cavery water/ 10 passenger lift Expected price 18k per sft Bank loan available up to 80-90% Contact 7795044007

Mysore Road

MYSORE ROAD AVILABLE 3BHK FLAT SALE WITH CARPARKING RS. ONE CRORE THIRTYNINE LACS: 8105273951/ 9738223432

Rajajinagar

NEW 3 BHK FLAT 1500 Sft. attach, Teak, Granit, Car-parking, 1.5cr. near LuLu Mall. 9341256998.

Rajarajeshwari Nagar

1704 SQFT 3BHK 4th floor semi furnished Apartment for sale Rajarajeshwarinagar, prime location Call:9591013777

Sadashiva Nagar

SALE 3BR flat facing Sankey Rd, Sadashiv Nagar Ph: Indra 9845816686

Ulsoor

2 BEDROOM Flat Sale 1350 Sqft Near Ulsoor Lake, Car Park 1.85Cr Polaris Properties: 9845239386

Uttarahalli

3/4 BHK New Luxurious Flat Sale, A_khatha Ready-move 75L/ 1cr. carparking, cauvery. Vaasthu. 9844394444, 9019110623.

Vidyaranyapura

2BHK FLAT SALE 52 LAKHS Including Registration and Carpark. Near BEL Factory Doddabomsandra: 9035813667/ 9538599224

VIDYARANYAPURA: SALE 3BHK Flat, 1650sft, Second floor, 1.49Cr. (Nego). Lift, Carparking. 9845243757

Nagarabhavi

FLATS FOR-SALE @ Nagarabavi Circle 2 & 3 BHK Ready to Move.1KM From Metro Station Call:9845066608 9538828808

General

SALE GOA 5STAR HOTELS WITH CASINO. MANGALORE SALE PROPERTIES : BEACH / RIVERSIDE FOR RESORTS, INVESTMENTS, LAND NEAR MANGALORE PORT FOR WAREHOUSE/ CONTAINERS, COMMERCIAL, RESIDENTIAL LAND , AGRICULTURE FARMS, AVAILABLE READY/BUILT TO SUIT. RENTAL COMMERCIAL SPACE 15000SFT. TO 2,00,000SFT. FOR SOFTWARE / MNC, CORPORATES . 9702932709

Out-Station

HIRIYUR 6000 sqft commercial property in prime location Hiriyur Main Road immediate sale. Genuine buyers only. 9591945892

Residential/ Commercial

Devanahalli

1100 SQFT BIAAPA Approved Plot Sale at Military officers society Devenahalli Rs 3300000. M 9752121223

Padmanabha Nagar

FOR SALE Duplex 3 BHK- North
in 20x30 site, small road, beautiful house Whatsapp Call
9611937546

Singsandra

FOR SALE 55×50- 2750 Sqft Site Between Singasandra Bus Stop & Hosa Rd Metro Station, Suitable For PG Building, Rs.8200/- Per Sqft, Contact-09900004901

Commercial Building

J P Nagar

JP-NAGAR 3RD Near Mini Forest 42X75 Corner 5 Floors Commercial Rental Income Building 12,25,00000/: 9739995042

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

AVAILABLE 2000 Square Feet for SHOP, DEPARTMENT STORE, SHOWROOM, GODOWN, OFFICE etc. in Kumaraswamy Layout 50 Feet Main Road. Call 9880022644.

AVAILABLE 1200 Square Feet FULLY FURNISHED AC OFFICE in Kumaraswamy Layout Main Road. Call 9880022644.

Industrial And Factory

KANAKAPURA ROAD, Harohalli Industrial area 3rd Phase, 11000Sft. Industrial Shed/ Godown for Rent, Ready Occupation- 9108982314

AVAILABLE OF Industrial Shed of 95000 sqft at Soukya Road, Whitefield. Contact: 9341234288/ 9663224353/ 9845417487.

RENT FACTORY- 4000 Sq.Ft Concrete Roof 12ft Height, 40HP Power, Borewell, Cauvery. V-60 KSSIDC Land near Padmavati Weigh bridge, PEENYA SECOND STAGE, Bangalore. RENT 90,000/ + GST per Month. Contact: 9844358512/ 9606666512

RENT 9900SFT COMMERCIAL/ INDUSTRIAL SHED @ SAHAKARNAGAR, Near AIRPORT Road (Part or Full) OWNER: 9686009911

REAL ESTATE BUYING

Industrial & Factory

Hoskote

WANTED 6 to 8 Acres Industrial Converted/ Convertable Land for Automobile Industry around Hosakote/ Narasapura/ Malur Immediate Registration. ANAND RAO 9844039416

Joint Development

Joint Venture

"URGENTLY REQUIRED- PROPERTY any dimensions in &`around Bangalore for Builders (Joint Venture or Individual), genuine Parties-Call: 9019533999/ 9731379933"

DH Classifieds
DECCAN HERALD
More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN
DH ALL KARNATAKA + PRAJAVANI BENGALURU CITY
ON SATURDAY + SUNDAY
@ 2481/-*
FOR 15 WORDS

www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164
*Conditions apply

DH Classifieds
DECCAN HERALD
More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA
+ PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN

www.dhclassifieds.com BOOK NOW
For more details contact:
+91 9901641752 | +91 9845114560 | +91 9900428036 |
+91 9731810277 | +91 9886213331 | 080- 45557163/164

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

WANTED BDA & BBMP SITES Anjanapura Banashankari 6th Stage, BCC & BCMC Layout, JP Nagar 8th 9th Phase Vishweshwaraiah Layout, Contact : 9845298419

Banashankari

WANTED BDA sites in Banashankari 6th stage. Any measurements. Immediate Settlement. Sellers Contact: 98454-95879, 99020-66606.

Kanakapura Road

WANTED SITE 30x40, 40x60 Anjanapura BDA, Kanakapura Road, Banashankari 6`Stage, Gubblala BCCHS Layout. Agent Excuse. Contact: 9663454878

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Mysore

WANTED SITES Devnooru 3rd Stage, Rajivnagar, Sathagalli, Mysore 30x40, 40x60 Immediate Settlement Contact: 9845767065

Nagarabhavi

"WANTED NAGARBHAVI, RHSCS, Vishveshwaraiah 50x80, 40x60,30x40 BDA Sites only Genuine Owners feel free Call: 7259675150"

R T Nagar

WANTED SITES in and around R.T.Nagar, Sultan Palya, Kanaka Nagar sorrounding for immediate. Contact:- 9591675731.

Vishweshwariah Layout

WANTED BDA Sites 30x40, 40x60 Any Measurement Vishweshwaraiah Layout Owner Immediate Registration Contact: 6360050356

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Mysore

WANTED MUDA allotted sites in Vijayanagar and Sathgalli Mysore. Immediate Settlement. Sellers contact: 98454-95879, 99020-66606.

JOB OPPORTUNITIES

Accounts & Finance

NEED 1). Lady Accountant with more than 10 yrs Experience and 2). Assistant Accountant with more than 3 yrs Experience from Nearby Kamakshipalaya Contact: 9341211718, 10:30 am to 5:30 pm

Teachers/ Professors

REQUIRED BIOLOGY, PHYSICS (PGT), ENGLISH (MA,B.Ed.), COMPUTER SCIENCE (MCA/BE), CBSE experienced Academic Director/ Retired Kendriya Vidyalaya Principal (Full/Part Time). Contact: HARWARD INTERNATIONAL SCHOOL, Dasanapura, Tumkur Road Bengaluru North 562162. Mobile: 9880112833, 9741337257. Send your resume: info@harwardinternationalschooledu.in

MODERN PUBLIC ENGLISH SCHOOL RT-Nagar, Bangalore requires ACADEMIC COORDINATORS and TEACHERS for ENGLISH, COMPUTER SCIENCE, KANNADA, ART AND CRAFT Whatsapp CV:9739981605 info@mpes-edu.com

WANTED TEACHERS FOR MATHS (PART-TIME) ENGLISH COMPUTERS. ABDUL BARI'S HIGH SCHOOL Near Coles Park 9353111888

THE MYSORE EDUCATION SOCIETY

MES

"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003, Website: www.mesinstitutions.in

Advt. No. MES/19 (1)/ADM-1/2024 Dated 07.08.2024

Invites applications for the following posts:

Assistant Professor for Degree Colleges: Full Time
Pay Scale: 43100-104600

SUBJECTS: ENGLISH / COMMERCE / POLITICAL SCIENCE

Essential Qualification: Master's Degree in relevant subject from a recognized university with a minimum of 55% Marks and qualified in NET/KSET examination in the relevant subject(s).

Desirable : Previous Teaching Experience at similar level in College. Knowledge in usage of technology/ ICT in teaching.

SUBJECT: COMPUTER SCIENCE

Essential Qualification: Master's Degree in Computer Science / Master's Degree in Engineering/ Master's Degree in Computer Applications, from a recognized university with a minimum of 55% Marks

Qualified in NET/KSET examination in Computer Science.

Desirable : Previous Teaching Experience at similar level in College.

Knowledge in usage of technology /ICT in teaching, web content management, knowledge of Computer Applications.

The posts carry pay and allowance. Besides this, contribution towards PF and Gratuity as terminal benefit.

1. Applications with BIO-DATA and copies of certificates of their qualifications and experience etc., should reach the Chief Executive, MES at the above address on or before 20.08.2024 duly superscribing the envelope with "Application for the post of ____________________".
2. Candidates with experience are preferred.
3. Competency in ICT enabled teaching is desirable.
4. All posts are tenable in any of the MES Institutions and are transferable.
5. Decision of the selection committee is final.
6. Resorting to any sort of influence will be deemed as a disqualification of the candidature.
7. Download the application form from the mes website: https://mesinstitutions.in

CHIEF EXECUTIVE

General

REQUIRED
GENERAL MANAGER/CASHIERS
Reputed Corporate Company Based in Bangalore Having Contract in Tourist places in Mysore is looking for **General Manager** (Having Experience in Managing Man Power Operations In Large organisation) & **Cashiers** with experience. (Retired Bank employees preferred.)
Email your Resume to toto.outsourcingsolutions@gmail.com

SHARANYA TELTRONICS requires Sales, Service, Accounts, Office Executives. Call 9845010634 email rajendiran@sharanyateltronics.com

EARN MORE than Rs: 50,000/- per month, Part/ Full time, Age above 30 Years. 9343616020

SECURITY AGENCY Require Experienced Field-Officer, Marketing Manager/ Operations, Tally Clerk, Personnel Driver. Bangalore Ph:080-23437474 23437797 Mob:8892073262

Engg/ Production Technical

WANTED FRESHER Civil Engineers or Supervisor for Construction Company Contact WhatsApp only Sarjapura Marathahalli 9916434972

WANTED
ITI-WELDERS FITTERS & ELECTRICIANS
(0 - 2 years Experienced) for a manufacturing factory in Nelamangala, Bangalore Rural -562123.
M:9591819339 e-mail id: factoryjobs2024@outlook.com

Marketing & Sales

WANTED SALES EXECUTIVES/ OFFICERS experienced industrialproducts selling with two wheeler, Contact AMIT INDUSTRIES. 9739826852

Hotel

REPUTED CATERING Company requires Operation/Unit MANAGER/ SUPERVISER. Male/ Female. Qualification; Hotel Managemant/ Catering Experience in Industrial Canteen. 9845074461, 9581810812, 9591810811 industrialcaterers@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Multiple Vacancy

RAGHAVA BIO-MEDICALS Rajajinagar.Required BE1.No's,Accountant 1.No's female,Office Assistant female 2.No's (PUC or Degree fail) and Delivery boys 2.No's.Contact: 9980016397, 9972867439

Wanted

WANTED OFFICE Boy at Malleswaram Knowing Tamil and Read English with two wheeler license Contact: 080- 23467589/ 88/ 9845159940 Contact: 10-00 am to 5-00 pm Weekdays.

LOOKING FOR HR with strong knowledge of Excel and PF, ESI Labour compliance. CONTACT: 9916902503

MATRIMONIAL

Grooms Wanted

Muslim

GROOM WANTED
Sunni Muslim, Slim, fair Girl 23 years, 5' 3" Height. Completing MSc Clinical Psychology in UK, Oct 2024 (from Bangalore). Looking for a Match 25-28 years, practicing, athletic boy Settled in UK/ Gulf/ Canada.
Contact: 9035450487
sgmohiyuddin@gmail.com

Brides Wanted

Kannada

WANTED BRIDE for Kunchatiga Lingayat Boy 33 years/ 5'4' Height. Works as driver in private School, Bangalore. Rs. 30,000/ PM. Interested Contact: 94482-05911.

PERSONAL

Lost

LOST & FOUND

Notice is hereby given that the Original Allotment letter issued by BDA dated 11.5.84 for site No.12, Koramangala S.T.Bed in favour of my mother Late Smt.Shantha Dhruva Rao has been reported lost/missing and a lost complaint has been lodged with Bangalore Police vide no.1187209/2024. If found please return it to the undersigned. For and on behalf of Dr. Sachidananda Kangovi.

Sd/ Sudheendra L
437, 4th main 3rd cross HMT Layout, Anandanagar Bengaluru 560024
Contact No. +91 99003 69999

WEEKEND CORNER

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ರಾಜೇಂದ್ರ ಪಾಲಿಟೆಕ್ನಿಕ್
R.E.S. POLYTECHNIC

RAJENDRA EDUCATION SOCIETY
KNOWLEDGE IS POWER
Estd. 1986

Sunkadakatte, Hegganahalli cross,
Near PEENYA II Stage, Bangalore - 560091

R. E. S. Evening Polytechnic
(Working professional program) since 2023-24

Join govt approved 2 yrs diploma in
- Electrical & electronics engg.

Eligibility:
- Any ITI trade with 2 yrs experience
- Any PUC science group with 2 yrs experience

R. E. S. Polytechnic
since 1986

Join govt approved 2/3 years diploma in
- Computer science engg.
- Information science engg.
- Mechanical engg.
- Automobile engg.
- Electrical & electronics engg.
- Electronics & communication engg.
- Civil engg.
- Fashion design & technology
- Commercial practice

Eligibility:
- PUC/ITI/12th pass for 2 years diploma
- SSLC/10th pass for 3 years diploma

For Further Details Contact : PRINCIPAL / SECRETARY
R.E.S. POLYTECHNIC
Campus : # 5, Sunkadakatte, Hegganahalli Cross, Magadi Main Road,
Bangalore - 560 091. Ph : 080-23484814, 23289424

99166 46466

Prime Healers®
Trust you won't regret

BUY or RENT MEDICAL EQUIPMENT

Prime Healers is the most reliable Home Health Care Service provider & Medical Equipment supplier in India. Our experts provide high quality home health care services.

"Buy online and get home delivery anywhere in India. "Currently our Rental services are available only in "**Bangalore, Delhi, Chennai, Mysore and Hyderabad**."

Visit **primehealers.com** for more information

Our Equipment Range
- Mobility Equipment
- Respiratory Equipment
- Cardiac Care
- Hospital Furniture
- Wellness Care

- High Quality
- Doorstep Delivery
- Hygienic
- Technical Assistance
- Affordable rates

DON'T PANIC! WE WILL SETUP
HOSPITAL AT HOME

Get comfort in treating patients at home without any hassles using our equipment. We are leading medical equipment suppliers in India. We are known for quality, promptness, and timely delivery of products.

for more info contact :
79757 08181
www.primehealers.com
info@primehealers.com

Head office:
Alerthands healthcare services Pvt Ltd
#36 & 37, 14th Cross, Krishnanandanagar,
Malagala, Nagarbhaavi 2nd stage,
Bengaluru, Karnataka 560091

YESH DEVELOPERS
YESH DEVELOPERS
Honest | Transparent | Affordable
Member of CREDAI NAREDCO

ವಿಶೇಷ ಕೊಡುಗೆ
5gm
5 ಗ್ರಾಂ ಚಿನ್ನ ಉಚಿತ
ಸೀಮಿತ ಅವಧಿಗೆ ಮಾತ್ರ

ನಿವೇಶನದ ಬೆಲೆ
₹1499
ರಿಂದ ಪ್ರಾರಂಭ

RERA: PRM/KA/RERA/1254/460/PR/160124/006547

ಬೆಂಗಳೂರು
Plots Near
ಇಶಾ ಫೌಂಡೇಶನ್
1000 Bed Government Medical College

ಮೈಸೂರು
ಸುಂದರವಾದ ಲೇಕ್ ವ್ಯೂ ಪ್ಲಾಟ್‌ಗಳು
ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾಗಿದೆ
- ಕಾಂಕ್ರೀಟ್ ರಸ್ತೆ
- ಯೋಗ ಡೆಕ್
- ವಾಕಿಂಗ್ ಟ್ರ್ಯಾಕ್

"ಪ್ರಶಸ್ತಿ ವಿಜೇತ ಯೋಜನೆಯಾಗಿದೆ"

RERA : PRM/KA/RERA/1268/378/PR/160124/006541

RERA : PRM/KA/RERA/1259/479/PR/181122/002172

ಹುಬ್ಬಳ್ಳಿ
ಕುಸುಗಲ್ ರಸ್ತೆ
RAAM ಹ್ಯುಂಡೈ ಶೋ ರೂಂ ಹಿಂದೆ
CC ಪಡೆಯಲಾಗಿದೆ

ಬ್ಯಾಂಕುಗಳಿಂದ ಸಾಲ ಸೌಲಭ್ಯವಿದೆ
HDFC BANK ICICI Bank

ನೊಂದಣಿ ಹಾಗು ತಕ್ಷಣದ ನಿರ್ಮಾಣಕ್ಕೆ ಸಿದ್ಧವಾಗಿದೆ

for Free Site Visit **9538885530 | 9538885767**

AISHWARYA TEA INDUSTRIES
AISHWARYA'S
since 1996

"ಕರ್ನಾಟಕದ ಅತ್ಯಂತ ರುಚಿಕರವಾದ ಚಹಾ"

ಅದ್ಭುತ ರುಚಿ • ಮಿತವಾದ ಬೆಲೆ • ಉತ್ಕೃಷ್ಟ ಗುಣಮಟ್ಟ

ಶಾಲಿಮಾರ್ ಗೋಲ್ಡ್
ಕೆ. ಟಿ. ಸ್ಪೆಷಲ್ ಚಹಾ

MONEY GUARANTEE BACK

100% ORGANIC

TRADE ENQUIRIES
Bangalore
Prasanna Kumar ASM:
+91 9980 157884

Rest of Karnataka
Satish RSM:
+91 97313 03541

Now available in your city
Available in amazon
www.aishwaryateaindustries.com
aishwaryatea@gmail.com

ಹೊಸ ನುಡಿಗಟ್ಟಿನ ಬಾಬ್ ಮಾರ್ಲಿ

ಕೆ.

ಚಿದಾನಂದ ಸಾಲಿ

ಪಿ.ಲಕ್ಷ್ಮಣ್ ರಚನೆ ವಿನ್ಯಾಸ ಮತ್ತು ನಿರ್ದೇಶನದ 'ಬಾಬ್ ಮಾರ್ಲಿ ಫ್ರಮ್ ಕೋಡಿಹಳ್ಳಿ' ನಾಟಕವು ತಳ ಸಮುದಾಯಗಳು-ಸಮಾಜವು ತಮಗೆ ಆರೋಪಿಸಿರುವ ಸೀಮಿತ ಗುರುತನ್ನು ಕಳಚಿ ಬಿಸಾಡಿ, ಹೊಸ ಅಸ್ಮಿತೆಯನ್ನು ಹುಡುಕಿಕೊಂಡಿರುವ ಕಥೆಯನ್ನು ಹೇಳುತ್ತದೆ. ಮೂರು ಪ್ರತಿಭೆಗಳ ಸಾಧನೆಯ ಕಿರುಧಾರೆಗಳನ್ನು ಒಂದೆಡೆ ಸೇರಿಸಿ (ವಿ. ಎಲ್.ನರಸಿಂಹಮೂರ್ತಿ) ಡ್ರಮಟರ್ಗ್ ಮಾಡಿ ಗಟ್ಟಿಯಾದ ಹಗ್ಗದಂತೆ ಹೊಸೆಯಲಾಗಿದೆ.

ಒಂದು ಸಣ್ಣ ವೃತ್ತದಷ್ಟು ಮಾತ್ರವಿರುವ ಜಾತಿಮೂಲದ ಅರ್ಥಹೀನ ಗುರುತಿನ ವ್ಯಾಪ್ತಿಯನ್ನು ಅಳಿಸಿ, ಅದನ್ನು ಮಿಲ್ಕಿ ವೇ ಗೆಲಾಕ್ಸಿಯ ಮಟ್ಟಕ್ಕೆ ವಿಸ್ತರಿಸಿಕೊಳ್ಳುವ ಆಶೆ, ಕನಸು, ಆತ್ಮವಿಶ್ವಾಸ ಮತ್ತು ಅದಕ್ಕೆ ಅಗತ್ಯವಾದ ಸತ್ವದ ಆಧಾರಗಳನ್ನು ದೊಡ್ಡಮಟ್ಟದಲ್ಲಿಯೇ ಹೊಂದಿರುವ ಪ್ರತಿಭಾಬೀಜಗಳ ಪ್ರತಿನಿಧೀಕರಣದಂತೆ ಈ ಮೂರು ಪಾತ್ರಗಳಿವೆ. ಬಾಬ್ ಮಾರ್ಲಿ ಪಾತ್ರದಲ್ಲಿ ಚಂದ್ರಶೇಖರ್ ಕೆ., ಶಿಕ್ಷಕಿ-ಸಾಹಿತ್ಯ ಪ್ರೇಮಿ 'ನದಿ'ಯ ಪಾತ್ರದಲ್ಲಿ ಶ್ವೇತಾರಾಣಿ ಎಚ್.ಕೆ. ಮತ್ತು ಶಾಕ್ಯ ಪಾತ್ರದಲ್ಲಿ ಭರತ್ ಡಿಂಗ್ರಿ ಸಜೀವವಾಗಿ ನಟಿಸಿದ್ದಾರೆ.

ಅವರು ದನದ ಮಾಂಸ ತಿಂದರೆಂಬ ಕಾರಣಕ್ಕೆ ಮನೆ ಬಿಡಿಸಲಾಗುತ್ತಿರುವ ದೃಶ್ಯದೊಂದಿಗೆ ನಾಟಕ ಆರಂಭವಾಗುತ್ತದೆ. ಬುದ್ಧಿಯು, ಮಾಂಸ ತಿನ್ನುವ ಆಸೆಯನ್ನು ಅದುಮಿಟ್ಟಾದರೂ ಸರಿ, ಭವಿಷ್ಯ ಕಟ್ಟಿಕೊಳ್ಳಬೇಕೆಂದು ಹಂಬಲಿಸಿದರೆ; ಮನಸ್ಸು- ಆ ಆಸೆಯನ್ನು ಪೂರೈಸಿಕೊಂಡೇ ಭವಿಷ್ಯದತ್ತ ಸಾಗಬಹುದಾದ ಆಶಾವಾದವನ್ನು ಪ್ರಕಟಿಸುತ್ತದೆ. ಅಂತೂ ಅವರೆಲ್ಲ ಮನಸಿನ ಮಾತಿನಂತೆ ಮಾಂಸ ತಿಂದು, ಬೇರೊಂದು ಮನೆ ಹುಡುಕಿಕೊಳ್ಳಲು ತಯಾರಾಗುವ ದೃಶ್ಯದೊಂದಿಗೆ ನಾಟಕ ಮುಗಿಯುತ್ತದೆ. ಆಗ ಥಿಯೇಟರ್ ಹೊರಗಿನ ಕಂಬಗಳಿಗೆ, ಬಾಗಿಲಿಗೆ ಅಂಟಿಸಿರುವ 'ಮನೆ ಬೇಕಾಗಿದೆ' ಎಂಬ ಹಾಳೆಗಳೂ ರಂಗಪರಿಕರಗಳಾಗಿ ಪ್ರೇಕ್ಷಕನಿಗೆ ತಾಕಿ ರಂಗದ ಹೊರಗೂ ಒಂದು ಆತ್ಯಂತಿಕ ವಿಷಾದ ಭಾವವು ಉದ್ದೀಪಿತವಾಗುತ್ತದೆ.

> ತಳ ಸಮುದಾಯಗಳ ಪರವಾದ ಗಟ್ಟಿ ಧ್ವನಿಯ ಈ ನಾಟಕವು ಮೂರೇ ಪಾತ್ರಗಳು ಮತ್ತು ಕೆಲವೇ ರಂಗಪರಿಕರಗಳೊಂದಿಗೆ
>
> ಸಮಾಜವು ತಮಗೆ ಆರೋಪಿಸಿರುವ ಸೀಮಿತ ಗುರುತನ್ನು ಕಳಚಿ ಬಿಸಾಡಿ, ಹೊಸ ಅಸ್ಮಿತೆಯನ್ನು ಹುಡುಕಿಕೊಂಡಿರುವ ಕಥೆಯನ್ನು ಹೇಳುತ್ತದೆ...

ಈ ನಾಟಕದ ವಸ್ತು ಹಳೆಯದೇ. ಅದನ್ನು ನಿರೂಪಿಸಲು ಬಳಸಿರುವ ಭಾಷೆ, ತಂತ್ರ, ಶೈಲಿ ಮತ್ತು ಪರಿಕರಗಳು ಹೊಸತು. ಇಡೀ ನಾಟಕದ ಭಾಷೆ ದೈನಂದಿನ ನುಡಿಗಟ್ಟಿನಲ್ಲಿ ಮಾತಾಡುತ್ತಲೇ ಕಾವ್ಯಾತ್ಮಕ ಎತ್ತರಕ್ಕೆ ಏರುತ್ತದೆ. ಅಂಬೇಡ್ಕರ್ ಮಾತು, ಎನ್‌ಕೆಯ ಕವಿತೆ, ಅಲ್ಲಮನ ವಚನ, ರೋಹಿತ್ ವೇಮುಲ ಪತ್ರದ ಸಾಲುಗಳು ನಾಟಕದ ಅನುಭವವನ್ನು ಅದರ ಉದ್ದೇಶಿತ ವೃತ್ತದಾಚೆಗೂ ವಿಸ್ತರಿಸುವಲ್ಲಿ ನೆರವಾಗುತ್ತವೆ. ಒಂದು ವಿಶಿಷ್ಟ ಹದದ ರೂಪಕಾತ್ಮಕ ಭಾಷೆಯನ್ನು ಹೊಸದಾಗಿ ಕಟ್ಟಿಕೊಂಡಿರುವ ಬಗೆಯು ನಾಟಕಕ್ಕೆ ಹೊಸಶಕ್ತಿಯನ್ನು ನೀಡಿದೆ. ಅಬ್ಬರ, ಅತಿ ವಾಚ್ಯತೆ, ಘೋಷಣೆ, ರೋದನೆ, ಅತಿರಂಜನೆ, ಪ್ರತಿರೋಧ ಮತ್ತು ಪ್ರತಿಭಟನೆಗಳ ಸವಕಲು ಮಾರ್ಗದೆಡೆ ವಾಲಬಹುದಾದ ಸಾಧ್ಯತೆಯಿದ್ದ ವಸ್ತುವನ್ನು ಬಲು ಜತನದಿಂದ ಸರಿಸಿ ಅದರ ಆತ್ಮಕ್ಕೆ ಊನವಾಗದಂತೆ ಕಲಾತ್ಮಕವಾಗಿ ಮಂಡಿಸಲಾಗಿದೆ.

'ಬಾಬ್ ಮಾರ್ಲಿ ಫ್ರಮ್ ಕೋಡಿಹಳ್ಳಿ' ನಾಟಕದ ದೃಶ್ಯ

ಈ ಶೋಷಿತ ಸಂಕಥನದ ಆತ್ಮಕ್ಕೆ ಸಾತ್ವಿಕ ವ್ಯಂಗ್ಯ ಮತ್ತು ತಾತ್ವಿಕ ವಿರೋಧಗಳ ಶರೀರಧಾರಣೆ ಮಾಡಿ; ಕಾವ್ಯಾತ್ಮಕವಾದ ಭಾಷೆಯಲ್ಲಿ ನುಡಿಸಲು ಹಚ್ಚಲಾಗಿದೆ. ಈ ಭಾಷೆಯೇ ನಾಟಕಕ್ಕೆ ಹೊಸ ಹೊಳಪನ್ನು ನೀಡಿದೆ. ವಿಷಾದಗಾಥೆ ಮಾತ್ರವಾಗಬಹುದಾಗಿದ್ದ ನಾಟಕವನ್ನು ವಿಚಾರೋದ್ದೀಪಕವಾಗಿ ಬೆಳೆಸಿದೆ. ರೂಪಕಾತ್ಮಕವಾಗಿಯೂ ಗೆಲ್ಲಿಸಿದೆ. ಮಿಂಚುಹುಳು, ಚಿನ್ನದ ಕೊಕ್ಕಿನ ಹದ್ದು, ಮಾರಿಜಾತ್ರೆಯ ಬಲಿಪಶು.. ಎಲ್ಲ ರೂಪಕಗಳು ನಾಟಕದ ಧ್ವನಿಶಕ್ತಿಯನ್ನು ಹೆಚ್ಚಿಸಿವೆ. ಮುಖ್ಯವಾಗಿ ಇಡೀ ನಾಟಕದಲ್ಲಿ ಮಾತಿನಷ್ಟೇ ಪರಿಣಾಮಕಾರಿಯಾಗಿ ಮೌನವನ್ನೂ ದುಡಿಸಿಕೊಂಡಿರುವ ಪರಿ ಮಾತ್ರ ಅನನ್ಯವಾಗಿದೆ. ಕೆಲವೆಡೆ ಪ್ರಕಟವಾಗಿರುವ ಮೊನಚಾದ ವ್ಯಂಗ್ಯ ಪರಿಣಾಮಕಾರಿಯಾಗಿದೆ.

ತಾಳೆ ಗರಿ, ಗಿಟಾರ್, ಗಣೆ, ದನದ ಮಾಂಸ, ಕಕ್ಕೆ ಹೂವು, ದೇವದಾಸಿ ನೃತ್ಯ.. ಪ್ರತಿಯೊಂದೂ ರಂಗಾನುಭೂತಿಯ ವಿಸ್ತರಣೆಗಾಗಿ ದುಡಿದಿವೆ. ಇವುಗಳ ಬಳಕೆಯಲ್ಲೇ ಅಡಗಿರುವ ಸಮಾಜೋ-ರಾಜಕೀಯ ಹೇಳಿಕೆ ಕೂಡ ಪ್ರೇಕ್ಷಕರು ತಮಗೆ ತಾವೇ ಕೇಳಿಕೊಳ್ಳಬೇಕಾದ ಪ್ರಶ್ನೆಯೊಂದನ್ನು ಅವರ ಎದೆಯೊಳಗೇ ನಾಟಿಸುವಂತೆ ಬಂದಿವೆ.

ಮತ್ತೆ ಮತ್ತೆ ಗುನುಗುವಂತಿರುವ ಮೂರೂ ಹಾಡುಗಳು ಕ್ರಮವಾಗಿ ಜನಪದೀಯ, ಸಿನಿಮೀಯ ಮತ್ತು ಜಮೈಕನ್ ರ್‍ಯಾಗೀ ಮಟ್ಟುಗಳಲ್ಲಿವೆ. 'ಎಲ್ಲೀಗಂಟ..' ಎಂಬ ಕೊನೆಯ ಹಾಡಿನ ರಾಗವು ಆವರಿಸಿಕೊಳ್ಳುವಂತಿದ್ದರೂ, ನಾಟಕದ ಆಶಯದ ಘೋಷವಾಕ್ಯವಾಗಿ ತುಸು ವಾಚ್ಯದತ್ತಲೇ ಹೆಚ್ಚು ವಾಲಿದೆ. ದೃಶ್ಯದಿಂದ ದೃಶ್ಯಕ್ಕೆ ಬೆಳೆಯುತ್ತ,

ಆವರಿಸಿಕೊಳ್ಳುತ್ತ ಸಾಗುವ ಈ ಏಕಾಂಕವನ್ನು ಪುನಃ ಆಶಯವೊಂದಕ್ಕೆ ಕಟ್ಟಿಹಾಕುವ, ವಾಚ್ಯದಲ್ಲಿಯೇ ಅದನ್ನು ಪ್ರಕಟಿಸುವ-ಸೆಳೆತಕ್ಕೆ ಒಳಗಾದಂತೆ ಮತ್ತು ಈ ನಿರ್ಧಾರಕ ಮಾತಿನಿಂದಾಗಿ ಪ್ರೇಕ್ಷಕನ ಅಂತರಾವಲೋಕನೆಗೆ, ಆತ್ಮವಿಮರ್ಶೆಗೆ ತಡೆಯುಂಟಾದಂತೆ ಭಾಸವಾಗುತ್ತದೆ.

ಒಂದು ಮಟ್ಟಿಗಿನ ವಿಮೋಚನೆಗೆ ನಗರಗಳು ನೆರವಾದುದನ್ನು ಹೇಳುತ್ತಲೇ, ಅದರಾಚೆಗಿನ ಬೆಳವಣಿಗೆಗೆ ಸಂಬಂಧಿಸಿದಂತೆ ಅವಕ್ಕಿರುವ ಅಸೂಯೆ-ಅಸಮಾಧಾನಗಳನ್ನೂ ಇಲ್ಲಿ ಹೇಳಲಾಗಿದೆ. ಜಮೈಕನ್ ಕಂಪೋಸರ್-ಸಿಂಗರ್ ಬಾಬ್ ಮಾರ್ಲಿಯ ಹೆಸರೂ ಇಲ್ಲಿ ಒಂದು ಅರ್ಥಪೂರ್ಣ ರೂಪಕವಾಗಿ ಬಳಕೆಯಾಗಿದೆ. ನಾಟಕದ ಕೊನೆಯಲ್ಲಿ ಕೋಡಿಹಳ್ಳಿಯ ಬಾಲವನ್ನು ಕಿತ್ತೆಸೆದು ಮಿಲ್ಕಿವೇ ಗೆಲಾಕ್ಸಿಯನ್ನು ಬಾಬ್ ಮಾರ್ಲಿಯಾಗಿರುವ ಚಂದ್ರು ಸೇರಿಸಿಕೊಳ್ಳುತ್ತಾನೆ. ಹೀಗೆ ಸರಿಪಡಿಸಿಕೊಂಡಿರುವ ಹೆಸರೇ ನಾಟಕದ ಶೀರ್ಷಿಕೆಯಾಗಿದ್ದರೆ ಅದಿನ್ನೂ ಹೆಚ್ಚು ಧ್ವನಿಪೂರ್ಣವಾಗಿರುತ್ತಿತ್ತೇನೋ ಎನಿಸುತ್ತದೆ.

ಮೂರೇ ಪಾತ್ರಗಳ, ಕೆಲವೇ ರಂಗಪರಿಕರಗಳ, ಒಂದೂವರೆ ಗಂಟೆಯ ಈ ಅವಿಶ್ರಾಂತ ಏಕಾಂಕವು ವಿಶಿಷ್ಟ ರಂಗಾನುಭವವನ್ನಂತೂ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ.

ಫಕೀರಪ್ಪ ಎಂಬ ರಂಗಛಾಪು

ಮಲ್ಲಿಕಾರ್ಜುನ ಕಡಕೋಳ

ಎಂಬತ್ತೂರರ ಏರುಪ್ರಾಯದ ರಂಗಕರ್ಮಿ ವರವಿ ಫಕೀರಪ್ಪ ತೀರಿಕೊಂಡಿದ್ದಾರೆ. ಏಳು ದಶಕಗಳ ಕಾಲ ವೃತ್ತಿ ರಂಗಭೂಮಿಯ ನಿಡಿದಾದ ರಂಗ ಬದುಕು ಬಾಳಿದವರು. ನಾಟಕ ಕಂಪನಿಗಳ ಸುವರ್ಣ ಕಾಲದಲ್ಲಿ ನಟ, ನಿರ್ದೇಶಕ, ನಾಟಕಕಾರ–ಹೀಗೆ ರಂಗ ಸಂಸ್ಕೃತಿಯ ವಿವಿಧ ಆಯಾಮಗಳ ಮೂಲಕ ಅಕ್ಷರಶಃ ಸ್ವಯಂ ಪ್ರತಿಭೆಯಿಂದಲೇ ರಂಗವೈಭವ ಮೆರೆದವರು. ಅಗಾಧ ಜ್ಞಾಪಕಶಕ್ತಿಯ ಅವರ ರಂಗ ನೆನಪುಗಳೆಂದರೆ ಸಮಗ್ರ ಕನ್ನಡ ರಂಗಭೂಮಿಯ ಜೀವಕೋಶದ ಅನಾವರಣ. ಅದು ವೃತ್ತಿ ಮತ್ತು ಹವ್ಯಾಸಿ ರಂಗಗಳ ಆನುಷಂಗಿಕ ಫಲವೂ ಹೌದು.

ಮಹಾಂತೇಶ ಶಾಸ್ತ್ರೀ, ಮಾಂಡ್ರೆ, ಧುತ್ತರಗಿ, ಕಂದಗಲ್ಲ, ಹೂಗಾರ, ಹಿರಣ್ಣಯ್ಯ, ಜೋಶಿ, ಓಬಳೇಶ್, ಅನಕೃ, ಕಟ್ಟೀಮನಿ... ಹೀಗೆ ವಿದ್ವಜ್ಜನರ ಅಪೂರ್ವ ಒಡನಾಟ. ಅದರಿಂದ ಅಪಾರ ರಂಗಜ್ಞಾನ ಸಂಪನ್ನತೆ ಪ್ರಾಪ್ತವಾದುದನ್ನು ಹೇಳುವಲ್ಲಿ ಫಕೀರಪ್ಪಗೆ ಉಲ್ಲಸಿತ ಉಮೇದು. ಕಂದಗಲ್ಲ ಹಣಮಂತರಾಯರ 'ರಕ್ತರಾತ್ರಿ' ನಾಟಕ ರೂಪುಗೊಂಡ ಕತೆಯನ್ನು ಫಕೀರಪ್ಪ ಹೇಳುತ್ತಿದ್ದರೆ, ವರ್ಣಮಯ ನಾಟಕವೊಂದನ್ನು ಕಣ್ತುಂಬಿಸಿಕೊಂಡ ಅನುಭವ. ಅವರ ನಿರೂಪಣಾ ಚಾತುರ್ಯ ಅನನ್ಯವಾದುದು. ಅಷ್ಟೇ ಯಾಕೆ ತನ್ನ ಹೆಸರಿನ 'ಫಕೀರ ಪ್ರಜ್ಞೆ' ಕುರಿತೇ ಸೊಗಸಾಗಿ ವಿವರಿಸುತ್ತಿದ್ದರು.

ರಂಗಭೂಮಿ ಎಂದರೆ ಪ್ರದರ್ಶನ ಮತ್ತು ನಟನೆ ಮಾತ್ರವಲ್ಲ, ಅದರಾಚೆಯ ಸಮಾಜಮುಖಿ ಸಜೀವ ಸತ್ಯಗಳ ಪ್ರಸ್ತುತಿ ಎಂಬುದನ್ನು ಪ್ರತಿಪಾದಿಸುತ್ತಿದ್ದ ರಂಗಜ್ಞಾನಿ ಫಕೀರಪ್ಪ. ಅಂತಹ ಕೆಲವು ಪ್ರಯೋಗಗಳನ್ನು ಬೆಂಗಳೂರು ಸೇರಿದಂತೆ ಇಳಕಲ್ ಮತ್ತಿತರೆ ಕಡೆ ಮಾಡಿದ್ದುಂಟು. ತನ್ನದೇ ರಚನೆಯ ಉಮರ ಖಯಾಮ್, ಅನುಭಾವಿ ಅಲ್ಲಮ, ಅಕ್ಬರ್ ಬೀರಬಲ್ ಮತ್ತಿತರ

ಫಕೀರಪ್ಪ

ರಂಗ ಪ್ರಯೋಗಗಳ ಮೂಲಕ ಗಂಭೀರ ವಿಶ್ಲೇಷಣೆಗೆ ತೊಡಗುತ್ತಿದ್ದರು. ಅವರೊಬ್ಬ ಪರಿಪಕ್ವ ರಂಗಕರ್ಮಿ. ಅವರ ರಂಗನಾಟಕಗಳು ಮತ್ತು ಅನುಭಾವಿಕ ವಿಚಾರಗಳನ್ನು ಗಮನಿಸುತ್ತಿದ್ದ ಯಜಮಾನ ಶ್ರೀಹರಿ ಖೋಡೆಯವರು ಫಕೀರಪ್ಪ ಅವರಿಗೆ ಗೌರವ ಸಂಭಾವನೆ ಕೊಟ್ಟು ವರುಷಾನುಗಟ್ಟಲೇ ತಮ್ಮ ಒಡನಾಟದ ಅನುಸಂಧಾನ ಹೊಂದಿದ್ದರೆಂದರೆ ಸುಮ್ಮನಲ್ಲ.

ಖೋಡೆಯವರು ಬೆಂಗಳೂರು ದೂರದರ್ಶನಕ್ಕಾಗಿ 'ಶಿಶುನಾಳ ಶರೀಫ' ಮೆಗಾ ಸೀರಿಯಲ್ ನಿರೂಪಿಸುವಾಗ ಫಕೀರಪ್ಪನವರ ಸಲಹೆಗಳು ಮುಖ್ಯವಾಗಿರುತ್ತಿದ್ದವು. ಖೋಡೆಯವರು ತೀರಿಹೋದ ತರುವಾಯ ಫಕೀರಪ್ಪ ಹುಟ್ಟೂರು ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ವರವಿಗೆ ಹೋಗಿ ನೆಲೆಸುತ್ತಾರೆ. ಕೋಮು ಸಾಮರಸ್ಯಕ್ಕೆ ಹೆಸರಾದ ವರವಿ ಭಾವೈಕ್ಯದ ನೆಲ. ಆ ಊರಿನಲ್ಲಿ ಫಕೀರಪ್ಪನವರ ಹೆಸರಿನ ರಂಗಮಂದಿರವಿದೆ. ವರವಿಗೆ ಆಗಮಿಸುವ ನಾಟಕ ಕಂಪನಿ ಕಲಾವಿದರಿಗೆ ಫಕೀರಪ್ಪನವರ ಮನೆಯಲ್ಲೇ ತಿಂಗಳುಗಟ್ಟಲೆ ಆತಿಥ್ಯ.

ಫಕೀರಪ್ಪ ಶಾಸ್ತ್ರಬದ್ಧ ಶಿಕ್ಷಣ ಪಡೆದವರಲ್ಲ. ನಾಟಕಗಳ ಚೋಪಡಿ (ಸ್ಕ್ರಿಪ್ಟ್) ಓದುವಷ್ಟು ಕಲಿತವರು. ಆದರೆ ಸಾಹಿತ್ಯದ ಓದಿನಲ್ಲಿ ಮಾತ್ರ ಅವರದು ಎತ್ತಿದ ಕೈ. ಕುಮಾರವ್ಯಾಸನಿಂದ ಕುವೆಂಪುವರೆಗೆ ಹಾಳತವಾದ ಅಧ್ಯಯನದ ಹರಹು. ಕಟ್ಟೀಮನಿ, ಅನಕೃ, ಕಾದಂಬರಿಗಳೆಂದರೆ ಪಂಚಪ್ರಾಣ. ಬೀಚಿಯವರ ಜತೆಗಿನ 'ಮದ್ಯರಾತ್ರಿ'ಗಳ ಸತ್ಸಂಗವು ಫಕೀರಪ್ಪಗೆ ನಾಟಕ ಕಂಪನಿಯಷ್ಟೇ ಗುಡ್ ಕಂಪನಿ. ಫಕೀರಪ್ಪ ನುಡಿಸುವ ಹಾರ್ಮೋನಿಯಂ, ತಬಲಾ, ಪಿಟೀಲು, ಹಾಡುವ ಕಂದಪದ್ಯಗಳು, ಇಂತಹ ಅನೇಕ ರೋಚಕದ ಕಥನಗಳಿವೆ. ಇದೆಲ್ಲವೂ ಅವರ ಆಪ್ತಮಿತ್ರ ಮತ್ತು ಹೆಸರಾಂತ ಕಲಾವಿದ ನಮ್ಮ ನಡುವಿನ ಶೃಂಗೇರಿ ರಾಮಣ್ಣನವರ ಸ್ನೇಹದ ಒಡಲು ತುಂಬಿಕೊಂಡಿವೆ. ಫಕೀರಣ್ಣ 'ರಂಗವಿದ್ವಾಂಸ'ನಾಗಿದ್ದರೆಂದೇ ಹೇಳುತ್ತಾರೆ ರಾಮಣ್ಣ.

ಸ್ಪಷ್ಟ ಮತ್ತು ಅಸ್ಖಲಿತ ಸಂಭಾಷಣೆಗಳ ಕಂಚಿನ ಕಂಠಕ್ಕೆ ಸಾವಿನ ಕಡೇ ಕ್ಷಣದವರೆಗೂ ಕಂಟಕ ಅನ್ನುವುದೇ ಇರಲಿಲ್ಲ. ಪಾತ್ರ ಯಾವುದೇ ಇರಲಿ ಅಲ್ಲಿ ಫಕೀರಪ್ಪ ಎಂಬ ರಂಗಛಾಪು ಇರಲೇಬೇಕು. ಅದರಲ್ಲೂ ಮಹಾಂತೇಶ ಶಾಸ್ತ್ರಿಗಳ ಎಲ್ಲಾ ನಾಟಕಗಳ ಎಲ್ಲಾ ಪಾತ್ರಗಳನ್ನು ಆವಾಹಿಸಿಕೊಂಡ ಹೆಗ್ಗಳಿಕೆ. 'ಕುಂಕುಮ'ದಂತಹ ಹೃನ್ಮನ ಮುಟ್ಟುವ ನಾಟಕದಲ್ಲಿ ಅಭಿನಯಿಸಿದ ಹೆಮ್ಮೆ ತನ್ನದೆಂದು ಹೇಳುತ್ತಿದ್ದರು. ಅಷ್ಟಕ್ಕೂ ಅವರು ವಿನೋದ ಪ್ರಜ್ಞೆಗೆ ಹೇಳಿ ಮಾಡಿಸಿದ ಹೆಸರು. ಅಷ್ಟೇನು ಎತ್ತರವಲ್ಲದ ಪುಟ್ಟ ಶರೀರ, ಗಟ್ಟಿಮುಟ್ಟಾದ ಶಾರೀರ. ಯಾವಾಗಲೂ ಶುಭ್ರ ಶ್ವೇತವರ್ಣದ ಧೋತರ, ಜುಬ್ಬಾ ಉಡುಪು. ಹಿಂದಕ್ಕೆ ಬಾಚಿದ ತಲೆಗೂದಲು. ತಲೆ ಇದ್ದರೆ ಸಾಕು ಬೈತಲೆ ಯಾತಕೆಂಬ ತರ್ಕದ ಮಾತು. ಕಣ್ಣುಗಳು ಮಂಜಾಗುವ ತನಕ ಓದಿನ ಹಂಬಲ ಹಿಂದಾಗಲಿಲ್ಲ.

ಕಣ್ಣು ಕಿವಿ ನಾಲಗೆಗಳ ಕುರಿತು ಇರಬೇಕಾದ ಕಟ್ಟೆಚ್ಚರದ ರಂಗಶಿಸ್ತು. ಪ್ರದರ್ಶನಕ್ಕೆ ಸಿದ್ಧಗೊಂಡ ರಂಗಪಠ್ಯ ಪರಿಷ್ಕಾರ ಮಾಡುವಲ್ಲಿ ಫಕೀರಪ್ಪ ನಿಷ್ಣಾತ. ವರ್ತಮಾನದ ಫುಲ್ ಕಾಮೆಡಿ ಟ್ಯಾಗ್ ಲೈನ್ ನಾಟಕಗಳ ಕುರಿತು ತೀವ್ರ ವಿಷಾದವಿತ್ತು. ಈಗಿನ ನಟಿಯರಿಗೂ ಆಗಿನ ಅಭಿನೇತ್ರಿಯರಿಗೂ, ಅಂದಿನ ವಿನೋದಕ್ಕೂ ಇಂದಿನ ಹಾಸ್ಯಕ್ಕೂ ಇರುವ ಫರಕುಗಳ ಕುರಿತು ವ್ಯಾಖ್ಯಾನ. ನರಸಿಂಹರಾಜು, ಧೀರೇಂದ್ರ ಗೋಪಾಲ, ದಿನೇಶ್, ಮಾಸ್ಟರ್ ಹಿರಣ್ಣಯ್ಯ ಜತೆಗಿನ ಮರೆಯಲಾಗದ ದ್ಯಾಸಗಳು. ವರನಟ ರಾಜಕುಮಾರ್ ಅವರ ಬನಶಂಕರಿ ಜಾತ್ರೆ ಕ್ಯಾಂಪ್ ನಾಟಕಗಳು, ಪೌರಾಣಿಕ ನಾಟಕಗಳು, ಮಧುರ ರಂಗಗೀತೆಗಳ ಸಂಗೀತಮಯ ನಾಟಕಗಳು. ಹೀಗೆ ಮನದ ತುಂಬಾ ಬನದಂತೆ ತುಂಬಿ ತುಳುಕುವ ರಂಗ ಪರಂಪರೆಗಳ ರಂಗವಲ್ಲಿ.

ಅರವತ್ತರ ದಶಕದ ಅಂತಿಮ ದಿನಗಳು. ಕಲಬುರ್ಗಿಯಲ್ಲಿ ತನ್ನ ರಂಗಗುರು ಓಬಳೇಶ ಕಂಪನಿ ಕ್ಯಾಂಪ್. ಖಾದಿಸೀರೆ, ಮುಂಡೇಮಗ ನಾಟಕಗಳ ಭರ್ಜರಿ ಭರಾಟೆ. ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ ಅವರಿ ಖಾಯಶ್ ಪಟ್ಟು ನಾಟಕ ನೋಡಿ, ಮೆಚ್ಚಿ ಬಂಗಾರದುಂಗರ ಉಡುಗೊರೆಯಾಗಿ ನೀಡುತ್ತಾರೆ. ಇಂತಹ ಹತ್ತಾರು ನೆನಪುಗಳು ಇನ್ನೂ ನಿನ್ನೆಯಷ್ಟೇ ಜರುಗಿದಷ್ಟು ತಾಜಾತನದ ಪ್ರಸ್ತುತಿ. ಅದು ಫಕೀರಪ್ಪ.

ಸುಳ್ಳದ ದೇಸಾಯರ ಕಂಪನಿ, ಸೂಡಿ ಶೆಟ್ಟರ್ ಕಂಪನಿ, ಗುಡಗೇರಿ ಕಂಪನಿ, ಗುಬ್ಬಿ ಕಂಪನಿ, ಓಬಳೇಶ್ ಕಂಪನಿ, ಹಿರಣ್ಣಯ್ಯ ಮಿತ್ರ ಮಂಡಳಿ ಹೀಗೆ ಅವರು ರಂಗಸೇವೆ ಮಾಡಿ ಪ್ರಮುಖ ನಾಟಕ ಮಂಡಳಿಗಳು. 1977ರಲ್ಲಿ 'ರಾಘವೇಂದ್ರ ವಿಜಯ ನಾಟ್ಯಸಂಘ'ಎಂಬ ಸ್ವಂತ ನಾಟಕ ಕಂಪನಿ ಸ್ಥಾಪಿಸಿ ಹತ್ತು ವರುಷಗಳಿಗೂ ಹೆಚ್ಚು ಕಾಲ ನಡೆಸುತ್ತಾರೆ. ವ್ಯವಹಾರ ಜ್ಞಾನದ ಕೊರತೆಯಿಂದಾಗಿ ನಿಂತು ಹೋಯಿತು. ಹವ್ಯಾಸಿ ರಂಗ ಚಟುವಟಿಕೆಗಳು ನಿತಾಂತವಾಗಿ ಮುನ್ನಡೆದವು. ಹುಬ್ಬಳ್ಳಿ ಸಿದ್ಧಾರೂಢ, ಕೊಪ್ಪಳ ಗವಿಸಿದ್ಧೇಶ್ವರ, ಕಲಬುರ್ಗಿ ಶರಣ ಬಸವೇಶ್ವರ ಎಂಬ ಮಹಾತ್ಮೆ ಹೆಸರಿನ ನಾಟಕಗಳು ಅವರಿಗೆ ಹೆಸರು ಮತ್ತು ಹಣ ತಂದು ಕೊಟ್ಟವು. ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಗುಬ್ಬಿ ವೀರಣ್ಣ ಪ್ರಶಸ್ತಿ ಸೇರಿದಂತೆ ಸಂಘ ಸಂಸ್ಥೆಗಳು ನೀಡಿದ ಹತ್ತಾರು ಪ್ರಶಸ್ತಿಗಳಿಗೆ ಭಾಜನರು.

ಪುಟ್ಟ ಕಲಾಕೃತಿಗಳ ದೊಡ್ಡ ಸಂದೇಶ

1ನೇ ಪುಟದಿಂದ...

ಹಲವು ಕಡೆ ಮಿನಿಯೇಚರ್‌ಗಳನ್ನು ಪ್ರದರ್ಶನ ಮಾಡಿದ್ದು, ಜನ ಇವುಗಳನ್ನು ನೋಡಿ ಬೆರಗಾಗಿದ್ದಾರೆ. ಅನೇಕ ಮಿನಿಯೇಚರ್‌ಗಳನ್ನು ಖರೀದಿಸಿದ್ದಾರೆ. ಮುಂದಿನ ದಿನಗಳಲ್ಲಿ ಈ ಕಲೆಯನ್ನು ಆಸಕ್ತರಿಗೆ ಕಲಿಸುವ ಯೋಜನೆಯನ್ನು ಶೈಲೇಂದ್ರ ಹೊಂದಿದ್ದಾರೆ.

ಮನುಷ್ಯನು ಸ್ವಾರ್ಥದಿಂದ ಕೈಗೊಳ್ಳುವ ವಿವಿಧ ಚಟುವಟಿಕೆಗಳಿಂದ ಪರಿಸರ ಹದಗೆಡುತ್ತಿದೆ. ಇದರ ದುಷ್ಪರಿಣಾಮವಾಗಿ ಪ್ರಾಣಿ, ಪಕ್ಷಿಗಳು ಅಸುನೀಗುತ್ತಿವೆ. ಅದೆಷ್ಟೋ ಪ್ರಾಣಿ, ಪಕ್ಷಿಗಳ ಪ್ರಭೇದಗಳು ಅಳಿದು ಹೋಗಿದ್ದರೆ, ಮತ್ತಷ್ಟು ಕೆಲವು ಪ್ರಭೇದಗಳು ಅಳಿದು ಹೋಗುವ ಅಂಚಿನಲ್ಲಿವೆ. ಇದು ಹೀಗೆಯೇ ಮುಂದುವರೆದರೆ ಪ್ರಾಣಿ ಪಕ್ಷಿಗಳನ್ನು ನಾವು ಇಂತಹ ಮಿನಿಯೇಚರ್‌ಗಳಲ್ಲಿಯೇ ನೋಡಬೇಕಾಗುತ್ತದೆ ಎಂಬುದು ಕಟುಸತ್ಯ.

ಸ್ಮಾರಕ

ಮಡಿದವರ ಸ್ಮಾರಕ...

1ನೇ ಪುಟದಿಂದ...

ಜೊತೆಗೆ ಪ್ರತಿಯೊಂದು ಕಡೆಯೂ ಕಾರ್ಮಿಕರ ಕೆಲಸದ ಗುರುತುಗಳಾಗಿ ಕರಣೆ, ಸುತ್ತಿಗೆ, ಪಿಕಾಸಿ, ವಿದ್ಯುತ್ ತಂತಿ ಮುಂತಾದವುಗಳನ್ನು ಕಲ್ಲಿನಲ್ಲಿಯೇ ಕೆತ್ತಿರುವುದು ಅರ್ಥಪೂರ್ಣ.

ಆದರೆ, ಈಗ ಸ್ಮಾರಕ ಇರುವ ಸ್ಥಳ ಹಾಳು ಸುರಿಯುತ್ತಿದೆ. ಇಲಾಖೆಯವರೇ ತ್ಯಾಜ್ಯ ಸುರಿಯುತ್ತಿದ್ದಾರೆ. ಇಲ್ಲಿ ಸೂಚನಾಫಲಕವೂ ಇಲ್ಲ. ಎಲ್ಲಿಂದ ಒಳಗೆ ಹೋಗಬೇಕೆಂದು ಹುಡುಕಬೇಕು. ಜಲಾಶಯ ನೋಡಲು ಬರುವ ಪ್ರವಾಸಿಗರಿಗೆ ಇಂತಹುದೊಂದು ಸ್ಮಾರಕ ಇರುವುದೇ ತಿಳಿದಿಲ್ಲ. ತಿಳಿಸುವ ಪ್ರಯತ್ನವನ್ನೂ ಯಾರೂ ಮಾಡುತ್ತಿಲ್ಲ.

ಮೂರು ರಾಜ್ಯ, ಹತ್ತಾರು ಜಿಲ್ಲೆಗಳು, ಲಕ್ಷಾಂತರ ಹೆಕ್ಟೇರ್ ಜಮೀನಿಗೆ ನೀರುಣಿಸುವ, ಕುಡಿಯುವ ನೀರು ಪೂರೈಸುವ, ಕಾರ್ಖಾನೆಗಳಿಗೆ ಆಸರೆಯಾಗಿರುವ ಜಲಾಶಯವನ್ನು ನಿರ್ಮಿಸುವಾಗ ಪ್ರಾಣ ತೆತ್ತ ಶ್ರಮಿಕರನ್ನು ಗೌರವದಿಂದ ಸ್ಮರಿಸಿ, ಅವರ ನೆನಪಿಗಾಗಿ ಕಟ್ಟಿರುವ ಸ್ಮಾರಕ ಸ್ಥಳಕ್ಕೆ ಕಾಯಕಲ್ಪಬೇಕಿದೆ.



ಶ್ರಮಿಕರ ಸ್ಮರಣೆ

ಮುನ್ನೋಟ 11-08-2024 ರಿಂದ 17-08-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಬಂಧುಗಳ ನಡುವೆ ಗೌರವ ಪಡೆಯಲು ಯತ್ನಿಸುವಿರಿ. ಆದಾಯವು ನಿಮ್ಮ ಅವಶ್ಯವನ್ನು ಪೂರೈಸುತ್ತದೆ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಉದರ ಸಂಬಂಧಿ ತೊಂದರೆಗಳು ನಿಮ್ಮನ್ನು ಕಾಡಬಹುದು. ನಿಮ್ಮ ಸಂಗಾತಿಯು ನಡೆಸುವ ವಿದ್ಯಾ ಕೇಂದ್ರಗಳಿಂದ ಹೆಚ್ಚು ಲಾಭವಿರುತ್ತದೆ. ಹಿರಿಯರಿಂದ ವ್ಯವಹಾರಗಳ ಬಗ್ಗೆ ಸಾಕಷ್ಟು ಸಲಹೆ, ಸೂಚನೆಗಳು ಬರುತ್ತವೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಬಂಧುಗಳ ನಡುವೆ ಗೌರವಕ್ಕೆ ಪಾತ್ರರಾಗುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಗುರು ಹಿರಿಯರಿಗೆ ಸಾಕಷ್ಟು ಗೌರವ ಕೊಡುವಿರಿ ಮತ್ತು ಗುರು ಹಿರಿಯರಿಂದ ಸ್ವಲ್ಪ ಪ್ರಶಂಸೆ ಸಿಗುತ್ತದೆ. ಮಧ್ಯವರ್ತಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಯಶಸ್ಸು ಕಡಿಮೆ ಇರುತ್ತದೆ. ಧಾರ್ಮಿಕ ವಿದ್ಯೆ ಕಲಿಯುತ್ತಿರುವರಿಗೆ ಹೆಚ್ಚಿನ ಯಶಸ್ಸು ಇರುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ಬುದ್ಧಿವಂತಿಕೆಯಿಂದ ಮಾತನಾಡುವಿರಿ. ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ಸರ್ಕಾರದಿಂದ ಬರಬೇಕಾದ ಹಣ ಈಗ ಬರುತ್ತದೆ. ಸರ್ಕಾರಿ ಅಧಿಕಾರಿಗಳಿಗೆ ಆದಾಯ ಹೆಚ್ಚುತ್ತದೆ. ಬಂಧುಗಳೊಂದಿಗೆ ವ್ಯವಹಾರ ಮಾಡುವಿರಿ. ಭೂಮಿ ಸಂಬಂಧಿತ ವ್ಯವಹಾರಗಳಲ್ಲಿ ಯಶಸ್ಸನ್ನು ಕಾಣುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಹಿರಿಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಆತ್ಮಗೌರವವು ಬಹಳ ಹೆಚ್ಚಾಗಿರುತ್ತದೆ. ಎಲ್ಲರೂ ನಿಮಗೆ ಬೆಲೆ ಕೊಡಬೇಕೆಂಬ ಮನೋಭಾವವಿರುತ್ತದೆ. ಆದಾಯ ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಬಂಧುಗಳಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿ ಬರಬಹುದು. ಕೃಷಿಯಿಂದ ಹೆಚ್ಚಿನ ಆದಾಯವನ್ನು ನಿರೀಕ್ಷೆ ಮಾಡಬಹುದು. ಭೂಮಿ ವ್ಯಾಪಾರ ಮಾಡುವವರಿಗೆ ಹೆಚ್ಚಿನ ವ್ಯವಹಾರವಿರುತ್ತದೆ. ಕ್ಷೀರೋತ್ಪನ್ನಗಳನ್ನು ಮಾರುವವರಿಗೆ ಲಾಭ ಹೆಚ್ಚುತ್ತದೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಹೆಚ್ಚು ವ್ಯವಹಾರಿಕ ಬುದ್ಧಿ ನಿಮ್ಮಲ್ಲಿ ಇರುತ್ತದೆ. ಆದಾಯವು ಕಡಿಮೆ ಇರುತ್ತದೆ. ಸೌಮ್ಯವಾಗಿ ಮಾತನಾಡುವುದು ಬಹಳ ಒಳ್ಳೆಯದು. ಸೋದರಿಯರ ಜೊತೆ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಬಂಧುಗಳ ಸಹಾಯದಿಂದ ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು. ರಾಜಕೀಯ ನಾಯಕರುಗಳಿಗೆ ಜನ ಸಂಪರ್ಕ ಹೆಚ್ಚುತ್ತದೆ. ವಿದೇಶಕ್ಕೆ ಹೋಗಬೇಕೆನ್ನುತ್ತಿರುವವರಿಗೆ ಸ್ವಲ್ಪ ಹಿನ್ನಡೆಯಾಗಬಹುದು.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಮನಸ್ಸನ್ನು ತಿಳಿಯಾಗಿ ಇಟ್ಟುಕೊಳ್ಳುವುದು ಉತ್ತಮ, ಕ್ಲೇಶಗಳನ್ನು ದೂರ ಮಾಡಿಕೊಳ್ಳಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಜನರ ಸಹಕಾರ ನಿಮ್ಮ ಕೆಲಸ ಕಾರ್ಯಗಳಿಗೆ ದೊರೆಯುತ್ತದೆ. ಆಸ್ತಿ ಸಂಬಂಧಿತ ವಿಷಯಗಳಲ್ಲಿ ಮೋಸ ಹೋಗುವ ಸಾಧ್ಯತೆಗಳಿವೆ. ಮಕ್ಕಳ ಓದಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗಬಹುದು. ವಾಯು ಪ್ರಕೋಪ ಕೆಲವರನ್ನು ಕಾಡಬಹುದು.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ವಾರದ ಆರಂಭ ಆನಂದದಾಯಕವಾಗಿರುತ್ತದೆ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ನಿಮ್ಮ ಹಿರಿಯರು ಮತ್ತು ಬಂಧುಗಳಿಂದ ನಿಮ್ಮ ಕೆಲಸ, ಕಾರ್ಯಗಳಿಗೆ ಪ್ರತಿರೋಧ ಬರುತ್ತದೆ. ಕೃಷಿಕರಿಗೆ ಉತ್ತಮ ಅಭಿವೃದ್ಧಿ ಇರುತ್ತದೆ. ಸಾಲಗಾರರಿಂದ ಕೆಲವರಿಗೆ ತೊಂದರೆ ಬರಬಹುದು. ಕೆಲವರಿಗೆ ಶತ್ರುಗಳ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಗುತ್ತದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ಆತ್ಮಸ್ಥೈರ್ಯ ಬಹಳ ಹೆಚ್ಚಾಗಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಚಾಣಾಕ್ಷತನದಿಂದ ಆದಾಯದ ಮೂಲಗಳನ್ನು ಹೆಚ್ಚು ಮಾಡಿಕೊಳ್ಳುವಿರಿ. ವೈರಿಗಳನ್ನು ಕಾದು ಸದೆಬಡಿಯುವ ತಂತ್ರ ನಿಮಗೆ ತಿಳಿದಿರುತ್ತದೆ. ಕೃಷಿಗೆ ಸ್ವಲ್ಪ ಅಭಿವೃದ್ಧಿ ಇರುತ್ತದೆ. ವಿದೇಶಿ ಭಾಷೆಗಳನ್ನು ಕಲಿಯುವವರಿಗೆ ಅನುಕೂಲವಿರುತ್ತದೆ. ಮಕ್ಕಳ ಬಗ್ಗೆ ಇಟ್ಟುಕೊಂಡಿದ್ದ ನಿರೀಕ್ಷೆ ಹುಸಿಯಾಗಬಹುದು.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ವಾರದ ಆರಂಭದಲ್ಲಿ ಸ್ವಲ್ಪ ಆಲಸೀತನವಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ರಾಜಕೀಯ ನಾಯಕರುಗಳಿಗೆ ಆದಾಯವಿರುತ್ತದೆ. ರಾಜಕೀಯ ನಾಯಕರುಗಳು ತಮ್ಮ ಗುಂಪುಗಳನ್ನು ಬಲಪಡಿಸಿಕೊಳ್ಳಬಹುದು. ವಿದೇಶಿ ವ್ಯವಹಾರಗಳಲ್ಲಿ ಹೆಚ್ಚು ಸಾಧನೆ ಮಾಡಬಹುದು. ಬಂಧುಗಳಿಂದ ನಿಮ್ಮ ಕೆಲವು ಕೆಲಸ ಕಾರ್ಯಗಳಿಗೆ ಸಹಕಾರ ದೊರೆಯುತ್ತದೆ. ಬಂಧುಗಳು ಹಣಕ್ಕಾಗಿ ಬರಬಹುದು ಎಚ್ಚರ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ರಾಜಕೀಯ ಪ್ರವೇಶ ಮಾಡಬೇಕೆನ್ನುವವರಿಗೆ ಉತ್ತಮ ಅನುಕೂಲವಿರುತ್ತದೆ. ನಿಮ್ಮ ಶ್ರಮದಿಂದ ಹೆಚ್ಚು ಸಂಪಾದನೆ ಮಾಡಿಕೊಳ್ಳುವಿರಿ. ಬಂಧುಗಳ ನಡುವೆ ಬಿಗುವಿನ ವಾತಾವರಣ ಇರಬಹುದು. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ. ಕೃಷಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲ ಇರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಪಾಲುದಾರಿಕೆ ಮತ್ತು ಶ್ರದ್ಧೆ ಬಹಳ ಮುಖ್ಯ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಹಿರಿಯರಿಗೆ ಹೆಚ್ಚು ಗೌರವ ದೊರೆಯುತ್ತದೆ. ವಿದೇಶದಲ್ಲಿರುವವರಿಗೆ ಸಂಪಾದನೆ ಹೆಚ್ಚುತ್ತದೆ. ರಾಜಕಾರಣಿಗಳು ಮಾತನಾಡುವಾಗ ಎಚ್ಚರವಾಗಿರಿ, ಇದು ನಿಮ್ಮನ್ನೇ ಸುತ್ತಿಕೊಳ್ಳಬಹುದು. ಕ್ರೀಡಾ ತರಬೇತುದಾರರಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ. ಕಣ್ಣಿನ ತೊಂದರೆ ಇರುವವರು ಎಚ್ಚರ ವಹಿಸಿ. ಹಿರಿಯರ ಜೊತೆ ವಿನಾಕಾರಣ ಕಲಹ ಬೇಡ. ಪುಸ್ತಕ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಅನವಶ್ಯ ಗೊಂದಲಗಳನ್ನು ಮಾಡಿಕೊಳ್ಳಬೇಡಿ. ನಿಮ್ಮ ಮಾತು ನಿಮ್ಮ ನಡವಳಿಕೆ ಮೇಲೆ ಪರಿಣಾಮ ಬೀರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಮೈಯೆಲ್ಲ ಕಣ್ಣಾಗಿರುವುದು ಒಳ್ಳೆಯದು. ಸರ್ಕಾರಿ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ. ಚರ್ಮರೋಗ ಅಥವಾ ಗುಪ್ತ ರೋಗಗಳಿರುವವರು ಹೆಚ್ಚು ಎಚ್ಚರ ವಹಿಸಿರಿ. ಕೆಲವೊಂದು ವಿಚಾರಗಳು ಬಂದಾಗ ಸಂಗಾತಿಯು ನಿಮ್ಮಿಂದ ವಿಮುಖರಾಗುವರು.

ಪದಬಂಧ 2854



ಮೇಲಿನಿಂದ ಕೆಳಕ್ಕೆ

1. ದಶರಥಾತ್ಮಜನ ನಾಮ ಪಲುಕುವ ಹಸಿರು ಹಕ್ಕಿ 4
2. ಅರಸಲು ಅನರ್ಹವಾದ ಜಲಪಾತ್ರದ ಉಗಮ 4
3. ಕುಳಿತುಕೊಳ್ಳಲು ಅಥವಾ ಓಲೈಸಲು ಪೀಠ ಹಾಸು 4
4. ಭೂಮಿಯ ಒಳಗಿರುವ ವಾಸಗೃಹ 4
7. ಇದು ಮೋಸದ ವಂಚನೆಯ ಶಬ್ಧ 5
8. ವೇದಕಾಲದಲ್ಲಿ ಮಾಡುತ್ತಿದ್ದ ಅಗ್ನಿ ಕಾರ್ಯಗಳು 5
9. ಒಳ್ಳೆಯದನ್ನು ಉಂಟು ಮಾಡುವ ಶಿವ ನೀಡುವ ಸಂತಸ 5
10. ಒಂದು ಸಂಸ್ಥೆಯನ್ನು ಹುಟ್ಟು ಹಾಕಿದ ದಿವಸ 5
14. ಯುವ ಕೇಂದ್ರದಲ್ಲಿ ಪರದೆ ಎಳೆಯುವ ಸಭಾಂಗಣ 4
15. ಸಂಸಾರವನ್ನು ಬಿಟ್ಟಿರುವ ಮುನಿಶ್ರೇಷ್ಠ 4
17. ಮನಸ್ಸಿಗೆ ಉಲ್ಲಾಸ ಕೊಡುವ ಲಕ್ಷ್ಮಿ 4
18. ಶತೃಸೈನ್ಯದ ಪತಾಕೆ 4

ಎಡದಿಂದ ಬಲಕ್ಕೆ

1. ನಮ್ಮ ನಾಡೆಲ್ಲ ತುಂಬಿರುವ ಬೆಟ್ಟ ಕಾಡು 4
3. ಮೆತ್ತನೆಯ ನಡಿಗೆಗೆ ಹೆಸರಾದ ಗಜದ ಕೂಸು 4
5. ನಿತ್ಯ ನಡೆಯುವ ಸಮಾರಂಭ 5
6. ದಿನ ನಿತ್ಯ ನಡೆಯುವ ಗೃಹ ಜಗಳ 5
9. ಕಟ್ಟಡ ನಿರ್ಮಾಣವಾಗುವ ಮುನ್ನ ಮಹನೀಯರು ಮಾಡುವ ಶಿಲಾನ್ಯಾಸ 5
11. ವ್ಯಸ್ಥಗೊಂಡ ಸ್ಥಳ ಬದಲಿ 3
12. ನಕಾರ ಮನಸ್ಸಿನಿಂದ ಮಾಡುವ ಕಿರಿಕಿರಿ, ಹಟ, ನಾಟಕ 3
13. ನಾಕದಿಂದಿಳಿದ ಮುಖಂಡ 3
14. ಅಷ್ಟಾಂಗ ಯೋಗದಲ್ಲಿ ಮೃತ್ಯು ದೇವತೆಯ ಕಟ್ಟಳೆ 5
16. ಮನಸ್ಸನ್ನು, ಮತ್ತೊಬ್ಬರನ್ನು ಹತ್ತಿಕ್ಕುವ ಪ್ರವೃತ್ತಿ 5
19. ಮದುವೆ ಗಂಡಿಗೆ ಮಾಡುವ ಮಹಾ ಸೇವೆ 5
20. ಚಿತ್ತಾರ ಕುಶಲದ ಗುರು ಶ್ರೇಷ್ಠ 4
21. ಮನಸ್ಸಿನ ಪ್ರೇರಣೆಯಿಂದ ಹುಟ್ಟಿ ಬಂದವ 4

ಪದಬಂಧ ಉತ್ತರ -2853

ಮೇಲಿಂದ ಕೆಳಕ್ಕೆ

1. ವಿದಾಯ 2.ವಿನೋದಹಾಸ 3.ತಪೋವನ 4.ಒಣಮೆಣಸು 5.ಪಿಸುಣತನ 10.ಪರಪು 11.ಕದನ 12.ಸುಮ್ಮನೆ 14.ನರ್ತನಗಾನ 15.ಗಗನಯಾತ್ರಿ 16.ನಿತ್ಯನೂತನ 17.ಸಾಂಸಾರಿಕ 20. ರುಸ್ತುಮ

ಎಡದಿಂದ ಬಲಕ್ಕೆ

1. ವಿಶ್ವವಿಖ್ಯಾತ 4.ಒಲಿಂಪಿಕ್ಸ್ 6.ಪೋಲುಹಣ 7.ಯಶೋದ 8.ಮೆಲ್ಲಣ 9.ಹಾಸನ 10.ಪನಸ 11.ಕನಸುನನಸು 13. ಪುನರಾಗಮನ 16.ನಿಶಾನೆ 17.ಸಾಂಗತ್ಯ 18.ನಯನ 19.ನೂರಾರು 21.ಯಾದಗಿರಿ22.ದಿನರಾತ್ರಿ 23.ಕಠಿನಕ್ರಮ

ಸುತ್ತಾಟ

ಮಳೆ ಎಂದರೆ ಪ್ರೀತಿ ಬದುಕು ಇತ್ಯಾದಿ...

ಮಳೆಯಲಿ...ಕ್ಯಾಮೆರಾ ಜೊತೆಯಲಿ...

ಬಿಸಿಲ ಬೇಗೆಯಲ್ಲಿ ಬಳಲಿದ ಜೀವರಾಶಿ ಮುಂಗಾರು ಮಳೆ ಜಿನುಗುವ ಹೊತ್ತಿಗೆ ಒಮ್ಮೆಲೆ ಜೀವ ತಳೆಯುವುದು ಅದ್ಭುತವೇ ಸರಿ. ಮೋಹಕ ಮುಂಗಾರು ಮಳೆಯಲ್ಲಿ ಕೇರಳದ ವಯನಾಡ್ ಸೇರಿದಂತೆ ಹಲವೆಡೆ ಸುತ್ತಾಡಿದ ಹವ್ಯಾಸಿ ಛಾಯಾಗ್ರಾಹಕಿ **ಸಬೀನಾ ಎ.** ಅವರು ಚಿತ್ರದ ಜೊತೆಗೆ ಕತೆಯನ್ನೂ ತಂದಿದ್ದಾರೆ.

ಮಳೆ ಹನಿಗಳ ಮೋಹದಲ್ಲಿ ಚಿಟ್ಟೆ

ಮುಂಗಾರು ಎಂಬ ಮನಮೋಹಕ ಮಳೆಯಲ್ಲಿ ಮಿಂದೇಳುವ ಸುಂದರ ಕ್ಷಣಗಳನ್ನು ಸೆರೆ ಹಿಡಿಯುವಲ್ಲಿ ಛಾಯಾಗ್ರಹಣ ಪ್ರಿಯರ ಅತ್ಯುತ್ಸಾಹ, ಶ್ರದ್ಧೆ, ನಿರಂತರ ಪ್ರಯತ್ನ, ಹರಸಾಹಸವೇ ವಿಶಿಷ್ಟ ಅನುಭವ.

ಒಮ್ಮೆ ಜಿಟಿಜಿಟಿ, ಒಮ್ಮೊಮ್ಮೆ ಧಾರಾಕಾರ ಮಳೆ, ಹಚ್ಚಹಸಿರು, ಮಲೆನಾಡ ಹಳ್ಳಿಯ ಮನೆಗಳ ಹೊಗೆಯಂತೆ ಆವರಿಸುವ ದಟ್ಟ ಮಂಜು, ಶುಭ್ರ ಡಾಂಬರು ರಸ್ತೆಗಳು, ಕಪ್ಪೆಗಳ ಸ್ವಿಮ್ಮಿಂಗ್ ಪೂಲ್‌ನಂತೆ ಕಾಣುವ ಕೆಸರು ಹಾದಿಗಳು-ಹೀಗೆ ಇಡೀ ಪ್ರಕೃತಿಯೇ ಉತ್ಸವ ಆಚರಿಸುವಂತೆ ಮಳೆ ಚೈತನ್ಯ ತುಂಬಿಸುತ್ತದೆ. ಈ ಸಂಭ್ರಮವನ್ನು ಸೆರೆ ಹಿಡಿಯಲು ಚಾತಕಪಕ್ಷಿಯಂತೆ ಕಾಯುವ ಮೊದಲ ಅತಿಥಿಗಳೇ ಛಾಯಾಗ್ರಾಹಕರೇನೋ...

ತನ್ನನ್ನು ಸೆರೆಹಿಡಿಯುವಂತೆ ನಮ್ಮ ಮೇಲೆ ಬೀಳಲು ಪ್ರಯತ್ನಿಸಿ, ಗಾಜಿನಿಂದ ಇಣುಕುವ ಮಳೆಹನಿಗಳು, ಈ ಹನಿಗಳನ್ನು ಅಲಂಕರಿಸುವ ಬಣ್ಣಬಣ್ಣದ ದೀಪಗಳ ಬೆಳಕು, ಅವುಗಳನ್ನು ಕಿಟಕಿ ಒಳಗಿನಿಂದ ಸವರುವ ಕೈಗಳು ಪ್ರೇಮಕಥೆಯಂತೆ ಅನುಭೂತಿ. ಮಳೆ ಎಂದರೆ ಪ್ರೀತಿ, ಮಳೆ ಎಂದರೆ ಬದುಕು, ಮಳೆಯೆಂದರೆ ಜೀವನೋತ್ಸಾಹ. ಈ ಜೀವನೋತ್ಸಾಹದೆಡೆ ಸಾಗಲು ಇರುವ ಸೇತುವೆಯೇ ಛಾಯಾಗ್ರಹಣ...

ಒಂದು ಫ್ರೇಮ್ ಒಳಗೆ ಚಿತ್ರಣ ಕಟ್ಟಿಕೊಡುವ ಸಲುವಾಗಿ ಕೆಲವೊಮ್ಮೆ ಮಳೆಯಲ್ಲಿ ಒದ್ದೆಮುದ್ದೆಯಾಗಿ, ಚಳಿಯಲ್ಲಿ ನಡುಗುತ್ತ, ಜಡಿಮಳೆಯಿಂದ ರಕ್ಷಣೆ ಮಾಡಿಕೊಳ್ಳುತ್ತ, ವಿಭಿನ್ನ ಭಂಗಿಯಲ್ಲಿ ಕ್ಯಾಮೆರಾ ಹಿಡಿದು ಕಾಯುವಿಕೆ, ಕೆಸರುಮಯ ಬಟ್ಟೆ, ಕುತೂಹಲದ ಇಂದ್ರಿಯಗಳು... ಅಬ್ಬಬ್ಬಾ ಇದೊಂದು ತಪಸ್ಸೇ ಸರಿ!.

ಜನಜಂಗುಳಿ ಪ್ರದೇಶಗಳಲ್ಲಿ, ವರ್ಣರಂಜಿತ ಬೆಳಕಿನಲ್ಲಿ ಮಳೆಯ ನಡುವೆ ಚಿತ್ರ ಕ್ಲಿಕ್ಕಿಸುವುದೆಂದರೆ ದೊಡ್ಡ ಸಂಭ್ರಮ. ಯಾವ ಗೊಡವೆಯೂ ಇಲ್ಲದೇ ಕ್ಯಾಮೆರಾ ಹಿಡಿದು ರಸ್ತೆಗಿಳಿದಾಗ ಅಪರಿಚಿತರೂ ಕುತೂಹಲದ ನಗೆಬೀರುವುದು ಕ್ಯಾಮೆರಾದ ಬಗ್ಗೆ ಮತ್ತಷ್ಟು ಆಪ್ತತೆ ಹೆಚ್ಚಿಸುತ್ತದೆ.

ಮಳೆಹನಿ ಬೀಳುವ ಪ್ರತಿ ಜಾಗವೂ ಕಲಾಕೃತಿಯೇ. ಮಳೆಹನಿಗಳು ತಾವು ಬಿದ್ದಲ್ಲೆಲ್ಲ ಪೋಸ್ ಕೊಡುವಂತೆ ಭಾಸವಾಗುತ್ತದೆ. ಆ ಹನಿಗಳಲ್ಲೂ ಕತೆ ಮೂಡಿಸುವ ಕ್ಷಣವನ್ನು ಸೆರೆ ಹಿಡಿಯುವ ಪ್ರಯತ್ನ ನಿರಂತರವಾದುದು. ಕೆಲವು ಚಿತ್ರಗಳು ರಾತ್ರಿಯಿಡೀ ನಿದ್ದೆಗೆಡಿಸುತ್ತವೆ, ಕೆಲವು ಕಾಡುತ್ತವೆ. ಈ ಚಿತ್ರಣದ ಹುಡುಕಾಟದ ಪಯಣದಲ್ಲಿ ಹಬೆಯಾಡುವ ಬಿಸಿ ಬಿಸಿ ಟೀ ಸಾಥ್ ನೀಡಿದರೆ ಇದೋ ಇನ್ನಷ್ಟು ಫ್ರೇಮುಗಳನ್ನು ಜತನದಿಂದ ಸೆರೆ ಹಿಡಿಯಲು ಅಣಿಯಾಗಬಹುದು..!



ಮಳೆ ಹನಿ ಪೋಣಿಸಿದ ಮುತ್ತಿನ ಮಾಲೆ

ಭೂಮಿಗೆ ಮಳೆ ಹನಿ ಬಿದ್ದಾಗ ಬಿಸಿ ಬಿಸಿ ಕಟ್ಟಂ ಚಾಯ್ ಸಾಥ್ ಕೊಟ್ಟರೆ ಮಜಾ...

ಮಜ ಮಜ ಮಜಕೂರ

• ಎಂ.ಎಸ್.ಪ್ರೂಜಾರ



ದಸ್ಗ ಚುಕ್ಕಿ ಶ್ರೇಷ್ಠ ಕಥೆಯ — ಕಪ್ಪು ಬಿಳುಪು

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ರಜೆ ಕಳೆಯಲು ಅಜ್ಜಿ ಮನೆಗೆ ಹೋಗಿದ್ದ. ಒಂದು ಮುಂಜಾನೆ ಅಜ್ಜಿ ಮನೆಯಲ್ಲಿದ್ದ ದನದ ಕೊಟ್ಟಿಗೆಗೆ ಹೋದ ಗುಂಡ ದನಕ್ಕೆ ಸ್ನಾನ ಮಾಡಿಸಲು ನಿರ್ಧರಿಸಿದ. ಒಂದು ಬಕೆಟ್‌ನಲ್ಲಿ ನೀರು, ಶಾಂಪು, ಬ್ರಷ್ ತಂದ. ದನದ ಮೈಗೆ ಶಾಂಪು ಹಾಕಿ ಉಜ್ಜತೊಡಗಿದ. ದನದ ಮೈಯಲ್ಲಿದ್ದ ಕೊಳೆ ಪೂರ್ತಿಯಾಗಿ ಹೋಗಲೆಂದು ತನ್ನ ಪೂರ್ತಿ ಶಕ್ತಿ ಹಾಕಿ ತಿಕ್ಕತೊಡಗಿದ. ಕೊನೆಗೆ ಕಪ್ಪು-ಬಿಳುಪು ಮೈಬಣ್ಣ ಹೊಂದಿದ್ದ ದನ ಪೂರ್ತಿಯಾಗಿ ಬಿಳಿ ಬಣ್ಣಕ್ಕೆ ತಿರುಗಿತು!

ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಹೋ	ಚು	ಮಾ	ನೀ
ಮಾ	ಪಾ	ಕೊ	ಕ
ಗು	ಕಾ	ಸ	ಬೆ

1

	ಟು	ಕು
	ಟು	ಕು

2

	ರ್ಮಿ	ಕ
	ರ್ಮಿ	ಕ

3

	ರಾ	ಟ
	ರಾ	ಟ

4

	ರ	ಜ
	ರ	ಜ

5

	ರ	ಗು
	ರ	ಗು

6

	ರ	ಣಿ
	ರ	ಣಿ

ಪದ ಶೋಧ

ಇಲ್ಲಿ ಕೊಟ್ಟಿರುವ ಪ್ರತಿ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಕರ್ನಾಟಕದ ಒಂದು ಜಲಾಶಯದ ಹೆಸರನ್ನು ಹುಡುಕಿ.

1.ನಿಜಲಿಂಗಪ್ಪ ....

2.ಪರಾಗಸ್ಪರ್ಶ ....

3.ಕಾಮನಬಿಲ್ಲು ....

4.ಜನುಮದಿನ ....

5.ಬೆಳ್ಳಕ್ಕಿಹಿಂಡು ....

ಮೋ ENGLISH ನ

ಇಲ್ಲಿ ಕೊಟ್ಟಿರುವ 'one' ಪದಕ್ಕೆ ಕೆಲವು ಅಕ್ಷರಗಳನ್ನು ಸೇರಿಸಿ, one ಒಳಗೊಂಡ ಕೆಲವು ಇಂಗ್ಲಿಷ್ ಪದಗಳನ್ನು ರಚಿಸಿ.

1			o	n	e
2		o	n	e	
3		o	n	e	
4		o	n	e	
5		o	n	e	
6		o	n	e	
7			o	n	e
8			o	n	e
9		o	n	e	
10		o	n	e	

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣಾಕಾರದಲ್ಲಿ 'ಪ್ರತಿಬಿಂಬ' ಗುಣಲಬ್ಧಗಳು

1. 82X99=8118
2. 91X11=1001
3. 28X99=2772
4. 37X33= 1221
5. 37X99=3663
6. 37X66=2442

ನೀವೇ ಗುಣಿಸಿ ನೋಡಿ

7. 55X99=
8. 64X66=
9. 91X33=
10. 91X99=

ವಿನೋದ ವಾಕ್ಯ

ಇಲ್ಲಿ ಕೊಟ್ಟಿರುವ ಪದಗಳಲ್ಲಿ ಕೆಲವು ವೃತ್ತಗಳಿವೆ. ಆ ವೃತ್ತದಲ್ಲಿ 'ದ'ಕಾರ ಬಳ್ಳಿಯ ಒಂದು ಅಕ್ಷರ ತುಂಬಿ ಓದಿದರೆ ವಾಕ್ಯಗಳು ಅರ್ಥಪೂರ್ಣವಾಗುತ್ತದೆ. ಯಾವ ವೃತ್ತಕ್ಕೆ ಯಾವ ಅಕ್ಷರ ಊಹಿಸಿ ಬರೆಯಿರಿ.

○ ಹಲಿಯ	○ ಲತ್ತಿನ	○ ರೆಯು
○ ಡಿನಲ್ಲಿ	○ ಡಿಯುವ	○ ನರಿಗೆ
○ ನಾಸಿಯಿಂದ	○ ವರ	○ ಯೆ
○ ರಕಿಸಲು	○ ಸೆಯನ್ನು	○ ರದ
○ ರಿಗುಂಟ	○ ನವೂ	○ ನಗೈಯುತ್ತಿದ್ದನು.

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಪದಗಳಿಗೆ ಸೂಕ್ತವಾದ ಒತ್ತಕ್ಷರ ಬರೆದು ಅರ್ಥಬದ್ಧ ಪದ ಮಾಡಿ.

ಕೇಶ	ಬಲ	ರಾಜ	ಹುಗಿ	ಮತ
ದಡ	ಬಣ	ಕತೆ	ಪಟ	ವಜ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಕೂರಿಗೆ-ಜೀರಿಗೆ 2.ಬವಣೆ-ನವಣೆ 3.ತೊಟ್ಟಿಲು-ಮೆಟ್ಟಿಲು 4.ಹುಡುಕು-ದುಡುಕು 5.ಚರಕ-ನರಕ 6.ಉಡಿಸು-ಬಡಿಸು

ಪದಶೋಧ: ಕೊಳಕುಮಂಡಲ

ಪದರಗಳೆ ಆಟ: 1.ಶಿರೂರ 2.ಕರಾರು 3.ಜರೂರ 4.ನೂರಾರು 5.ತೌರೂರು 6.ಪರಾರಿ 7.ಮುರಾರಿ 8.ಬೇರೂರು 9.ಊರೂರು 10.ಶರೀರ

ಗಣಿತದಲ್ಲಿ ಗರ್ದಿಗಮ್ಮತ್ತು:

1. 5-3/2 = 1   2. 6 + 4-9 = 1   3. 8-7X1 = 1

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಹರ್ಷಿತ್ ಜೆ.ವಿ.
ಬೆಂಗಳೂರು

ಚಂದನ್ ಕುಮಾರ ಯು.ಎಸ್., ದಾವಣಗೆರೆ

ಪೃಥ್ವಿ ಎನ್.
ತುಮಕೂರು

ಸಮೃದ್ಧಿ ಡಿ.
ಹಾಸನ

ಸಿದ್ಧಾರ್ಥ ಎ.ಎ.
ಹೊನ್ನಾಳಿ

ತೌಫೀಕ್
ಹಗರಿಬೊಮ್ಮನಹಳ್ಳಿ

ದಾನ ಪ್ರತಿಜ್ಞಾ ನೋಂದಣಿಯಲ್ಲಿ ಬಳ್ಳಾರಿ ಜಿಲ್ಲೆಗೆ ಪ್ರಥಮ ಸ್ಥಾನ

ಅಂಗಾಂಗಗಳಿಗೆ ಕಾಯುತ್ತಿವೆ ಜೀವಗಳು

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ರಾಜ್ಯದಾದ್ಯಂತ ಅಂತಿಮ ಹಂತದ ಅಂಗ ವೈಫಲ್ಯದಿಂದ ಬಳಲುತ್ತಿರುವ 8,552 ಜೀವಗಳು ಮೂತ್ರಪಿಂಡ, ಯಕೃತ್, ಹೃದಯ, ಶ್ವಾಸಕೋಶ ಸೇರಿ ವಿವಿಧ ಅಂಗಾಂಗಳಿಗೆ ಕಾಯುತ್ತಿವೆ.

ಮಾನವ ಅಂಗಗಳು ಮತ್ತು ಅಂಗಾಂಶಗಳ ಕೊರತೆಯು ದಿನೇ ದಿನೇ ಹೆಚ್ಚುತ್ತಿದ್ದು, ಕಾರ್ನಿಯಾ, ಹೃದಯ ಕವಾಟ, ಚರ್ಮ ಸೇರಿದಂತೆ ವಿವಿಧ ಅಂಗಾಂಶಗಳಿಗಾಗಿಯೂ ರೋಗಿಗಳು ಪರದಾಡುತ್ತಿದ್ದಾರೆ. ಸೂಕ್ತ ಸಮಯಕ್ಕೆ ಅಂಗಾಂಗಗಳು ದೊರಕದೇ ಅನೇಕರು ಸಾವಿಗೀಡಾಗುತ್ತಿದ್ದಾರೆ.

'ಒಬ್ಬ ದಾನಿ 8 ಜೀವಗಳನ್ನು ಉಳಿಸಬಹುದು. ಹೃದಯ, ಎರಡು ಮೂತ್ರಪಿಂಡಗಳು, ಪಿತ್ತಜನಕಾಂಗ, ಮೇದೋಜೀರಕ ಗ್ರಂಥಿ, ಸಣ್ಣ ಕರುಳು ಮತ್ತು ಶ್ವಾಸಕೋಶಗಳನ್ನು ದಾನ ಮಾಡ ಬಹುದು. ಅದೇ ದಾನಿಯ ಅಂಗಾಂಶಗಳಾದ ಚರ್ಮ, ಮೂಳೆ, ಅಸ್ಥಿರಜ್ಜು, ಹೃದಯ ಕವಾಟಗಳು ಮತ್ತು ಕಣ್ಣು ದಾನ ಮಾಡಿ 50ಕ್ಕೂ ಹೆಚ್ಚು ಜನರ ಜೀವನದಲ್ಲಿ ಬೆಳಕು ತರಬಹುದು' ಎನ್ನುತ್ತಾರೆ ವೈದ್ಯರು.

ಮುಖ್ಯಾಂಶಗಳು

- ಅಂಗಾಂಗ ದಾನ: ರಾಜ್ಯಕ್ಕೆ ಎರಡನೇ ಸ್ಥಾನ
- ಬಡವರಿಗೆ ಉಚಿತ ಅಂಗಾಂಗ ಕಸಿ ಸೌಲಭ್ಯ

5,945 ಮಂದಿಗೆ ಮೂತ್ರಪಿಂಡ ಸಮಸ್ಯೆ: ದೀರ್ಘಕಾಲದ ಮೂತ್ರಪಿಂಡ ಕಾಯಿಲೆಯು ಪ್ರತಿ 10 ಲಕ್ಷ ಮಂದಿ ಪೈಕಿ 800 ಮಂದಿಯಲ್ಲಿ ಕಂಡುಬಂದಿದ್ದು, ರಾಜ್ಯದಲ್ಲಿ ಪ್ರಸ್ತುತ 5,945 ಮಂದಿ ಈ ಗಂಭೀರ ಸಮಸ್ಯೆಯಿಂದ ಬಳಲುತ್ತಿದ್ದಾರೆ.

ಅಂಗಾಂಗಗಳಿಗೆ ಕಾಯುತ್ತಿರುವ ರೋಗಿಗಳ ಸಂಖ್ಯೆ

ಅಂಗಾಂಗ	ರೋಗಿಗಳು
ಮೂತ್ರಪಿಂಡ	5,945
ಯಕೃತ್	2,198
ಹೃದಯ	190
ಶ್ವಾಸಕೋಶ	79
ಹೃದಯ ಮತ್ತು ಶ್ವಾಸಕೋಶ	32
ಯಕೃತ್ ಮತ್ತು ಮೂತ್ರಪಿಂಡ	76
ಮೂತ್ರಪಿಂಡ ಮತ್ತು ಮೇದೋಜೀರಕಗ್ರಂಥಿ	30
ಹೃದಯ ಮತ್ತು ಮೂತ್ರಪಿಂಡ	02
ಒಟ್ಟು	8,552

ಅಂಗಾಂಗಗಳ ಕೊರತೆ ನೀಗಿಸಲು ರಾಜ್ಯ ಸರ್ಕಾರ ಬೆಂಗಳೂರಿನ ನಿಮ್ಹಾನ್ಸ್ ಸೇರಿದಂತೆ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮತ್ತು ಜಿಲ್ಲಾಸ್ಪತ್ರೆಗಳಲ್ಲಿ 26 'ಕಸಿ ಮಾಡದ ಮಾನವ ಅಂಗಗಳ ಮರುಪಡೆಯುವಿಕೆ ಕೇಂದ್ರ'ಗಳನ್ನು (NTHORC) ಸ್ಥಾಪಿಸಿದೆ. ಸುವರ್ಣ ಆರೋಗ್ಯ ಟ್ರಸ್ಟ್ ಅಡಿಯಲ್ಲಿ ಬಡರೋಗಿಗಳಿಗೆ ಉಚಿತ ಅಂಗಾಂಗ ಕಸಿ ಸೌಲಭ್ಯ ಕಲ್ಪಿಸಲಾಗಿದೆ.

ರಾಜ್ಯಕ್ಕೆ ಮೂರನೇ ಸ್ಥಾನ: ಕರ್ನಾಟಕದಲ್ಲಿ 22,210 ಅಂಗಾಂಗ ದಾನ ಪ್ರತಿಜ್ಞೆಗಳಾಗಿದ್ದು, ದೇಶದಲ್ಲೇ ರಾಜ್ಯ ಮೂರನೇ ಸ್ಥಾನದಲ್ಲಿದೆ. 4,565 ದಾನಿಗಳ ನೋಂದಣಿಯೊಂದಿಗೆ ಬಳ್ಳಾರಿ ಜಿಲ್ಲೆಯು ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ. ಧಾರವಾಡ (2542), ಕೋಲಾರ (1716), ಬೆಂಗಳೂರು ಗ್ರಾಮಾಂತರ (1503), ದಕ್ಷಿಣ ಕನ್ನಡ (1120) ಕ್ರಮವಾಗಿ 2ರಿಂದ 5ನೇ ಸ್ಥಾನದಲ್ಲಿವೆ. ಮಂಡ್ಯ ಜಿಲ್ಲೆಯಲ್ಲಿ 643 ಮಂದಿ ನೋಂದಾಯಿಸಿದ್ದಾರೆ.

ಆರೋಗ್ಯ ಇಲಾಖೆಯಡಿ, 'ರಾಜ್ಯ ಅಂಗ ಮತ್ತು ಅಂಗಾಂಶಗಳ ಕಸಿ ಸಂಸ್ಥೆ'ಯು (SOTTO) ಅಂಗಾಂಗ ದಾನವನ್ನು ಉತ್ತೇಜಿಸುತ್ತಾ, ಮಿದುಳು ನಿಷ್ಕ್ರಿಯಗೊಂಡ ದಾನಿಯಿಂದ ಪಡೆದ ಅಂಗಾಂಗಗಳ ಕಸಿಯನ್ನು ಸಂಯೋಜಿಸುತ್ತಿದೆ.

ಅಂಗಾಂಗ ದಾನ: ಕರ್ನಾಟಕಕ್ಕೆ ಪ್ರಶಸ್ತಿ

ರಾಜ್ಯದಲ್ಲಿ 2022ರಲ್ಲಿ 151 ಅಂಗಾಂಗ ದಾನ ಮತ್ತು 2023ರಲ್ಲಿ 178, 2024ರಲ್ಲಿ ಜುಲೈ ಅಂತ್ಯದವರೆಗೆ 88 ಅಂಗಾಂಗ ದಾನ ಪ್ರಕ್ರಿಯೆ ನಡೆದಿದ್ದು, ದೇಶದಲ್ಲೇ ಕರ್ನಾಟಕ ರಾಜ್ಯ 2ನೇ ಸ್ಥಾನದಲ್ಲಿದೆ. 2023ನೇ ಸಾಲಿನ ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (NOTTO) ವತಿಯಿಂದ 'ಎರಡನೇ ಅತ್ಯುತ್ತಮ ರಾಜ್ಯ' ಪ್ರಶಸ್ತಿ ಪಡೆದಿದೆ.

ಆರೋಗ್ಯ ಶಿಬಿರಗಳಲ್ಲಿ ಜನರಿಗೆ ಜಾಗೃತಿ ಮೂಡಿಸಿ, ಮೊಬೈಲ್‌ನಲ್ಲೇ ನೋಂದಣಿ ಮಾಡಿಸಿದೆವು. ಬಳ್ಳಾರಿ ಜಿಲ್ಲೆ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ
ಡಾ.ರಮೇಶಬಾಬು, ಡಿಎಚ್‌ಒ, ಬಳ್ಳಾರಿ

ಸಿರಿಗೆರೆ ಮಠ: ರಾಜಕೀಯ ಹಸ್ತಕ್ಷೇಪಕ್ಕೆ ಭಕ್ತರ ವಿರೋಧ

ಪ್ರಜಾವಾಣಿ ವಾರ್ತೆ

ಕೊಟ್ಟೂರು: ತರಳಬಾಳು ಮಠದ ಪೀಠಾಧಿಪತಿಯಾಗಿ ಶಿವಮೂರ್ತಿ ಶಿವಾಚಾರ್ಯರೇ ಮುಂದುವರಿಯಲಿ ಹಾಗೂ ಅವರು ತೆಗೆದುಕೊಳ್ಳುವ ನಿರ್ಣಯಗಳನ್ನು ನಾವು ಪ್ರಶ್ನಾತೀತವಾಗಿ ಒಪ್ಪಿಕೊಳ್ಳುವುದರ ಜೊತೆಯಲ್ಲಿ ಮಠಕ್ಕೆ ಸದಾ ಬೆಂಗಾವಲಾಗಿರುತ್ತೇವೆ ಎಂದು ಶ್ರೀ ಮರುಳಸಿದ್ದೇಶ್ವರ ಸಮಿತಿ ಅಧ್ಯಕ್ಷ ಯು. ಮರುಳಸಿದ್ದಪ್ಪ ಹೇಳಿದರು.

ತಾಲ್ಲೂಕಿನ ತೂಲಹಳ್ಳಿ ಗ್ರಾಮದಲ್ಲಿ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಶನಿವಾರ ನಡೆದ ಭಕ್ತರ ಸಭೆಯಲ್ಲಿ ಅವರು ಮಾತನಾಡಿದರು.

'ಸ್ವಾಮೀಜಿ ಹಾಗೂ ಮಠದ ಬಗ್ಗೆ ಸುಳ್ಳು ಆಪಾದನೆ ಮಾಡುತ್ತಿರುವವರು ಮಠದ ಸಹಕಾರದಿಂದ ಬೆಳೆದಿರುವುದನ್ನು ಮರೆತು ರೆಸಾರ್ಟ್‌ನಲ್ಲಿ ಸಭೆ ನಡೆಸಿ ಸಮಾಜವನ್ನು ಒಡೆಯುವವರ ವಿರುದ್ಧ ಗಟ್ಟಿಯಾದ ಪ್ರತಿರೋಧವನ್ನು ವ್ಯಕ್ತಪಡಿಸುತ್ತೇವೆ' ಎಂದರು.

'ಸಿರಿಗೆರೆ ಗ್ರಾಮಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ತರುವಲ್ಲಿ ಸ್ವಾಮೀಜಿಗಳ ಪಾತ್ರ ಮುಖ್ಯವಾಗಿದೆ. ಮಠದ ಆಶ್ರಯದಲ್ಲಿ ಸಾವಿರಾರು ಮಕ್ಕಳಿಗೆ ವಿದ್ಯಾದಾನ ನೀಡಿ ಸಮಾಜದ ಏಳಿಗೆಗೆ ಶ್ರಮಿಸುತ್ತಿದ್ದಾರೆ. ದೇಶ ವಿದೇಶಗಳಲ್ಲಿ ಭಾರತೀಯ ಸಂಸ್ಕೃತಿ ಬಿಂಬಿಸುವುದರ ಜೊತೆಯಲ್ಲಿ ನಾಡಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ' ಎಂದು ಹೇಳಿದರು.

'ರಾಜಕಾರಣಿಗಳ ವೈಯಕ್ತಿಕ ಹಿತಾಸಕ್ತಿಗಾಗಿ ಸ್ವಾಮೀಜಿ ವಿರುದ್ಧ ಆರೋಪ ಮಾಡುವುದು ಅಕ್ಷಮ್ಯ. ಅಂತಹವರನ್ನು ಮಠದಿಂದ ಕೂಡಲೇ ಬಹಿಷ್ಕರಿಸಬೇಕು. ಬೃಹನ್ಮಠದ ಉತ್ತರಾಧಿಕಾರತ್ವಕ್ಕೆ ಸಂಬಂಧಿಸಿದಂತೆ ಸ್ವಾಮೀಜಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಭಕ್ತ ಸಮುದಾಯ ಸದಾ ಬದ್ಧವಾಗಿರುತ್ತದೆ' ಎಂದು ಮರುಳಸಿದ್ದಪ್ಪ ಭರವಸೆ ನೀಡಿದರು.

ಮುಖಂಡರಾದ ಬಿ. ಸಿದ್ಧನಗೌಡ, ಟಿ.ಕೆ. ಕುಬೇರಗೌಡ, ಎಂ. ಶಾಂತನಗೌಡ, ಎಂ. ಪುಟ್ಟಪ್ಪ, ಕೆ. ಸುರೇಶ್, ಎಂ. ವೀರೇಶ್, ಜಿ.ಎಸ್. ಶಿವಯೋಗಿ ಇತರರು ಪಾಲ್ಗೊಂಡಿದ್ದರು.

ಕೊಟ್ಟೂರು ತಾಲ್ಲೂಕಿನ ತೂಲಹಳ್ಳಿ ಗ್ರಾಮದಲ್ಲಿ ಶನಿವಾರ ನಡೆದ ಸಭೆಯಲ್ಲಿ ಭಕ್ತರು ತರಳಬಾಳು ಶ್ರೀಗಳಿಗೆ ನೈತಿಕ ಬೆಂಬಲ ಸೂಚಿಸಿದರು – ಪ್ರಜಾವಾಣಿ ಚಿತ್ರ

ಶೆಡ್‌ಗೆ ನುಗ್ಗಿ ಮಹಿಳೆ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದ ಶೆಡ್‌ವೊಂದರಲ್ಲಿ ವಾಸವಾಗಿದ್ದ 30 ವರ್ಷದ ಮಹಿಳೆಯ ಮೇಲೆ ಅಪರಿಚಿತ ವ್ಯಕ್ತಿಯೊಬ್ಬ ಅತ್ಯಾಚಾರ ಎಸಗಿ ಪರಾರಿಯಾಗಿದ್ದು, ಶನಿವಾರ ಎಫ್‌ಐಆರ್ ದಾಖಲಾಗಿದೆ.

ನಿರ್ಮಾಣ ಹಂತದ ಕಟ್ಟಡದ ವಾಚ್‌ಮ್ಯಾನ್ ಆಗಿದ್ದ ಸಂತ್ರಸ್ತೆಯ ಗಂಡ, ಮೂವರು ಮಕ್ಕಳೊಂದಿಗೆ ಶೆಡ್‌ನಲ್ಲಿ ವಾಸವಾಗಿದ್ದರು. ಶುಕ್ರವಾರ ಸಂಜೆ ವಾಚ್‌ಮ್ಯಾನ್, ಅಕ್ಕಿ ತರಲು ತನ್ನ ಮಕ್ಕಳೊಂದಿಗೆ ಮಾರ್ಕೆಟ್‌ಗೆ ಹೋಗಿದ್ದರು. ಅದೇ ವೇಳೆ ಕಟ್ಟಡದ ಮುಂದೆ ಚಹಾ ಮಾರುತ್ತಿದ್ದ 60 ವರ್ಷ ಆಸುಪಾಸಿನ ವ್ಯಕ್ತಿ, ಮಹಿಳೆ ಇದ್ದ ಶೆಡ್‌ಗೆ ನುಗ್ಗಿದ್ದಾನೆ. ಆಕೆಯನ್ನು ಎಳೆದಾಡಿ ಅತ್ಯಾಚಾರ ಎಸಗಿ, ಜೀವ ಬೆದರಿಕೆ ಹಾಕಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಕ್ಕಳ ತಟ್ಟೆಯಿಂದ ಮೊಟ್ಟೆ ಕಸಿದ ಆರೋಪ: ಇಬ್ಬರು ಅಮಾನತು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲೆಯ ಕಾರಟಗಿ ತಾಲ್ಲೂಕಿನ ಗುಂಡೂರು ಗ್ರಾಮದ ಅಂಗನವಾಡಿ ಕೇಂದ್ರ 2ರಲ್ಲಿ ಮಕ್ಕಳ ತಟ್ಟೆಗೆ ಮೊಟ್ಟೆ ಹಾಕಿ ಬಳಿಕ ವಾಪಸ್ ಕಸಿದುಕೊಂಡ ಆರೋಪದ ಮೇಲೆ ಅಲ್ಲಿನ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯನ್ನು ಗೌರವಧನ ಸೇವೆಯಿಂದ ಅಮಾನತು ಮಾಡಲಾಗಿದೆ.

'ಕ್ಷೇತ್ರ ವ್ಯಾಪ್ತಿಯ ಕನಕಗಿರಿ ವಲಯದ ಸಿಡಿಪಿಒ ವಿರೂಪಾಕ್ಷಿ ಅವರನ್ನೂ ಅಮಾನತು ಮಾಡಿ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಸೂಚಿಸಿದ್ದಾರೆ.

ಮಧ್ಯಾಹ್ನದ ಊಟಕ್ಕೆ ಕುಳಿತಿದ್ದ ಮಕ್ಕಳ ತಟ್ಟೆಗೆ ಅಂಗನವಾಡಿ ಸಹಾಯಕಿ ಮೊದಲು ಮೊಟ್ಟೆ ಹಾಕಿದರು. ಮಕ್ಕಳು ಅದನ್ನು ಬಾಯಲ್ಲಿ ಇಟ್ಟುಕೊಳ್ಳುವ ವೇಳೆಗೆ ಅದನ್ನು ಕಸಿದುಕೊಂಡು ತಟ್ಟೆಯಿಂದಲೇ ತೆಗೆದು ಹಾಕಿದ ವಿಡಿಯೊ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿದೆ.

ಸಿಬ್ಬಂದಿಯ ಈ ಕಾರ್ಯವೈಖರಿಗೆ ವ್ಯಾಪಕ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ತಿಪ್ಪಣ್ಣ ಸಿರಸಗಿ ಅಂಗನವಾಡಿ ಕಾರ್ಯಕರ್ತೆ ಲಕ್ಷ್ಮೀ ಜೆ., ಸಹಾಯಕಿ ಶೈನಾಜ್ ಬೇಗಂ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

'ಗುಂಡೂರಿನ ಅಂಗನವಾಡಿ ಕೇಂದ್ರಕ್ಕೆ ಪೂರೈಕೆಯಾಗಿರುವ ಮೊಟ್ಟೆಯನ್ನು ಮಕ್ಕಳ ತಟ್ಟೆಗೆ ಹಾಕಿ ಬಳಿಕ ವಾಪಸ್ ಪಡೆದು ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ. ಇಲಾಖೆಯ ಜಿಲ್ಲೆಯ ಡಿ.ಡಿ. ತಿಪ್ಪಣ್ಣ ಅವರಿಗೂ ನೋಟಿಸ್ ಜಾರಿ ಮಾಡುವಂತೆ ಸಚಿವೆ ಸೂಚಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಅಂಗನವಾಡಿ ಕಾರ್ಯಕರ್ತೆ ಲಕ್ಷ್ಮಿ ಜೆ, 'ಮಕ್ಕಳಿಗೆ ನೀಡಲಾಗಿದ್ದ ಮೊಟ್ಟೆ ಕೊಳೆತಿದ್ದವು. ಆದ್ದರಿಂದ ವಾಪಸ್ ಪಡೆದು ಬೇರೆ ಮೊಟ್ಟೆ ತಂದು, ಮಕ್ಕಳ ಜೊತೆ ಮನೆಗೆ ಕೊಟ್ಟು ಕಳುಹಿಸಲಾಗಿದೆ. ವಾಸ್ತವದಲ್ಲಿ ಆಗಿದ್ದು ಇಷ್ಟೇ. ಮಕ್ಕಳ ತಟ್ಟೆಯಲ್ಲಿ ಮೊಟ್ಟೆ ಕಸಿಯುವಷ್ಟು ಕ್ರೂರತೆ ನನಗಿಲ್ಲ' ಎಂದು ತಿಳಿಸಿದ್ದಾರೆ.

ದೋಸೆ ತಿಂದು 18 ವಿದ್ಯಾರ್ಥಿಗಳು ಅಸ್ವಸ್ಥ ಪ್ರಕರಣ

ಅಡುಗೆ ಸಿಬ್ಬಂದಿ ಅಮಾನತು

ಪ್ರಜಾವಾಣಿ ವಾರ್ತೆ

ಕೋಲಾರ: ತಾಲ್ಲೂಕಿನ ವೇಮಗಲ್ ಹೋಬಳಿಯ ಅಮ್ಮನಲ್ಲೂರು ಗ್ರಾಮದಲ್ಲಿರುವ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ದೋಸೆ ತಿಂದು 18 ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದ ಪ್ರಕರಣಕ್ಕೆ ಸಂಬಂಧಿಸಿ ಅಡುಗೆ ಸಿಬ್ಬಂದಿ ನರಸಿಂಹಪ್ಪ ಅವರನ್ನು ಅಮಾನತು ಮಾಡಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ಆಯುಕ್ತ ರಾಕೇಶ್ ಕುಮಾರ್ ಶನಿವಾರ ಈ ಕ್ರಮ ವಹಿಸಿದ್ದಾರೆ. 'ಪ್ರಜಾವಾಣಿ'ಯಲ್ಲಿ ಆಗಸ್ಟ್ 10ರಂದು ಪ್ರಕಟವಾಗಿದ್ದ 'ದೋಸೆ ತಿಂದು 18 ಮಕ್ಕಳು ಅಸ್ವಸ್ಥ' ವರದಿಯನ್ನು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ನರಸಿಂಹಪ್ಪ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದ್ದು, ಇಲಾಖಾ ವಿಚಾರಣೆ ನಡೆಸುವಂತೆ ಸೂಚನೆ ನೀಡಿದ್ದಾರೆ. ಘಟನೆ ಕುರಿತು ಆಯುಕ್ತರಿಗೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಎಂ.ಶ್ರೀನಿವಾಸನ್ ಪತ್ರ ಬರೆದಿದ್ದರು.

'ಹಾಸ್ಟೆಲ್‌ನ ವಾರ್ಡನ್ ಗುರುಶಾಂತಪ್ಪ ರಜೆ ಮೇಲೆ ತೆರಳಿದ್ದಾರೆ. ಅಡುಗೆ ಸಿಬ್ಬಂದಿ ನರಸಿಂಹಪ್ಪ ಅವರೇ ನಿರ್ವಹಣೆ ಜವಾಬ್ದಾರಿ ವಹಿಸಿಕೊಂಡಿರುವುದು ಕಂಡುಬಂದಿದೆ. ಹಾಸ್ಟೆಲ್‌ನಲ್ಲಿ ಸ್ವಚ್ಛತೆ ಕಾಪಾಡಿಲ್ಲ. ವಿದ್ಯಾರ್ಥಿಗಳನ್ನು ನಿಂದಿಸುವುದು, ಹೊಡೆಯುವುದು ಕಂಡು ಬಂದಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಹಾಸ್ಟೆಲ್‌ನಲ್ಲಿ ಶುಕ್ರವಾರ ಬೆಳಿಗ್ಗೆ ದೋಸೆ ಚಟ್ನಿ ತಿಂದ ಐವರು ವಾಂತಿ ಮಾಡಿಕೊಂಡಿದ್ದರು. ಇನ್ನು ಕೆಲವರು ಹೊಟ್ಟೆ ನೋವಿನಿಂದ ಬಳಲಿದ್ದರು. ವಾಂತಿ ಮಾಡಿಕೊಂಡ ಐವರನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಸಾರ್ವಜನಿಕ ಆಸ್ಪತ್ರೆ ಹಾಗೂ ಉಳಿದ 13 ಮಂದಿಯನ್ನು ಅಮ್ಮನಲ್ಲೂರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತು. ಎರಡು ದಿನಗಳ ಹಿಂದಿನ ಅನ್ನವನ್ನು ದೋಸೆ ಹಿಟ್ಟಿಗೆ ಬೆರೆಸಿದ್ದರು ಎಂದು ಮಕ್ಕಳು ದೂರಿದ್ದರು.

ಚಿಂತಾಮಣಿಯ ಆಸ್ಪತ್ರೆಯಲ್ಲಿ ಮಕ್ಕಳಿಗೆ ಶನಿವಾರವೂ ಚಿಕಿತ್ಸೆ ನೀಡಿದ್ದು, ಕೋಲಾರ ಶಾಸಕ ಕೊತ್ತೂರು ಮಂಜುನಾಥ್ ಅಲ್ಲಿಗೆ ತೆರಳಿ ಮಕ್ಕಳ ಆರೋಗ್ಯ ವಿಚಾರಿಸಿದರು. ಸಂಜೆ ವೇಳೆ ಮಕ್ಕಳು ಚೇತರಿಸಿಕೊಂಡು ಮನೆಗೆ ತೆರಳಿದರು. ಶಾಸಕರು ಹಾಸ್ಟೆಲ್‌ಗೆ ತೆರಳಿ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

ಅಮ್ಮನಲ್ಲೂರಿನ ಸರ್ಕಾರಿ ಹಾಸ್ಟೆಲ್‌ಗೆ ಶನಿವಾರ ಸಮಾಜ ಕಲ್ಯಾಣ ಇಲಾಖೆ ಕೇಂದ್ರ ಕಚೇರಿಯ ಜಂಟಿ ನಿರ್ದೇಶಕ ದೇವರಾಜ್ ಹಾಗೂ ಜಿಲ್ಲೆಯ ಜಂಟಿ ನಿರ್ದೇಶಕ ಎಂ.ಶ್ರೀನಿವಾಸನ್ ಭೇಟಿ ನೀಡಿ ಮಕ್ಕಳೊಂದಿಗೆ ಮಾತುಕತೆ ನಡೆಸಿದರು

ಸಹಾಯಕ ನಿರ್ದೇಶಕರಿಗೆ ನೋಟಿಸ್

ವರದಿ ಪರಿಣಾಮ

ಸಮಾಜ ಕಲ್ಯಾಣ ಇಲಾಖೆ ಕೋಲಾರ ತಾಲ್ಲೂಕಿನ ಸಹಾಯಕ ನಿರ್ದೇಶಕ ಡಿ.ಚನ್ನಬಸಪ್ಪ ಅವರಿಗೆ ನೋಟಿಸ್ ನೀಡಲಾಗಿದೆ. ಕರ್ತವ್ಯ ಲೋಪವೆಸಗಿದ್ದು, ತಮ್ಮ ಮೇಲೆ ಏಕೆ ಶಿಸ್ತು ಕ್ರಮ ವಹಿಸಬಾರದೆಂದು 15 ದಿನಗಳೊಳಗೆ ಸಮಜಾಯಿಷಿ ನೀಡುವಂತೆ ಇಲಾಖೆ ಆಯುಕ್ತರು ಸೂಚಿಸಿದ್ದಾರೆ. ಈ ಸಂಬಂಧವೂ 'ಪ್ರಜಾವಾಣಿ' ವರದಿ ಉಲ್ಲೇಖಿಸಿದ್ದಾರೆ.

ವಯನಾಡ್: ನೆರವಿಗೆ ಮನವಿ

ಬೆಂಗಳೂರು: ಭೂಕುಸಿತದಿಂದ ನಲುಗಿರುವ ಕೇರಳದ ವಯನಾಡ್ ಜನರಿಗೆ ರಾಜ್ಯದ ಕೈಗಾರಿಕೋದ್ಯಮಿಗಳು ಸಹಾಯ ಹಸ್ತ ಚಾಚಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮನವಿ ಮಾಡಿದ್ದಾರೆ.

ವಯನಾಡ್ ದುರಂತದಲ್ಲಿ 412 ಮಂದಿ ಜೀವ ಕಳೆದುಕೊಂಡಿದ್ದು, ಇನ್ನೂ 138 ಜನ ಕಣ್ಮರೆ ಆಗಿದ್ದಾರೆ. ಇಂತಹ ಸಂದರ್ಭದಲ್ಲಿ ಉದ್ಯಮ ಲೋಕವು ಮಾನವೀಯತೆಯನ್ನು ಎತ್ತಿ ಹಿಡಿಯಬೇಕಾಗಿದೆ. ಸಂತ್ರಸ್ತರಿಗೆ ಪುನರ್ವಸತಿ, ಅಗತ್ಯ ವಸ್ತುಗಳ ಪೂರೈಕೆ, ಮನೆಗಳ ಪುನರ್ ನಿರ್ಮಾಣ, ಮೂಲಸೌಕರ್ಯ, ಜೀವನೋಪಾಯಕ್ಕೆ ನೆರವು, ವೈದ್ಯಕೀಯ ನೆರವು ಹೀಗೆ ಯಾವ ರೂಪದಲ್ಲಾದರೂ ಉದ್ಯಮಿಗಳು ಸಹಾಯ ಮಾಡಬಹುದು ಎಂದು ಸಚಿವರು ತಿಳಿಸಿದ್ದಾರೆ.

ಕೇರಳ ರಾಜ್ಯಕ್ಕೆ ನೆರವು ನೀಡಲು ಕರ್ನಾಟಕ ಸರ್ಕಾರ ಬದ್ಧವಾಗಿದ್ದು, ನೆರವು ನೀಡಲು ಬಯಸುವ ಉದ್ಯಮಿಗಳು ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ ಅವರನ್ನು ದೂರವಾಣಿ ಸಂಖ್ಯೆ 080-22386796 ಅಥವಾ officeofdicommissioner@gmail.com ಮೂಲಕ ಸಂಪರ್ಕಿಸಬಹುದು ಎಂದೂ ಅವರು ಹೇಳಿದ್ದಾರೆ.

13ಕ್ಕೆ ಇವಿಎಂ ಉಗ್ರಾಣ ಬಾಗಿಲು ತೆರೆಯಲು ಜಿಲ್ಲಾಡಳಿತ ಸಿದ್ಧತೆ

ಪ್ರಜಾವಾಣಿ ವಾರ್ತೆ

ಕೋಲಾರ: ಮಾಲೂರು ವಿಧಾನಸಭಾ ಕ್ಷೇತ್ರದ ಚುನಾವಣೆ ಫಲಿತಾಂಶದ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ಕೇಳಿರುವ ದಾಖಲೆ ಸಲ್ಲಿಸಲು ಆಗಸ್ಟ್ 13ರಂದು ಇವಿಎಂ ಉಗ್ರಾಣದ ಬಾಗಿಲು ತೆರೆಯಲು ಜಿಲ್ಲಾಡಳಿತ ಸಿದ್ಧತೆ ನಡೆಸಿದೆ.

ಜಿಲ್ಲಾಧಿಕಾರಿ ಕಚೇರಿಯ ಸಂಕೀರ್ಣದಲ್ಲಿರುವ ಇವಿಎಂ ಉಗ್ರಾಣದ ಬಾಗಿಲು ತೆರೆಯಲು ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿ ಅನುಮತಿ ನೀಡಿದ್ದಾರೆ.

ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಸಮ್ಮುಖದಲ್ಲಿ ಮಂಗಳವಾರ ಮಾಲೂರು ಕ್ಷೇತ್ರಕ್ಕೆ ಸಂಬಂಧಿಸಿದ ಭದ್ರತಾ ಕೊಠಡಿ ತೆರೆಯಲಾಗುವುದು. ಮತಎಣಿಕೆ ಸಂದರ್ಭದಲ್ಲಿ ಸಂಗ್ರಹಿಸಿಟ್ಟಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಅಕ್ರಂ ಪಾಷಾ 'ಪ್ರಜಾವಾಣಿ'ಗೆ ತಿಳಿಸಿದರು.

ಅಂದು ಸ್ಥಳದಲ್ಲಿ ಹಾಜರಿರುವಂತೆ ಬಿಜೆಪಿ, ಕಾಂಗ್ರೆಸ್, ಬಿಎಸ್‌ಪಿ, ಸಿಪಿಎಂ, ಆಮ್ ಆದ್ಮಿ ಪಾರ್ಟಿ, ಜೆಡಿಎಸ್ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರು, ಕಾರ್ಯದರ್ಶಿಗಳಿಗೆ ಈಗಾಗಲೇ ಜಿಲ್ಲಾಧಿಕಾರಿ ಪತ್ರ ಬರೆದಿದ್ದಾರೆ.

2023ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಕೆ.ವೈ.ನಂಜೇಗೌಡ 50,955 ಮತ ಹಾಗೂ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಕೆ.ಎಸ್. ಮಂಜುನಾಥ್ ಗೌಡ 50,707 ಮತ ಗಳಿಸಿದ್ದರು. ನಂಜೇಗೌಡ ಕೇವಲ 248 ಮತಗಳಿಂದ ಗೆದ್ದಿದ್ದರು. ಮರು ಮತ ಎಣಿಕೆ ಕೋರಿ ಪರಾಜಿತ ಅಭ್ಯರ್ಥಿ ಮಂಜುನಾಥ್ ಗೌಡ ಕೋರ್ಟ್ ಮೆಟ್ಟಿಲೇರಿದ್ದರು. ಈ ಪ್ರಕರಣದ ವಿಚಾರಣೆ ಈಗ ನಡೆಯುತ್ತಿದೆ.

20 ಎಕರೆ ಅರಣ್ಯ ಒತ್ತುವರಿ ತೆರವು

ಚಿಕ್ಕಮಗಳೂರು: ತಾಲ್ಲೂಕಿನ ಮತ್ತಾವರ ಮೀಸಲು ಅರಣ್ಯದಲ್ಲಿ ಅತಿಕ್ರಮಣ ಮಾಡಿ ಕಾಫಿ ತೋಟ ಮಾಡಿದ್ದ 20 ಎಕರೆ ಒತ್ತುವರಿಯನ್ನು ಅರಣ್ಯ ಇಲಾಖೆ ಶನಿವಾರ ತೆರವುಗೊಳಿಸಿದೆ.

ವಸ್ತಾರೆ ಗ್ರಾಮದ ಸರ್ವೆ ನಂಬರ್ 369ರಲ್ಲಿ ಹಲವರು ಒತ್ತುವರಿ ಮಾಡಿ ಕಾಫಿ ಗಿಡಗಳನ್ನು ನೆಟ್ಟಿದ್ದರು. ಒತ್ತುವರಿ ಗುರುತು ಮಾಡಿದ್ದ ಅಧಿಕಾರಿಗಳು ಪೊಲೀಸರ ನೆರವಿನೊಂದಿಗೆ ಶನಿವಾರ ತೆರವು ಮಾಡಿದರು. ಅರಣ್ಯ ಜಾಗದಲ್ಲಿದ್ದ ಕಾಫಿ ಗಿಡಗಳನ್ನು ಕತ್ತರಿಸಿ ಅರಣ್ಯ ಭೂಮಿಯನ್ನು ವಶಕ್ಕೆ ಪಡೆಯಲಾಗಿದೆ.

75 ನರ್ಸಿಂಗ್ ಕಾಲೇಜುಗಳಿಗೆ ಪ್ರವೇಶ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗತ್ಯ ಬೋಧಕ ಸಿಬ್ಬಂದಿ, ಮೂಲಸೌಕರ್ಯ ಕೊರತೆ ಇರುವ 75 ಖಾಸಗಿ ನರ್ಸಿಂಗ್ ಕಾಲೇಜುಗಳು ವಿದ್ಯಾರ್ಥಿಗಳಿಗೆ ಪ್ರಸಕ್ತ ವರ್ಷ ಪ್ರವೇಶ ನೀಡಬಾರದು ಎಂದು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸೂಚಿಸಿದೆ.

ಭಾರತೀಯ ನರ್ಸಿಂಗ್ ಪರಿಷತ್ತಿನ ಮಾರ್ಗಸೂಚಿ ಅನುಸರಿಸದ ಬೆಂಗಳೂರಿನ 32, ಮೈಸೂರು, ಮಂಗಳೂರು, ಕಲಬುರಗಿ ಜಿಲ್ಲೆಗಳ ಒಟ್ಟು 43 ಕಾಲೇಜುಗಳಿಗೆ 2024–25ನೇ ಸಾಲಿನ ಪ್ರವೇಶ ನೀಡಬಾರದು ಎಂದು ವಿಶ್ವವಿದ್ಯಾಲಯದ ಕುಲಸಚಿವರು ಪತ್ರ ಬರೆದಿದ್ದಾರೆ.

'ನರ್ಸಿಂಗ್ ಕಾಲೇಜುಗಳು 100 ಹಾಸಿಗೆಗಳ ಆಸ್ಪತ್ರೆ, 100 ವಿದ್ಯಾರ್ಥಿಗಳಿಗೆ ಅಗತ್ಯವಾದ ಬೋಧಕ ಸಿಬ್ಬಂದಿ ಹೊಂದಿರಬೇಕು. ಸುಸಜ್ಜಿತ ಕಟ್ಟಡ, ಪ್ರಯೋಗಾಲಯ, ಗ್ರಂಥಾಲಯ ಸೇರಿದಂತೆ ಅಗತ್ಯ ಸೌಕರ್ಯಗಳನ್ನು ಹೊಂದಿರಬೇಕು. ಆದರೆ, ಕೆಲ ಖಾಸಗಿ ನರ್ಸಿಂಗ್ ಕಾಲೇಜುಗಳು ಮಾನದಂಡಗಳನ್ನು ಉಲ್ಲಂಘಿಸಿವೆ. ಹಾಗಾಗಿ, ಪ್ರವೇಶ ನೀಡದಂತೆ ಸೂಚಿಸಲಾಗಿದೆ' ಎಂದು ಕುಲಪತಿ ಎಂ.ಕೆ. ರಮೇಶ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ರಾಜ್ಯದಲ್ಲಿ 615 ನರ್ಸಿಂಗ್ ಕಾಲೇಜುಗಳಿವೆ. 2023–24ನೇ ಸಾಲಿನಿಂದ ಶೇ 80ರಷ್ಟು ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಂಚಿಕೆ ಮಾಡುತ್ತಿದೆ. ಶೇ 20 ಸೀಟುಗಳನ್ನು ಆಡಳಿತ ಮಂಡಳಿಗೆ ನೀಡಲಾಗಿದೆ.

ಒಳಹರಿವು ಹೆಚ್ಚಳ: ಭರ್ತಿಯಾದ ಜಲಾಶಯಗಳು

ಜಲವಿದ್ಯುತ್ ಉತ್ಪಾದನೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜಲ ವಿದ್ಯುತ್ ಉತ್ಪಾದನೆಯ ಪ್ರಮಾಣ ಹೆಚ್ಚಳವಾಗಿದ್ದು, ಈ ಬಾರಿ ಜುಲೈ ತಿಂಗಳಲ್ಲಿ 1136.31 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 756.61 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿತ್ತು.

2022ರಲ್ಲಿ ಉತ್ತಮ ಮಳೆಯಾಗಿದ್ದರಿಂದ ಇದೇ ಅವಧಿಯಲ್ಲಿ 1162.04 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿತ್ತು. ಹಲವೆಡೆ ಉತ್ತಮ ಮಳೆಯಾಗುತ್ತಿದ್ದು, ಲಿಂಗನಮಕ್ಕಿ, ಸೂಪಾ ಮತ್ತು ಮಾಣಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಪ್ರತಿದಿನ 50.41 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸುವಷ್ಟು ನೀರು ಶೇಖರಣೆಯಾಗಿದೆ.

ಕಳೆದ ವರ್ಷ ಆಗಸ್ಟ್ ಮೊದಲ ವಾರದಲ್ಲಿ 209.10 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿತ್ತು. ಈ ವರ್ಷ ಇದೇ ಅವಧಿಯಲ್ಲಿ 348.89 ದಶಲಕ್ಷ ಯೂನಿಟ್ ಉತ್ಪಾದನೆಯಾಗಿದೆ ಎಂದು ಇಂಧನ ಇಲಾಖೆಯ ಮೂಲಗಳು ತಿಳಿಸಿವೆ.

ಮುಂಗಾರು ಆರಂಭವಾದಾಗಿನಿಂದ ಶರಾವತಿ ಜಲ ವಿದ್ಯುತ್ ಸ್ಥಾವರದ 10 ಘಟಕಗಳಲ್ಲೂ ಉತ್ಪಾದನೆ ನಿರಂತರವಾಗಿದೆ. ಮಳೆಗಾಲದ ಕಾರಣ ವಿದ್ಯುತ್ ಬೇಡಿಕೆಯೂ ತಗ್ಗಿರುವುದರಿಂದ, ಉಷ್ಣವಿದ್ಯುತ್ ಸ್ಥಾವರದ ಮೇಲಿನ ಒತ್ತಡವೂ ಕಡಿಮೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಲ್ಲಿ ಪ್ರತಿದಿನ 217.97 ದಶಲಕ್ಷ ಯೂನಿಟ್ ಬಳಕೆಯಾಗುತ್ತಿದೆ. ನಿತ್ಯ, ಕಲ್ಲಿದ್ದಲು ಆಧಾರಿತ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಿಂದ 60.96 ದಶಲಕ್ಷ, ಜಲವಿದ್ಯುತ್ ಘಟಕಗಳಿಂದ 58.17 ದಶಲಕ್ಷ, ಕೇಂದ್ರೀಯ ವಿದ್ಯುತ್ ಜಾಲದಿಂದ 47.81 ದಶಲಕ್ಷ, ಯುಪಿಸಿಎಲ್‌ನಿಂದ 17.27 ದಶಲಕ್ಷ ಮತ್ತು ನವೀಕರಿಸಬಹುದಾದ ಇಂಧನಗಳಿಂದ 87.96 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಹೊರಗಡೆಯಿಂದ 1.32 ದಶಲಕ್ಷ ಯೂನಿಟ್ ಬರುತ್ತಿದೆ.

ಜಲಾಶಯಗಳಲ್ಲಿ ಈಗ ಸಂಗ್ರಹವಾಗಿರುವ ನೀರು ಬಳಸಿ ನಿತ್ಯ 232.66 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಬಹುದಾಗಿದೆ. ಸದ್ಯ 250 ದಿನ ನಿರಂತರವಾಗಿ ವಿದ್ಯುತ್ ಉತ್ಪಾದನೆ ಮಾಡುವಷ್ಟು ನೀರು ಲಭ್ಯವಿದೆ ಎಂದು ಇಂಧನ ಇಲಾಖೆ ಮೂಲಗಳು ತಿಳಿಸಿವೆ.

ಜುಲೈ ತಿಂಗಳ ವಿದ್ಯುತ್ ಉತ್ಪಾದನೆ (ದಶಲಕ್ಷ ಯೂನಿಟ್ ಗಳಲ್ಲಿ)

ಸ್ಥಾವರ	2022	2023	2024
ಶರಾವತಿ	343.72	195.26	306.60
ನಾಗ್ಝರಿ	233.80	235.82	273.35
ವಾರಾಹಿ	210.63	95.90	185.11
ಇತರೆ	373.89	229.61	371.25
ಒಟ್ಟು	1162.04	756.59	1136.31

ಆಗಸ್ಟ್ 1ರಿಂದ 6ರವರೆಗೆ (ದಶಲಕ್ಷ ಯೂನಿಟ್ ಗಳಲ್ಲಿ)

ಸ್ಥಾವರ	2022	2023	2024
ಶರಾವತಿ	69.23	58.11	108.36
ನಾಗ್ಝರಿ	36.56	48.25	73.63
ವಾರಾಹಿ	18.35	17.54	42.79
ಇತರೆ	61.67	85.20	123.33
ಒಟ್ಟು	185.81	209.10	348.89

ಕರ್ನಾಟಕ ಸರಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಜಿಲ್ಲಾ ನಗರಾಭಿವೃದ್ಧಿ ಕೋಶ ಹಾವೇರಿ ಜಿಲ್ಲೆ, ಹಾವೇರಿ)
ಫೋ: 08375–249097 e-mail: eedudchaveri@gmail.com
ನಂ: ಜಿ.ನ.ಕೋ/ನ.ಹಂ–04/ಟೆ.ಪ್ರ/04/2024–25 ದಿನಾಂಕ: 07–08–2024

ಟೆಂಡರ್ ಪ್ರಕಟಣೆ

ಈ ಮೂಲಕ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ ರಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಹೊಸದಾಗಿ ಕಟ್ಟಡ ನಿರ್ಮಿಸುವುದು ಕಾಮಗಾರಿ ಮೊತ್ತ ರೂ 169.42ದ ಇಂಡೆಂಟ್ ಸಂಖ್ಯೆ 18550 ಟೆಂಡರನ್ನು ಆಹ್ವಾನಿಸಿದ್ದು, ಇಚ್ಚೆಯುಳ್ಳ ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರಕ್ಯೂರಮೆಂಟ್ https://kppp.karnataka.gov.in ರಲ್ಲಿ ಪ್ರಕಟಿಸಲಾಗಿದ್ದು, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕಾರ್ಯಾಲಯದಲ್ಲಿ ಪಡೆಯಬಹುದಾಗಿದೆ.

ಸಹಿ/– ಎಸ್.ಎಸ್. ಮತ್ತಿಕಟ್ಟಿ
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾವೇರಿ
ವಾ.ಸಾ.ಇ/ಹಾವೇರಿ/212/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)
ಸಂ:ಮುಇಂವಿ/ಟಿಮತ್ತುಪಿ/ಅಇಂ(ವಿ)–1/ಕಾನಿಇಂ–ಟಿ4(ಆರ್)/ಕೆಇಬಿ–175/65165/2024–25/2926–36 ದಿನಾಂಕ: 09.08.2024

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ/ಕಾಮಗಾರಿಯ ವಿವರ
Work Indent No.: KPTCL/2024-25/TL/WORK_INDENT1084 ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ ಹಾಸನ ಪ್ರಸರಣ ವಲಯದ ವ್ಯಾಪ್ತಿಯಲ್ಲಿ ಹಾಲಿಯಿರುವ 220ಕೆವಿ ಡಿಸಿ ಪ್ರಸರಣ ಮಾರ್ಗದಲ್ಲಿ ಹಾಲಿಯಿರುವ ವಿಫಲವಾದ/ದುರ್ಬಲಗೊಂಡ **120ಕೆಎನ್/90ಕೆಎನ್ ಪಿಂಗಾಣಿ** (Porcelain) **ಡಿಸ್ಕ್ ಇನ್ಸುಲೇಟರ್ ಸ್ಟ್ರಿಂಗ್‌ಗಳನ್ನು ಸಿಲಿಕಾನ್ ರಬ್ಬರ್ ಕಾಂಪೋಸಿಟ್ ಪಾಲಿಮರ್ ಲಾಂಗ್ ರಾಡ್ ಇನ್ಸುಲೇಟರ್ ಸ್ಟ್ರಿಂಗ್‌ಗಳಿಂದ** ಬದಲಾಯಿಸುವ ಕಾಮಗಾರಿ ಹಾಗೂ ಕಳಚಿದ ಸಾಮಗ್ರಿಗಳ ಖರೀದಿಸುವ (Buy Back) ಅಡಿಯಲ್ಲಿ **ಸಂಪೂರ್ಣ ಟರ್ನ್‌ಕೀ** ಆಧಾರದ ಮೇಲೆ ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು ಒಳಗೊಂಡಂತೆ ಮತ್ತು ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸ್ಥಾಪನೆ ಹಾಗೂ ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್ ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ **https://www.kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ. **13.08.2024** ರಂದು ಅಪರಾಹ್ನ **3.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **18.09.2024** ಅಪರಾಹ್ನ **3.00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್(ವಿದ್ಯುತ್),
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ,
ಕಾವೇರಿ ಭವನ, ಬೆಂಗಳೂರು–560009

ನಗರಸಭೆ ಕಾರ್ಯಾಲಯ ಶಹಾಬಾದ, ಜಿ॥ ಕಲಬುರಗಿ
www.shahabadcity/mrc.gov.in/email.ldistaff_ulb_shahabad@yahoo.com
ಸಂಖ್ಯೆ: ನಸಶ/ತಾ.ಶಾ/15ನೇ ಹಣಕಾಸು/2023–24 ದಿನಾಂಕ: 08.08.2024

:: ಇ–ಪ್ರೋಕ್ಯೂರ್‌ಮೆಂಟ ಅಲ್ಪಾವಧಿ ಟೆಂಡರ್ ಪ್ರಕಟಣೆ ::

ಶಹಾಬಾದ ನಗರಸಭೆಯಿಂದ 15ನೇ ಹಣಕಾಸಿನ ಯೋಜನೆಯಡಿಯಲ್ಲಿ 2020–21ನೇ ಸಾಲಿನ (ಉಳಿತಾಯ ಅನುದಾನ) ಮತ್ತು 2023–24, 2024–25ನೇ ಸಾಲಿನ SWM ಮತ್ತು ವಿದ್ಯುತ್ ಕಾಮಗಾರಿಗಳು ಮತ್ತು 2024–25ನೇ ಸಾಲಿನ 15ನೇ ಹಣಕಾಸಿನ ಜಲಶುದ್ಧೀಕರಣ ಘಟಕದಲ್ಲಿ ಮತ್ತು SBM 2.0 MRF ಅನುದಾನದಲ್ಲಿ ಯೋಜನೆಯಡಿಯಲ್ಲಿ ಒಟ್ಟು 06 ಕಾಮಗಾರಿ ಇ–ಪ್ರೊಕ್ಯೂರಮೆಂಟ್ ಟೆಂಡರನ್ನು ಇಂಡೆಂಟ್ ನಂಬರ ಜೊತೆಗೆ KW-1, KW-2 ಮತ್ತು KW-3 ನಿಬಂಧನೆಗಳೊಂದಿಗೆ KPPP ಟೆಂಡರನ್ನು ಈ ಕೆಳಗಿನಂತಿದೆ.
1) **Indent Number :** 1. DMA/2024-25/WS/Work_Indent25340, 2. DMA/2024-25/EL/Work_Indent25191, 3. DMA/2024-25/BD/Work_Indent22282, 4. DMA/2024-25/BD/Work_Indent20591 (SC), 5. DMA/2024-25/WS/Work_Indent25519 (ST), 6. DMA/2024-25/IND2207/Call-2, 2) Amount of Estimate Rs. in Lakhs : **Min. 5.74, Max. 84.00,** 3) Amount of EMD in Rupees : min. 14350, max. 168000, 4) Class of Contractor : As per KPPP Portal
1) ಇ–ಪೋರ್ಟಲನಲ್ಲಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **23.08.2024 ಸಮಯ 4.30 ಗಂಟೆಗೆ,** 2) ಟೆಂಡರ ತೆರೆಯುವ ದಿನಾಂಕ: (For Single Cover), ಟೆಂಡರ ತೆರೆಯುವ ದಿನಾಂಕ: (Technical bid for double cover): **26.08.2024 ಸಮಯ: 11.00 ಗಂಟೆವರೆಗೆ,** 3) ಟೆಂಡರ ತೆರೆಯುವ ದಿನಾಂಕ: (Financial bid for double cover) : **31.08.2024 ಸಮಯ: 11.00 ಗಂಟೆವರೆಗೆ**
ಸದರಿ ಕಾಮಗಾರಿಗಳ ವಿವರ ಹಾಗೂ ಇತರ ಷರತ್ತುಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್ ವೆಬ್– ಸೈಟ್ kppp.karnataka.gov.in ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಪೌರಾಯುಕ್ತರು ನಗರಸಭೆ ಕಾರ್ಯಾಲಯ ಶಹಾಬಾದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಪೌರಾಯುಕ್ತರು
ನಗರಸಭೆ ಶಹಾಬಾದ
ವಾ.ಸಾ.ಸಂ.ಇ/ಕಲಬುರಗಿ/323/ಕೆ.ಎಸ್.ಎಂ.ಸಿ.ಎ/2024–25

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಜೆಸ್ಕಾಂ ಗುಲಬರ್ಗಾ.
CIN:U4010KA2002SGC030436, E-mail:eeetpgescom@gmail.com Website:gescom.in
ಸಂಖ್ಯೆ:–ಜೆಸ್ಕಾಂ/ಮು.ಇಂ.(ಕಾ)/ಅ.ಇಂ(ತಾಂ)/ಕಾ.ನಿ.ಇಂ/ಸ.ಕಾ.ನಿ.ಇಂ–1(ತಾ)/ಸಇಂ–1(ತಾ)/2024-25/23891-919
ದಿನಾಂಕ: 09–08–2024

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ) ::

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ರೂ. 10,000/– ಮೂಲಸೌಕರ್ಯ ಶುಲ್ಕವನ್ನು ಪಾವತಿಸಿದ ಮತ್ತು ಗ್ರಿಡ್‌ನಿಂದ 500 ಮೀಟರ್ ಒಳಗೆ ಅಸ್ತಿತ್ವದಲ್ಲಿರುವ ಮತ್ತು **22.09.2023**ಕ್ಕೆ ವಿದ್ಯುತ್ ಸರಬರಾಜು ಮಾಡಲು ಬಾಕಿ ಇರುವ UAIP ಅರ್ಜಿದಾರರಿಗೆ ಮೂಲಸೌಕರ್ಯ ರಚಿಸಲು ಪಿಟಿಕೆ ರೇಟ್ ಕಾಂಟ್ರಾಕ್ಟ್ ಅಡಿಯಲ್ಲಿ 01 ವರ್ಷದ ಅವಧಿಗೆ (extendable by one more Year at the discretion of GESCOM) ಅರ್ಹ ಬಿಡ್‌ದಾರರುಗಳಿಂದ ಈ ಕೆಳಗೆ ವಿವರಿಸಿದಂತೆ ಜಿಲ್ಲಾವಾರು ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. 1) ಕಲಬುರಗಿ ಜಿಲ್ಲೆ (ಕಲಬುರಗಿ ವಿಭಾಗ–1, ಕಲಬುರಗಿ ವಿಭಾಗ–2 & ಸೇಡಂ, Bid Enq no:TP-065/UAIP/2024-25/Kalaburagi District and Approximate amount put to tender:2437.03 Lakhs). 2) ಯಾದಗೀರ ಜಿಲ್ಲೆ (ಯಾದಗೀರ ವಿಭಾಗ & ಶೋರಾಪೂರ ವಿಭಾಗ, Bid Enq no:TP-066/UAIP/2024-25/Shorapur District and Approximate amount put to tender:748.76 Lakhs). 3) ಬೀದರ ಜಿಲ್ಲೆ (ಬೀದರ ವಿಭಾಗ & ಹುಮನಾಬಾದ ವಿಭಾಗ, Bid Enq no:TP-067/UAIP/2024-25/Bidar District and Approximate amount put to tender:1499.80 Lakhs). 4) ಬಳ್ಳಾರಿ ಜಿಲ್ಲೆ (ಬಳ್ಳಾರಿ ಗ್ರಾಮೀಣ ವಿಭಾಗ, Bid Enq no:TP-068 /UAIP /2024-25 /Ballari District and Approximate amount put to tender:124.32 Lakhs). 5) ವಿಜಯನಗರ ಜಿಲ್ಲೆ (ಹೋಸಪೇಟ್ ನಗರ & ಹೊಸಪೇಟ್ ಗ್ರಾಮೀಣ ವಿಭಾಗ, Bid Enq no:TP-069/UAIP/2024-25/Vijaynagara District and Approximate amount put to tender:1869.28 Lakhs). 6) ರಾಯಚೂರು ಜಿಲ್ಲೆ (ರಾಯಚೂರು ಗ್ರಾಮೀಣ ವಿಭಾಗ & ಸಿಂಧನೂರು ವಿಭಾಗ, Bid Enq no:TP-070/UAIP/2024-25/Raichur District and Approximate amount put to tender:171.90 Lakhs). 7) ಕೊಪ್ಪಳ ಜಿಲ್ಲೆ (ಕೊಪ್ಪಳ ವಿಭಾಗ & ಗಂಗಾವತಿ ವಿಭಾಗ, Bid Enq no:TP-071 /UAIP /2024-25 /Koppal District and Approximate amount put to tender:192.42Lakhs).
ಆಸಕ್ತ ಬಿಡ್‌ದಾರರು ದಿನಾಂಕ: **14.08.2024** ರಂದು ಅಥವಾ ತದನಂತರ ಕರ್ನಾಟಕ ಸರ್ಕಾರದ ಈ ಕೆಳಕಂಡ ವೆಬ್ ಸೈಟ್‌ಗೆ ಲಾಗ್ ಆನ್ ಮಾಡಲು ಕೋರಲಾಗಿದೆ https://kppp.karnataka.gov.in

ಸಹಿ/– ಮುಖ್ಯ ಇಂಜಿನಿಯರ್(ವಿ),
ಕಾರ್ಯಾಚರಣೆ, ನಿಗಮ ಕಛೇರಿ, ಗುವಿಸಕಂನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/319/ಕೆ.ಎಸ್.ಎಂ.ಸಿ.&ಎ/2024–25

ವಿವಿಧ ಇಲಾಖೆಗಳ ನಡುವೆ ಸಮನ್ವಯತೆ ಕೊರತೆ; ಬೇಕಿದೆ ತಳಮಟ್ಟದಲ್ಲಿಯೇ ಕಟ್ಟುನಿಟ್ಟಿನ ಕ್ರಮ

ಕಮರುತ್ತಿದೆ 'ಬಾಲ್ಯ'ದ ಬದುಕು

ಚಿತ್ರ: ಭಾವು ಪತ್ತಾರ್

• ಪ್ರಮೋದ ಕುಲಕರ್ಣಿ

ಕೊಪ್ಪಳ: 'ನಿನ್ನ ಮದುವೆ ನಿಶ್ಚಯಿಸಿದ್ದೇವೆ. ನಾಳೆಯೇ ಮುಹೂರ್ತ; ಬೇಗನೆ ತಯಾರಾಗು...'

ಪೋಷಕರು ಹಾಗೂ ಸಂಬಂಧಿಕರ ಈ ಮಾತು ಕೇಳಿದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಆ ಬಾಲಕಿ ಅಕ್ಷರಶಃ ಕಂಗಾಲಾಗಿದ್ದಳು. ಬಾಲ್ಯದ ದಿನಗಳ ಸಂಭ್ರಮ ಅನುಭವಿಸಿ, ಓದುವ ಕನಸು ಕಟ್ಟಿಕೊಂಡಿದ್ದ ಆಕೆಗೆ ಮದುವೆ ಎಂಬುದು ನುಂಗಲಾರದ ಹಾಗೂ ಉಗುಳಲಾರದ ತುತ್ತಿನಂತಾಗಿತ್ತು.

ಇದು 2009ರಲ್ಲಿ ನಡೆದ ಘಟನೆ. ಆ ಬಾಲಕಿಯ ಸಂಬಂಧಿಕನಾಗಿದ್ದ ಯುವಕನಿಗೆ ಬೇರೊಬ್ಬ ಯುವತಿ ಜೊತೆ ಮದುವೆ ನಿಗದಿಯಾಗಿತ್ತು. ಮನೆ ಸಿಂಗಾರ ಮಾಡಿ, ಊರ ಮಂದಿಗೆಲ್ಲ ಆಹ್ವಾನ ನೀಡಿ ಮದುವೆ ಕಾರ್ಯ ಜೋರಾಗಿ ನಡೆದಿತ್ತು. ನಿಶ್ಚಯ ಮಾಡಿದ್ದ ವಧು ಮುಹೂರ್ತದ ಹಿಂದಿನ ದಿನ ರಾತ್ರಿ ನಾಪತ್ತೆಯಾಗಿದ್ದಳು.

ಹುಡುಗನ ಕಡೆಯ ಪೋಷಕರಿಗೆ ಮದುವೆ ನಿಂತು ಹೋದರೆ ಸಮಾಜದಲ್ಲಿ ಅವಮಾನವಾಗುತ್ತದೆ, ಆಗಿರುವ ಆರ್ಥಿಕ ಹೊರೆ ನೀಗಿಸುವ ಶಕ್ತಿ ಮತ್ತೆ ಇಲ್ಲ ಎಂಬ ಕಾರಣಕ್ಕೆ ಯುವಕನ ಅಕ್ಕನ ಮಗಳನ್ನೇ ರಾತ್ರೋರಾತ್ರಿ ಮದುವೆಗೆ ತಯಾರು ಮಾಡಿದ್ದರು. ಹೀಗಾಗಿ ಆರನೇ ತರಗತಿ ಓದುತ್ತಿದ್ದ ಬಾಲಕಿಗೆ ದಿಢೀರ್ ಮದುವೆಯಾಯಿತು. ಹಿರಿಯರ ಮಾತು ಮೀರಲಾಗದೆ, ಭವಿಷ್ಯದ ಸಾಧನೆಯ ಕನಸು ಹೇಳಿಕೊಳ್ಳಲಾಗದೆ ಆ ಬಾಲಕಿ ಚಡಪಡಿಸಿ ದುಃಖ ನುಂಗುತ್ತಲೇ ಕೌಟುಂಬಿಕ ಪರಿಸ್ಥಿತಿಯ 'ಬಲಿಪಶು'ವಾದಳು. ನಿಂತು ಹೋಗುತ್ತಿದ್ದ ಮದುವೆ ಕೊನೆ ಗಳಿಗೆಯಲ್ಲಿ ಉಳಿಯಿತು, ಕುಟುಂಬದ ಗೌರವಕ್ಕೂ ಚ್ಯುತಿ ಬರಲಿಲ್ಲ ಎನ್ನುವ ಸಮಾಧಾನ ಯುವಕನ ಪೋಷಕರದ್ದಾಗಿತ್ತು. ಆದರೆ, ಬಾಲಕಿಗೆ ಮಾತ್ರ ನಿತ್ಯ ಕಣ್ಣೀರು ಹಾಕುವ ದುಸ್ಥಿತಿ.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ವಿದ್ಯಾರ್ಥಿನಿಯೊಬ್ಬಳದ್ದು ಮತ್ತೊಂದು ಕಥೆಯಿದು. ಆ ಬಾಲಕಿ ಓದಿನಲ್ಲಿಯೂ ಬುದ್ಧಿವಂತೆ. ಆದರೆ, ಬಾಲ್ಯವಿವಾಹದ ನಡೆದರೂ ಮನೆಯಿಂದ ತಪ್ಪಿಸಿಕೊಂಡು ಸರ್ಕಾರದ ರಕ್ಷಣೆಯಲ್ಲಿ ಉಳಿದುಕೊಂಡಿದ್ದಳು. ಈಗ 18 ವರ್ಷ ವಯಸ್ಸಾಗಿದ್ದರಿಂದ ಮನೆಗೆ ವಾಪಸಾಗಿದ್ದಾಳೆ.

'ಹರೆಯಕ್ಕೆ ಬಂದ ಹೆಣ್ಮಕ್ಳ ಮದ್ವಿ ಮಾಡಿಕೊಟ್ರ ನಮ್ಮ ಜವಾಬ್ದಾರಿ ಮುಗೀತು ಅಂತ ಭಾಳ್ ಮಂದಿ ಪಾಲಕರ ಭಾವಿಸ್ತಾರ. ನಮ್ಮಪ್ಪ, ಅವ್ವಾನು ಹಂಗ ಮಾಡಿದ್ರು. ಆದ್ರ ನಾ ತಪ್ಪಿಸಿಕೊಂಡ ಬಂದಿದ್ದಕ್ಕ ಪಿಯುಸಿಯಲ್ಲಿ ಸಾಧನೆ ಮಾಡಿದೆ. ಈಗ ಪದವಿ ಓದತಿದ್ದೀನಿ. ಪಿಯು ಮೊದಲ ವರ್ಷದಲ್ಲಿದ್ದಾಗಲೇ ಪಾಲಕರು ಒತ್ತಡ ಹೇರಿ ಮದುವೆ ಮಾಡಿಸಿದರು. ನನಗೆ ಓದಬೇಕೆಂಬ ಭಾರಿ ಆಸೆಯಿತ್ತು. ಹಾಗಾಗಿ ಮಕ್ಕಳ ಸಹಾಯವಾಣಿ 1098ಗೆ ಕರೆಮಾಡಿದೆ. ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ರಕ್ಷಿಸಿ ಓದಿಸಿದ್ದರಿಂದ ಪಿಯು ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಪಾಸಾದೆ' ಎಂದು ಹೇಳುತ್ತಿದ್ದ ವಿದ್ಯಾರ್ಥಿನಿಯ ಕಂಗಳಲ್ಲಿ ಬಾಲ್ಯವಿವಾಹದ ಕುಣಿಕೆಯಿಂದ ಪಾರಾದ ಖುಷಿಯಿತ್ತು.

ಬೆಳಗಾವಿ ಜಿಲ್ಲೆಯ ಇನ್ನೊಬ್ಬ ಬಾಲಕಿ ಇತ್ತೀಚೆಗಷ್ಟೇ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಪಿಯುಸಿಗೆ ಪ್ರವೇಶ ಪಡೆಯಲು ಸಿದ್ಧತೆ ನಡೆಸುತ್ತಿದ್ದಳು. ಅಷ್ಟರೊಳಗೆ ಸಂಬಂಧಿಕರಲ್ಲೇ ಯುವಕನೊಂದಿಗೆ ನಿಶ್ಚಿತಾರ್ಥ ಮಾಡಿದರು. ಕೆಲ ದಿನಗಳಲ್ಲೇ ಮದುವೆ ಮಾಡುವವರಿದ್ದರು. ಈ ಪ್ರಕರಣದಲ್ಲೂ ಮಕ್ಕಳ ಸಹಾಯವಾಣಿ ಆ ಬಾಲಕಿಯನ್ನು ರಕ್ಷಿಸಿತು.

ಇವು ಹಲವು ಬಾಲಕಿಯರ ಬದುಕಿನ ಬಾಲ್ಯದ ದುರಂತ ಕಥನಗಳು. ಸರ್ಕಾರ, ಸ್ವಯಂಸೇವಾ ಸಂಸ್ಥೆಗಳು, ಯುನಿಸೆಫ್ ಹಾಗೂ ಮಕ್ಕಳ ಹಕ್ಕುಗಳಿಗಾಗಿ ಹೋರಾಡುತ್ತಿರುವ ಸಂಘಟನೆಗಳು ಬಾಲ್ಯವಿವಾಹ ತಡೆಯಲು ನಿರಂತರವಾಗಿ ಪ್ರಯತ್ನ ಮಾಡುತ್ತಿದ್ದರೂ ಬಾಲ್ಯವಿವಾಹದ ಕೂಪಕ್ಕೆ ಬಲಿಯಾಗುತ್ತಿರುವ ಮಕ್ಕಳ ಸಂಖ್ಯೆ ಏರುತ್ತಲೇ ಇದೆ. ಇದರಲ್ಲಿ ಬಾಲಕಿಯರ ಪ್ರಮಾಣವೇ ಹೆಚ್ಚು.

ರಾಜ್ಯದಲ್ಲಿ ಹಿಂದಿನ ಐದು ವರ್ಷಗಳ ಅಂಕಿ–ಅಂಶಗಳನ್ನು ತುಲನೆ ಮಾಡಿದರೆ 2023–24ರಲ್ಲಿಯೇ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಇನ್ನು ದಾಖಲಾಗದ, ಈಗಲೂ ಗುಟ್ಟಾಗಿ ಉಳಿದ ಪ್ರಕರಣಗಳೂ ಬಹಳಷ್ಟಿವೆ. ಅವುಗಳಿಗೆ ಕುಟುಂಬದ 'ರಕ್ಷಣಾ ಚೌಕಟ್ಟು' ಕಾವಲಾಗಿದೆ. ಕಳೆದ ವರ್ಷ ರಾಜ್ಯದಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಒಟ್ಟು 2,559 ದೂರುಗಳು ಬಂದಿದ್ದು, 1,840 ಬಾಲ್ಯವಿವಾಹಗಳನ್ನು ತಡೆಯಲಾಗಿದೆ. ನಿಯಮ ಮೀರಿ 719 ಮದುವೆಗಳು ನಡೆದಿದ್ದು, 637 ಪ್ರಕರಣಗಳಲ್ಲಿ ಎಫ್ಐಆರ್ ದಾಖಲಾಗಿವೆ. ಚಿತ್ರದುರ್ಗದಲ್ಲಿ ನಡೆದ 84 ಬಾಲ್ಯವಿವಾಹಗಳು ಆ ವರ್ಷದ ಅತಿ ಹೆಚ್ಚು ಪ್ರಕರಣಗಳಾಗಿವೆ. ಇದಕ್ಕೂ ಹಿಂದಿನ ವರ್ಷಗಳಲ್ಲಿ ಮಂಡ್ಯ, ಹಾಸನ, ರಾಮನಗರದಲ್ಲಿ ಹೆಚ್ಚು ಬಾಲ್ಯವಿವಾಹಗಳು ನಡೆದಿವೆ ಎನ್ನುತ್ತವೆ ಸರ್ಕಾರದ ಅಂಕಿ ಅಂಶಗಳು. ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳು ಕೂಡ ಇದರಿಂದ ಹೊರತಲ್ಲ.

2020–21ರಲ್ಲಿ ಕೋವಿಡ್ ಕಾರಣದಿಂದ ಶಾಲೆ 'ಲಾಕ್‌ಡೌನ್' ಆಗಿತ್ತು. ಈ ಸಮಯದಲ್ಲಿಯೇ ರಾಜ್ಯದಲ್ಲಿ ಹೆಚ್ಚು ಬಾಲ್ಯವಿವಾಹ ಪ್ರಯತ್ನಗಳು ನಡೆದಿದ್ದು 3,007 ದೂರುಗಳು ಬಂದಿದ್ದವು. 2,711 ಬಾಲ್ಯವಿವಾಹಗಳನ್ನು ತಡೆಯಲಾಗಿದೆ. ಹೀಗಿದ್ದರೂ 296 ಮದುವೆಗಳು ನಡೆದು ಹೋಗಿವೆ.

ಈ ಅಂಕಿ–ಅಂಶಗಳನ್ನು ಸಂಪೂರ್ಣವಾಗಿ ಒಪ್ಪದ ಹಾಗೂ ಹೆಸರು ಬಹಿರಂಗಪಡಿಸಲು ಬಯಸದ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಧಿಕಾರಿಯೊಬ್ಬರು, 'ಬಾಲ್ಯವಿವಾಹ ತಡೆಯುವುದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಸಂಪೂರ್ಣ ಜವಾಬ್ದಾರಿಯಾಗಿದೆ. ಎರಡೂ ಇಲಾಖೆಗಳ ನಡುವಿನ ಸಮನ್ವಯತೆ ಮತ್ತು ಸಿಬ್ಬಂದಿ ಕೊರತೆ ಬಾಲ್ಯವಿವಾಹಕ್ಕೆ ಕಡಿವಾಣ ಹಾಕಲು ಅಡ್ಡಿಯಾಗುತ್ತಿದೆ. ಹೋಬಳಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಎರಡೂ ಇಲಾಖೆಗಳ ಅಧಿಕಾರಿಗಳು ಒಟ್ಟಿಗೆ ಕೆಲಸ ಮಾಡಬೇಕು. ಎಲ್ಲ ಕಡೆ ಇದು ಸಾಧ್ಯವಾಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯದ ಬಾಲ್ಯವಿವಾಹ ಮಾಹಿತಿ

ವರ್ಷ	ದೂರು	ತಡೆದ ವಿವಾಹ	ನಡೆದ ಬಾಲ್ಯವಿವಾಹ	ಎಫ್ಐಆರ್
2019-20	1779	1623	156	130
2020-21	3007	2711	296	239
2021-22	2819	2401	418	389
2022-23	2436	2108	328	318
2023-24	2559	1840	719	637

ರಾಜ್ಯದಲ್ಲಿ ನಡೆದ ಬಾಲ್ಯವಿವಾಹ (2023ರ ಏಪ್ರಿಲ್‌ನಿಂದ 2024ರ ಮಾರ್ಚ್)

ಜಿಲ್ಲೆ	ದೂರು	ಆದ ಮದುವೆ	ಎಫ್ಐಆರ್
ಬಾಗಲಕೋಟೆ	109	19	13
ಬೆಂಗಳೂರು ಗ್ರಾಮೀಣ	30	8	8
ಬೆಂಗಳೂರು ನಗರ	20	10	8
ಬೆಳಗಾವಿ	105	22	22
ಬಳ್ಳಾರಿ	76	9	8
ಬೀದರ್	56	7	7
ವಿಜಯಪುರ	158	35	12
ಚಾಮರಾಜನಗರ	186	52	39
ಚಿಕ್ಕಬಳ್ಳಾಪುರ	103	13	10
ಚಿಕ್ಕಮಗಳೂರು	56	6	6
ಚಿತ್ರದುರ್ಗ	195	84	84
ದಕ್ಷಿಣ ಕನ್ನಡ	4	0	0
ದಾವಣಗೆರೆ	74	6	6
ಧಾರವಾಡ	51	12	15
ಗದಗ	14	1	1
ಕಲಬುರಗಿ	72	2	2
ಹಾಸನ	51	3	2
ಹಾವೇರಿ	46	4	3
ಕೊಡಗು	5	3	3
ಕೋಲಾರ	131	80	77
ಕೊಪ್ಪಳ	69	2	2
ಮಂಡ್ಯ	167	66	66
ಮೈಸೂರು	215	70	54
ರಾಯಚೂರು	39	3	3
ರಾಮನಗರ	60	25	22
ಶಿವಮೊಗ್ಗ	142	79	79
ತುಮಕೂರು	67	19	19
ಉಡುಪಿ	13	4	4
ಉತ್ತರ ಕನ್ನಡ	15	0	0
ಯಾದಗಿರಿ	74	3	3
ವಿಜಯನಗರ	156	72	59

ಹತ್ತಾರು ಕಾರಣ: ಬಾಲ್ಯವಿವಾಹಕ್ಕೆ ಕಾರಣಗಳು ಕೂಡ ಅನೇಕ. ವಯಸ್ಸಿಗೆ ಬಂದ ಹೆಣ್ಣುಮಕ್ಕಳು ಮನೆಯಲ್ಲಿರುವುದು ಅಪಾಯ ಎಂಬ ಪೋಷಕರ ಭಾವನೆ, ಜವಾಬ್ದಾರಿ ಬೇಗನೆ ಕಳೆದುಕೊಳ್ಳಬೇಕು ಎನ್ನುವುದು, ಕುಟುಂಬದ ಹಿರಿಯರ ಆಸೆ ನೆರವೇರಿಸಬೇಕು ಎನ್ನುವ ಹೆಬ್ಬಯಕೆ, ಮಕ್ಕಳ ಬಗ್ಗೆ ಪೋಷಕರಲ್ಲಿರುವ ನಿಷ್ಕಾಳಜಿ, ಮದುವೆ ವೆಚ್ಚ ಹೆಚ್ಚಾಗಿರುವುದು, ಸಾಮೂಹಿಕ ವಿವಾಹದಲ್ಲಿ ಬಾಲ್ಯವಿವಾಹ ನಿಯಂತ್ರಣಕ್ಕೆ ಕ್ರಮ ಅನುಸರಿಸದೇ ಇರುವುದು, ಬಾಲ್ಯವಿವಾಹ ಘೋರ ಅಪರಾಧ ಎಂಬ ತಿಳಿವಳಿಕೆ ಇಲ್ಲದಿರುವುದು ಮತ್ತು 2005ರ ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಕಾನೂನಿನ ಬಗ್ಗೆ ಗೊತ್ತಿಲ್ಲದಿರುವುದು ಕೂಡ ಇಂಥ ವಿವಾಹಕ್ಕೆ ಕಾರಣವಾಗುತ್ತಿವೆ. ಬಹುತೇಕ ಕಡೆ ಮಕ್ಕಳ ಕಾವಲು ಸಮಿತಿ ಇಲ್ಲದಿರುವುದು ಲೋಪವಾಗಿದೆ.

ಬಡ ಕುಟುಂಬದಲ್ಲಿ ಮೂರ್ನಾಲ್ಕು ಹೆಣ್ಣುಮಕ್ಕಳು ಇದ್ದಾಗ ಪೋಷಣೆ ಮಾಡಲು ಸಾಧ್ಯವಾಗದೇ ಬಾಲ್ಯದಲ್ಲೇ ಮದುವೆ ಮಾಡಿಕೊಡಲಾಗುತ್ತಿದೆ. ವಯಸ್ಸಿಗೆ ಬಂದ ಮೇಲೆ ಹೆಣ್ಣುಮಕ್ಕಳು ಕಾಲೇಜು ಮೆಟ್ಟಿಲು ಹತ್ತಿದರೆ ಬೇರೆ ಜಾತಿ, ಧರ್ಮದ ಹುಡುಗನ 'ಪ್ರೇಮದ ಬಲೆ'ಗೆ ಸಿಲುಕಿ ಮನೆಯ ಮರ್ಯಾದೆ ಹಾಳಾಗಬಹುದು ಎಂಬ ಆತಂಕದಿಂದಲೂ ಪೋಷಕರು 16–17 ವಯಸ್ಸಿಗೇ ಹೆಣ್ಣುಮಕ್ಕಳನ್ನು ತಮ್ಮ ಪರಿಚಯಸ್ಥರು ಇಲ್ಲವೇ ಸಂಬಂಧಿಕರ ಮನೆಯ ಹುಡುಗನೊಂದಿಗೆ ಮದುವೆ ಮಾಡಿಸುತ್ತಿದ್ದಾರೆ. ಹೆಚ್ಚುತ್ತಿರುವ ಅತ್ಯಾಚಾರ ಪ್ರಕರಣಗಳಂಥ ಸಾಮಾಜಿಕ ಸಮಸ್ಯೆಗಳೂ ಸಹ ಪೋಷಕರನ್ನು ಚಿಂತೆಗೀಡು ಮಾಡುತ್ತಿದೆ ಎನ್ನುವ ಮಾಹಿತಿಯಿದೆ.

ಬಾಲ್ಯವಿವಾಹದಿಂದ ಆಗುವ ಮಾನಸಿಕ ಹಾಗೂ ದೈಹಿಕ ಪರಿಣಾಮಗಳು ವ್ಯಾಪಕವಾಗಿದ್ದರೂ ಜನರಲ್ಲಿ ಅವುಗಳ ಅರಿವು ಕಡಿಮೆ ಇದೆ. 'ಚಿಕ್ಕ ವಯಸ್ಸಿನಲ್ಲಿ ಗರ್ಭಧಾರಣೆಯಾಗುವುದರಿಂದ ಗರ್ಭಾವಸ್ಥೆಯಲ್ಲಿ ಮತ್ತು ಹೆರಿಗೆಯಲ್ಲಿ ಅಪಾಯಕಾರಿ ಸಮಸ್ಯೆ ಎದುರಿಸಬೇಕಾಗುತ್ತದೆ. ಕೆಲವೊಮ್ಮೆ ತಾಯಿ, ಶಿಶು ಮರಣವಾಗುವ ಸಾಧ್ಯತೆ ಇರುತ್ತದೆ. ಜೊತೆಗೆ ಹುಟ್ಟುವ ಮಕ್ಕಳು ಅಪೌಷ್ಟಿಕತೆ ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆ ಎದುರಿಸಬೇಕಾಗುತ್ತದೆ. ಇದರಿಂದ ಖಿನ್ನತೆ, ಆತಂಕ, ಒತ್ತಡಗಳಿಗೆ ಒಳಗಾಗುವ ಸಾಧ್ಯತೆ ಇರುತ್ತದೆ. ಅಲ್ಲದೇ, ಶಿಕ್ಷಣದಿಂದ ವಂಚಿತರಾಗಿ ಅನಕ್ಷರಸ್ಥರಾಗುವ ಸಾಧ್ಯತೆ ಹೆಚ್ಚು' ಎಂದು ಬೀದರ್ ಜಿಲ್ಲೆ ಭಾಲ್ಕಿಯ ಸ್ತ್ರೀರೋಗ ತಜ್ಞೆ ಡಾ.ಶೈಲಜಾ ತಲವಾಡೆ ಆತಂಕ ವ್ಯಕ್ತಪಡಿಸುತ್ತಾರೆ.

'ಬಾಲ್ಯವಿವಾಹವು ಬಾಲಕ ಹಾಗೂ ಬಾಲಕಿ ಇಬ್ಬರ ಮೇಲೂ ಪರಿಣಾಮ ಬೀರುತ್ತದೆಯಾದರೂ ವ್ಯಾಪಕತೆ ಬಾಲಕಿಯರ ಮೇಲೆಯೇ ಹೆಚ್ಚು. ಸಂಸಾರದ ಜಂಜಾಟಗಳನ್ನು ಎದುರಿಸಲಾಗದೇ ಅಧಿಕ ರಕ್ತದೊತ್ತಡ, ಅವಧಿ ಪೂರ್ವದಲ್ಲೇ ಮಕ್ಕಳು ಜನಿಸುವ ಸಾಧ್ಯತೆ ಇರುತ್ತದೆ' ಎಂದರು.

'11ರಿಂದ 18 ವರ್ಷ ವಯಸ್ಸಿನ ಹದಿಹರೆಯದವರಲ್ಲಿ ಹಾರ್ಮೋನ್‌ಗಳ ವ್ಯತ್ಯಾಸವಾಗುತ್ತದೆ. ಬಾಲಕಿಯರಲ್ಲಿ ಋತುಚಕ್ರ ಆರಂಭವಾಗುವ ಸಮಯವದು. ಈ ವಯಸ್ಸಿನ ಮಕ್ಕಳಲ್ಲಿ ಸಾಮಾಜಿಕವಾಗಿ ತಮ್ಮನ್ನು ತಾವು ಗುರುತಿಸಿಕೊಳ್ಳಬೇಕು ಎನ್ನುವ ಹಂಬಲ ಶುರುವಾಗುತ್ತದೆ. ಇದರಿಂದ ಭವಿಷ್ಯದ ಅರಿವಿಲ್ಲದೆ ಹಲವಾರು ಮಂದಿ ಬಾಲ್ಯವಿವಾಹದ ಕೂಪಕ್ಕೆ ಬೀಳುತ್ತಾರೆ' ಎಂದು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಜಿಮ್ಸ್) ಮನೋವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ.ಸೋಮಶೇಖರ ಬಿಜ್ಜಳ ಎಚ್ಚರಿಸುವರು.

'ದೈಹಿಕವಾಗಿ ಬೆಳವಣಿಗೆ ಸರಿಯಾಗಲು ಹದಿಹರೆಯದ ವಯಸ್ಸಿನ ಮಕ್ಕಳಿಗೆ ಪೌಷ್ಟಿಕಾಂಶಗಳ ಅಗತ್ಯತೆ ಹೆಚ್ಚಿರುತ್ತದೆ. ಲೈಂಗಿಕ ಸುರಕ್ಷತೆ ಅರಿವಿಲ್ಲದ ವಯಸ್ಸಿನಲ್ಲಿ ಮದುವೆಯ ಬಂಧನಕ್ಕೆ ಒಳಗಾದರೆ ಇನ್ನೊಬ್ಬರ ಆಸರೆಯಲ್ಲಿ ಬದುಕಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ. ಬಾಲಕಿಗೆ ಮುಟ್ಟು, ಗರ್ಭಕೋಶದ ಸಮಸ್ಯೆಗಳನ್ನು ಎದುರಿಸುವುದು, ದಾಂಪತ್ಯದ ಕ್ರಿಯೆಗಳ ಬಗ್ಗೆ ಅರಿವು ಇರುವುದಿಲ್ಲ. ಆದ್ದರಿಂದ ಮಕ್ಕಳಿಗೆ ಪ್ರೌಢಶಾಲಾ ಹಂತದಿಂದಲೇ ಲೈಂಗಿಕ ಶಿಕ್ಷಣದ ಬಗ್ಗೆ ಮುಕ್ತವಾಗಿ ಹೇಳಿಕೊಡಬೇಕು. ಲೈಂಗಿಕ ಶಿಕ್ಷಣ ಮುಚ್ಚಿಟ್ಟಷ್ಟೂ ಮಕ್ಕಳಲ್ಲಿ ಕುತೂಹಲ ಜಾಸ್ತಿಯಾಗಿ ಸುಂದರ ಭವಿಷ್ಯ ಹಾಳುಮಾಡಿಕೊಳ್ಳುತ್ತಿರುವ ಘಟನೆಗಳು ನಮ್ಮ ಮುಂದಿವೆ' ಎಂದು ಅವರು ಅಭಿಪ್ರಾಯಪಟ್ಟರು.

ಬಾಲ್ಯವಿವಾಹ ಹೆಚ್ಚಾಗಲು ನಮ್ಮ ಇಲಾಖೆಯಲ್ಲಿನ ದೋಷಗಳಷ್ಟೇ ಕಾರಣವಲ್ಲ. ಸ್ಥಳೀಯ ಗ್ರಾಮ ಪಂಚಾಯಿತಿಗಳಿಂದ ಹಿಡಿದು ಎಲ್ಲರ ಸಹಕಾರದಿಂದ ಇದನ್ನು ತಡೆಯಬೇಕಿದೆ. ಬಾಲ್ಯವಿವಾಹವನ್ನು ಬೇರು ಮಟ್ಟದಿಂದ ಹೋಗಲಾಡಿಸಲು ಕ್ರಮ ವಹಿಸುತ್ತೇವೆ.
ಲಕ್ಷ್ಮಿ ಹೆಬ್ಬಾಳಕರ್
ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಬಾಲ್ಯ ವಿವಾಹಕ್ಕೆ ಒಳಗಾಗುವ ಬಾಲಕಿಯರಿಗೆ ಕೆಲವೊಮ್ಮೆ ಬಾಣಂತಿ, ಶಿಶುವಿನ ಸಾವು ಸಂಭವಿಸುವ ಪ್ರಮಾಣವೂ ಅಧಿಕವಾಗಿರುತ್ತದೆ. ಜನಿಸುವ ಮಕ್ಕಳ ತೂಕ ಕಡಿಮೆಯಾಗಿ ಅಪೌಷ್ಟಿಕತೆಯಿಂದ ಬಳಲುವ ಸಾಧ್ಯತೆ ಹೆಚ್ಚಿರುತ್ತದೆ.
ಡಾ.ಶೈಲಜಾ ತಲವಾಡೆ
ಸ್ತ್ರೀರೋಗ ತಜ್ಞೆ, ಬೀದರ್ ಜಿಲ್ಲೆ

ಮುಳ್ಳಿನ ಬೇಲಿಗೆ ತಳ್ಳುತ್ತಿರುವ ಪೋಷಕರು

ಬಾಲ್ಯವಿವಾಹ ಪ್ರಕರಣಗಳಲ್ಲಿ ಅಧಿಕಾರಿಗಳ ಕೈಗೆ ಸಿಕ್ಕು ಬಿದ್ದರೆ ಬಾಲಕ, ಬಾಲಕಿಯ ಪೋಷಕರು, ಪುರೋಹಿತ, ಶಾಮಿಯಾನ ಸೌಲಭ್ಯ ಒದಗಿಸಿದ ಅಂಗಡಿಯ ಮಾಲೀಕ, ಸ್ಥಳ ನೀಡಿದವರು, ಸಾಕ್ಷಿಯಾದವರು, ಅಡುಗೆಯವರು ಹೀಗೆ ಪ್ರತಿಯೊಬ್ಬರ ಮೇಲೂ ಪ್ರಕರಣ ದಾಖಲಿಸಲಾಗುತ್ತದೆ. ಆದ್ದರಿಂದ ಇಂಥ ಪ್ರಕರಣಗಳನ್ನು ಪತ್ತೆ ಹೆಚ್ಚಲು ತೆರಳುವಾಗ ಅಧಿಕಾರಿಗಳು ಬಾಲ್ಯವಿವಾಹಕ್ಕೆ ಸಿದ್ಧವಾದ ಬಾಲಕ–ಬಾಲಕಿಯರ ಪೋಷಕರಿಂದ ಹಾಗೂ ಅವರ ಕುಟುಂಬದವರಿಂದ ಭಾರಿ ಪ್ರತಿರೋಧ ಎದುರಿಸಬೇಕಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಬಲಾಢ್ಯವಾಗಿರುವ ಕೆಲ ಸಮುದಾಯಗಳ ಮುಖಂಡರ ಒತ್ತಡ ಕೂಡ ಪ್ರಕರಣ ದಾಖಲಿಸದಂತೆ ಮಾಡುತ್ತಿದೆ.

'ನಮ್ಮ ಮಕ್ಕಳು ಪ್ರೀತಿ, ಪ್ರೇಮದ ಆಕರ್ಷಣೆಗೆ ಒಳಗಾಗಿ ಮನೆ ಬಿಟ್ಟು ಓಡಿ ಹೋದರೆ ನಿಮ್ಮ ಸರ್ಕಾರ ಬಂದು ಹುಡುಕಿಕೊಡಲ್ಲ. ನಮ್ಮ ಮಕ್ಕಳು ಹಾದಿ ತಪ್ಪದಂತೆ ಹೇಗೆ ನೋಡಿಕೊಳ್ಳಬೇಕೆಂದು ಗೊತ್ತಿದೆ. ನೀವು ತಲೆ ಹಾಕಬೇಡಿ...' ಎನ್ನುವ ಆಕ್ರೋಶಭರಿತ ಮಾತುಗಳನ್ನು ಬಾಲ್ಯವಿವಾಹ ತಡೆ ಸಮಿತಿಯ ತಂಡದವರು ಕೇಳಬೇಕಾಗುತ್ತದೆ.

'ಗ್ರಾಮಾಂತರ ಪ್ರದೇಶದಲ್ಲಿ ಪ್ರೀತಿಸಿ ಓಡಿ ಹೋಗಿ ಮದುವೆಯಾಗುವ, ಕಾಣೆಯಾಗುವಂತ ಘಟನೆಗಳು ಅವ್ಯಾಹತವಾಗಿ ನಡೆಯುತ್ತಲೇ ಇವೆ. ಬಾಲ್ಯವಿವಾಹ ತಡೆ ಕಾಯ್ದೆ, ಕಾನೂನು, ಶಿಕ್ಷೆಯ ಅರಿವಿದ್ದರೂ ತಮ್ಮ ಮಕ್ಕಳನ್ನು ಬಾಲ್ಯವಿವಾಹದ ಮುಳ್ಳಿನ ಬೇಲಿಯೊಳಗೆ ಶಿಕ್ಷಿತ ಪೋಷಕರು ತಳ್ಳುತ್ತಿದ್ದಾರೆ. ಅದಕ್ಕೆ ಅವರು ಮರ್ಯಾದೆಯ ಲೇಪನ ಹಚ್ಚುತ್ತಿದ್ದಾರೆ' ಎನ್ನುತ್ತಾರೆ ಕಲಬುರಗಿಯ ಚೈಲ್ಡ್ ಲೈನ್ ನೋಡಲ್ ಕೇಂದ್ರದ ಜಿಲ್ಲಾ ಸಂಯೋಜಕ ಬಸವರಾಜ ತಂಗಳಿ.

'ಬಾಲ್ಯವಿವಾಹದ ಮಾಹಿತಿ ಆಧರಿಸಿ ನಮ್ಮ ತಂಡದವರು ಹೋಗುವ ಮುನ್ನವೇ ಬಾಲಕಿಯ ಕೊರಳಲ್ಲಿನ ತಾಳಿ, ಕಾಲುಂಗರ ತೆಗೆದಿರಿಸಿ, ಎಲ್ಲಿ ಮದುವೆ ಮಾಡಿದ್ದೇವೆ ನೋಡಿ? ನಮ್ಮನ್ನು ಸಿಕ್ಕಿ ಹಾಕಿಸಲು ಬಂದಿದ್ದೀರಾ ಎಂದು ನಮ್ಮನ್ನೇ ದಬಾಯಿಸುತ್ತಾರೆ. ಬಾಲ್ಯವಿವಾಹದ ಬಗ್ಗೆ ಮಾಹಿತಿ ಇದ್ದರೂ ಸ್ಥಳೀಯ ಅಧಿಕಾರಿಗಳು ಕಿಂಚಿತ್ತೂ ಸಹಕರಿಸುವುದಿಲ್ಲ. ತಮಗೆ ಸಂಬಂಧವೇ ಇಲ್ಲ ಎಂಬಂತೆ ವರ್ತಿಸುತ್ತಾರೆ' ಎಂದು ಅಲವತ್ತುಕೊಂಡರು.

ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಮತ್ತೊಬ್ಬ ಅಧಿಕಾರಿಯೊಬ್ಬರು, 'ಬಾಲ್ಯವಿವಾಹ ತಡೆಗೆ ವಿವಿಧ ಇಲಾಖೆಗಳ ಸಾಮೂಹಿಕ ಹೊಣೆಗಾರಿಕೆ ಇದೆ. ಅದರಲ್ಲಿ ಗ್ರಾಮ ಪಂಚಾಯಿತಿ ಪಿಡಿಒ ಮತ್ತು ಪ್ರೌಢಶಾಲೆಗಳ ಮುಖ್ಯ ಶಿಕ್ಷಕರ ಪಾತ್ರ ಮುಖ್ಯವಾಗುತ್ತದೆ. ಆದರೆ, ಅವರ್‍ಯಾರೂ ಕನಿಷ್ಠ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಿಲ್ಲ. ಮುಖ್ಯ ಶಿಕ್ಷಕರಿಗೆ ಶಾಲೆಯ ನಿರ್ವಹಣೆ ಹೊಣೆ ಮತ್ತು ಹೆಚ್ಚುವರಿ ಕೆಲಸಗಳೇ ಭಾರವಾಗುತ್ತಿವೆ. ಮಾಹಿತಿ ಆಧರಿಸಿ ಮಕ್ಕಳ ರಕ್ಷಣೆಗೆಂದು ಹೋದಾಗ ಅಲ್ಲಿನ ಪಿಡಿಒ ಅವರು ಪಂಪ್ ಆಪರೇಟರ್, ಕ್ಲರ್ಕ್ ಅವರನ್ನು ಕಳುಹಿಸಿ ಕೈತೊಳೆದುಕೊಳ್ಳುತ್ತಾರೆ. ಊರಲ್ಲಿ ಆ ಕುಟುಂಬದ ದ್ವೇಷ ಕಟ್ಟಿಕೊಳ್ಳುವುದು ಬೇಡ ಎಂಬ ಕಾರಣಕ್ಕೆ ಶಾಲೆಯ ಮುಖ್ಯೋಪಾಧ್ಯಾಯರು ಮುಂದೆ ಬರಲು ಹಿಂಜರಿಯುತ್ತಾರೆ' ಎಂದು ಇಲಾಖೆಗಳ ನಡುವಿನ ಬಿರುಕು ಹೊರಹಾಕಿದರು.

ರಾಜ್ಯದ ಗಡಿ ಜಿಲ್ಲೆಗಳಲ್ಲಿ ಬಾಲ್ಯವಿವಾಹದ ಗಡಿಬಿಡಿ ಜೋರಿದೆ. ಬೆಳಗಾವಿ, ವಿಜಯಪುರ, ಬೀದರ್, ಬಳ್ಳಾರಿ ಹಾಗೂ ಚಾಮರಾಜನಗರದಂಥ ಗಡಿ ಜಿಲ್ಲೆಗಳಲ್ಲಿ ರಾಜ್ಯದ ಬಾಲಕಿ–ಬಾಲಕಿ ನೆರೆಯ ರಾಜ್ಯದಲ್ಲಿ ಮದುವೆಯಾಗುತ್ತಿದ್ದಾರೆ. ಇಂತಹ ಮದುವೆಗೆ ಕಡಿವಾಣ ಹಾಕಲು ಅಧಿಕಾರಿಗಳಿಗೆ 'ರಾಜ್ಯದ ಗಡಿಯ ಬೇಲಿ' ದಾಟುವುದು ಕಷ್ಟವಾಗುತ್ತಿದೆ.

'ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಗ್ರಾಮ ಪಂಚಾಯಿತಿ ಸದಸ್ಯರು, ಸಬ್ ಇನ್‌ಸ್ಪೆಕ್ಟರ್‌ಗಳು ಗ್ರಾಮಮಟ್ಟದಲ್ಲಿ ಕ್ರಿಯಾತ್ಮಕವಾಗಿ ಕೆಲಸ ಮಾಡಬೇಕಿದೆ. ಮೇಲಧಿಕಾರಿಗಳು ಈ ಬಗ್ಗೆ ಹೆಚ್ಚು ನಿಗಾವಹಿಸಬೇಕಿದೆ. ಶಾಲೆಗಳಲ್ಲಿ ಹೆಣ್ಣು ಮಕ್ಕಳು ನಿರಂತರ ಗೈರಾಗುತ್ತಿದ್ದರೆ ಶಿಕ್ಷಕರು ಗಮನಿಸಿ, ಪೋಷಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕು. ಕೆಲವು ಸಲ ವಿದ್ಯಾರ್ಥಿನಿಯರ ಕುರಿತ ಮಾಹಿತಿ ಶಿಕ್ಷಕರಿಂದಲೇ ಸಿಕ್ಕಿದೆ' ಎಂದು ಮಂಡ್ಯದ ಮಕ್ಕಳ ಕಲ್ಯಾಣ ಸಮಿತಿ ಸದಸ್ಯ ಮಹೇಶ ಕೆ.ಎಂ. ಹೇಳಿದರು.

ಮುಂದೆಯೂ ಇದೆ ಬದುಕು: ನಾನಾ ಕಾರಣಗಳಿಂದಾಗಿ ಬಾಲ್ಯವಿವಾಹಕ್ಕೆ ಬಲಿಪಶುವಾದ ಅನೇಕ ಬಾಲಕಿಯರು ಅದರ ಕುಣಿಕೆಯಿಂದ ಹೊರಬಂದು ಈಗ ಸುಂದರ ಬದುಕು ರೂಪಿಸಿಕೊಂಡವರು ನಮ್ಮ ನಡುವೆ ಇದ್ದಾರೆ. ರಾತ್ರೋ ರಾತ್ರಿ ಮದುವೆಗೆ ಸಿದ್ಧವಾಗಬೇಕಾದ 'ಬಾಣಲೆ'ಗೆ ಬಿದ್ದಿದ್ದ ಯಲಬುರ್ಗಾ ತಾಲ್ಲೂಕಿನ ಯುವತಿ ತನ್ನದಲ್ಲದ ತಪ್ಪಿಗೆ ಯಾಕೆ ಬದುಕು ಹಾಳುಮಾಡಿಕೊಳ್ಳಬೇಕು ಎಂದು ನಿರ್ಧರಿಸಿ ಬಾಲ್ಯದಲ್ಲಿ ಎದುರಾಗಿದ್ದ 'ಮಾಂಗಲ್ಯ'ದ ಸಂಕೋಲೆ ಕಿತ್ತು ಹಾಕಿ ಹೊಸ ಬದುಕು ಕಟ್ಟಿಕೊಂಡಿದ್ದಾಳೆ. ಎಂ.ಕಾಂ ಮುಗಿಸಿ ಈಗ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದಾರೆ. ಅವರಂತೆಯೇ ಬದುಕು ಕಟ್ಟಿಕೊಳ್ಳಲು ಬಾಲ್ಯವಿವಾಹದ ಕೆಂಡದೊಳಗೆ ಬಿದ್ದ ಎಲ್ಲ ಬಾಲಕಿಯರಿಗೂ 'ಭಾಗ್ಯದ ಬಾಗಿಲು' ಇದ್ದೇ ಇದೆ. ಪರಿಸ್ಥಿತಿ ಎದುರಿಸುವ ಛಾತಿಯೊಂದು ಜೊತೆಗಿದ್ದರೆ ಸಾಕು.

ಪೂರಕ ಮಾಹಿತಿ: ಚಂದ್ರಕಾಂತ ಮಸಾನಿ, ಬಸವರಾಜ ಸಂಪಳ್ಳಿ, ಸಿದ್ದು ಆರ್.ಜಿ. ಹಳ್ಳಿ, ಬಾಲಕೃಷ್ಣ ಪಿ.ಎಚ್., ಇಮಾಮಸಾಬ್ ಗೂಡೂನವರ, ಮಲ್ಲಿಕಾರ್ಜುನ ನಾಲವಾರ
ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ.

ಬಾಲ್ಯವಿವಾಹ ಅಪಾಯದ ಕುರಿತು ಕೊಪ್ಪಳದಲ್ಲಿ ನಡೆದಿದ್ದ ಜಾಗೃತಿ ಜಾಥಾದ ನೋಟ (ಸಂಗ್ರಹ ಚಿತ್ರ)

ಗುಂಡಣ್ಣ

25 ವರ್ಷಗಳ ಹಿಂದೆ
ಬುಧವಾರ, 11-08-1999

• ಗಡಿಯೊಳಗೆ ನುಸುಳಿದ ಪಾಕ್ ಯುದ್ಧ ವಿಮಾನ ಧ್ವಂಸ

ನವದೆಹಲಿ, ಆಗಸ್ಟ್ 10 (ಪಿಟಿಐ, ಯುಎನ್‌ಐ)– ಗುಜರಾತ್‌ನಲ್ಲಿ ಭಾರತದ ಗಡಿಯೊಳಗೆ ಸುಮಾರು 10 ಕಿ.ಮೀ. ಗಳಷ್ಟು ದೂರ ಅಕ್ರಮವಾಗಿ ಪ್ರವೇಶಿಸಿದ್ದ ಪಾಕಿಸ್ತಾನ ನೌಕಾಪಡೆಯ ಯುದ್ಧ ವಿಮಾನವನ್ನು ಭಾರತ ಇಂದು ಬೆಳಿಗ್ಗೆ ಹೊಡೆದುರುಳಿಸಿದೆ. ವಿಮಾನದಲ್ಲಿದ್ದ ಎಲ್ಲ 16 ಸಿಬ್ಬಂದಿ ಸತ್ತಿದ್ದಾರೆ ಎಂದು ಪಾಕಿಸ್ತಾನ ತಿಳಿಸಿದೆ. ಕಾರ್ಗಿಲ್ ಕದನ ಅಂತ್ಯಗೊಂಡ ಶಾಂತಿಯ ಕಾಲದಲ್ಲಿ ಈ ಘಟನೆ ನಡೆದಿದ್ದು, ಪಾಕಿಸ್ತಾನವು ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದೆ ಎಂಬುದನ್ನು ಎಚ್ಚರಿಕೆಯಿಂದ ಗಮನಿಸಲಾಗುತ್ತಿದೆ.

50 ವರ್ಷಗಳ ಹಿಂದೆ
ಭಾನುವಾರ, 11-08-2024

• ಪ್ರವಾಹ ಸಂತ್ರಸ್ತರಿಗೆ ನೀಡುವ ಗರಿಷ್ಠ ಮೊತ್ತ 1 ಸಹಸ್ರ ರೂ.ಗೆ ಏರಿಕೆ

(ಪ್ರಜಾವಾಣಿ ಪ್ರತಿನಿಧಿಯಿಂದ)

ಮಂಗಳೂರು, ಆಗಸ್ಟ್ 10– ಈಗಿರುವ ಕಾನೂನು ಪ್ರಕಾರ ಪ್ರವಾಹ ಸಂತ್ರಸ್ತರಿಗೆ ಸರ್ಕಾರ ಕೊಡಬಹುದಾದ 800 ರೂ. ಗರಿಷ್ಠ ಮೊತ್ತವನ್ನು ತಾವು ಒಂದು ಸಾವಿರಕ್ಕೆ ಏರಿಸಿರುವುದಾಗಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಇಂದು ಇಲ್ಲಿ ತಿಳಿಸಿದರು.

ನಷ್ಟದ ಆಧಾರದ ಮೇಲೆ ಇಲ್ಲಿನ ಪ್ರವಾಹ ಸಂತ್ರಸ್ತರಿಗೆ ಪರಿಹಾರ ನೀಡುವಂತೆ ಆದೇಶಿಸಿರುವುದಾಗಿ ಅವರು ಹೇಳಿದರು. ಜಿಲ್ಲೆಯ ನೆರೆಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ
ಭಾನುವಾರ ಆಗಸ್ಟ್ 11, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಷಷ್ಠಿ ಗಂ. 5-46
ನಕ್ಷತ್ರ: ಚಿತ್ತಾ ಗಂ. 5-49 ಯೋಗ: ಶುಭ ಗಂ. 15-49 ಕರಣ: ತೈತಿಲ ಗಂ. 5-46, ಕರ್ಕಾಟಕ ಮಾಸದ 25 ನೇ ದಿನ, ಮಳೆನಕ್ಷತ್ರ: ಆಶ್ಲೇಷ 3.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-20 ಸೂರ್ಯಾಸ್ತ : 06-51
ಮುಸ್ಲಿಂ ದಿನಾಂಕ: 06 ಸಫರ್
ಅದೃಷ್ಟ ಸಂಖ್ಯೆ: 6, 3

ಮೇಷ: ಕೃಷಿಯಲ್ಲಿ ನೀವು ಪಾಲಿಸುತ್ತಿರುವ ತಂತ್ರಗಳು ಶೀಘ್ರದಲ್ಲಿ ಫಲ ನೀಡಲಿವೆ. ಅಧಿಕಾರಿಯ ಸಹಾಯದಿಂದ ಬಡ್ತಿ ಅಥವಾ ವರ್ಗಾವಣೆಯಂತಹ ಅವಕಾಶವನ್ನು ಪಡೆದುಕೊಳ್ಳುವಿರಿ. ಕೆಂಪು ಬಣ್ಣ ಶುಭ ತರಲಿದೆ.

ವೃಷಭ: ಕಾರ್ಯಕ್ಷೇತ್ರದಲ್ಲಿ ಕೆಲಸದ ಒತ್ತಡ ಕಡಿಮೆಯಾಗಿ ಕುಟುಂಬಕ್ಕೆ ಸಮಯ ನೀಡಲು ಸಾಧ್ಯವಾಗುವುದು. ತಂದೆ ತಾಯಿಯರ ಆಶೀರ್ವಾದದೊಂದಿಗೆ ಈ ದಿನವನ್ನು ಆರಂಭಿಸಿ. ಒಳ್ಳೆಯದಾಗಲಿದೆ.

ಮಿಥುನ: ಕೆಲವೊಮ್ಮೆ ಅಧೈರ್ಯ ಮತ್ತು ಜಿಗುಪ್ಸೆಯಂತಹ ಸಮಸ್ಯೆ ಕಾಡಲಿದೆ. ವಿವಾಹ ವಿಷಯಗಳು ನಿಶ್ಚಿತಗೊಂಡಿದ್ದರೂ ಸಹ ಇನ್ನೊಮ್ಮೆ ವಿಚಾರಿಸಿ ದೃಢಪಡಿಸಿಕೊಳ್ಳುವುದು ಉತ್ತಮ.

ಕರ್ಕಾಟಕ: ಕಾರ್ಮಿಕರಿಗೆ, ಕೃಷಿಕರಿಗೆ ಅಶುಭ ಫಲಗಳು ಅಧಿಕವಾಗಿದ್ದು, ಖರ್ಚು ಹೆಚ್ಚಾಗಲಿದೆ. ವ್ಯಾವಹಾರಿಕ ಚಾಣಾಕ್ಷತನ ಮತ್ತು ಕ್ರಿಯಾಶೀಲತೆಯಿಂದ ಕಾರ್ಯ ನಿರ್ವಹಿಸಿದರೆ ಲಾಭವಾಗಲಿದೆ.

ಸಿಂಹ: ಗುರಿ ತಲುಪುವ ಮಾರ್ಗವನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ನಿರೀಕ್ಷೆಗೂ ಮೀರಿ ಯೋಜನೆಗಳು ನೆರವೇರಲಿವೆ. ಬಾಳಸಂಗಾತಿಯ ಮಾತುಗಳಿಗೆ ನಿಮ್ಮ ಸಹಮತವಿರಲಿ.

ಕನ್ಯಾ: ಭಿನ್ನಾಭಿಪ್ರಾಯದಿಂದ ಹೊರಬಂದು ಹೊಸ ತಲೆಮಾರಿನವರು ನೂತನ ಸಂಬಂಧ ಬೆಳೆಸುವಂತಾಗಲಿದೆ. ಆಯುರ್ವೇದ ಚಿಕಿತ್ಸೆಯಿಂದ ಆರೋಗ್ಯ ಸುಧಾರಿಸಲಿದೆ. ರಕ್ತ ಪರೀಕ್ಷೆ ಮಾಡಿಸಿಕೊಳ್ಳುವುದು ಉತ್ತಮ.

ತುಲಾ: ಮಕ್ಕಳಿಂದ ಅಹಿತಕರ ಘಟನೆಗಳು ಜರುಗಿ ಪಾಲಕರಿಗೆ ಭವಿಷ್ಯದ ಬಗ್ಗೆ ಯೋಚನೆಗಳು ಬರಲಿದೆ. ದಂಪತಿಯ ಮಧ್ಯೆ ಅನಗತ್ಯ ವಾದ-ವಿವಾದಗಳು ಉಂಟಾಗಿ, ವೈಮನಸ್ಸು ಮೂಡಬಹುದು.

ವೃಶ್ಚಿಕ: ಮನರಂಜನಾ ಚಟುವಟಿಕೆಗಳಲ್ಲಿ ಭಾಗಿಯಾಗುವುದರಿಂದ ಸಂತಸವಾಗಲಿದೆ. ಈಗಿನ ಉದ್ಯೋಗದಲ್ಲಿ ಸ್ಥಿರತೆ ಮತ್ತು ಧನಲಾಭ ಇರಲಿದೆ. ಭಾವನೆಗಳಿಗೆ ಪ್ರಶಂಸೆ ಸಿಗುವ ದಿನ ಇದಾಗಿದೆ.

ಧನು: ಬೇರೆಯವರ ಕೆಲಸವನ್ನು ನಿಮ್ಮ ಕೆಲಸವೆಂದೇ ತಿಳಿದು ಯಶಸ್ವಿಯಾಗಿ ಮಾಡಿ ಮುಗಿಸುವಿರಿ. ಕುಡಿಯುವ ನೀರಿನ ಶುದ್ಧತೆಯ ಬಗ್ಗೆ ಎಚ್ಚರ ವಹಿಸುವುದು ಅವಶ್ಯ.

ಮಕರ: ವಿರೋಧಿಗಳ ಜೊತೆಯೆ ದಿನದ ಬಹುಪಾಲು ಸಮಯವನ್ನು ಕಳೆಯಬೇಕಾಗುವುದು. ಶಸ್ತ್ರ ಚಿಕಿತ್ಸೆಯ ಬಗ್ಗೆ ವೈದ್ಯರ ಸಲಹೆಗಳನ್ನು ಹೆಚ್ಚು ಗಮನದಿಂದ ಕೇಳುವುದು ಸೂಕ್ತ. ಚಿನ್ನ ಮಾರಾಟಗಾರರಿಗೆ ಶುಭದಿನ.

ಕುಂಭ: ವೈಯಕ್ತಿಕ ವಿಚಾರಗಳ ಬಗ್ಗೆ ಅನ್ಯರ ಪ್ರಭಾವಗಳಿಗೆ ಒಳಗಾಗಿ ಒತ್ತಡಗಳಿಗೆ ಸಿಲುಕಿಕೊಳ್ಳಬೇಡಿ. ಅವಿವಾಹಿತರ ಮನೋಕಾಮನೆಗಳು ಈಡೇರಲು ದುರ್ಗಾಪರಮೇಶ್ವರಿಯ ಆರಾಧಿಸಿ.

ಮೀನ: ನಿಮ್ಮ ಮೇಲಿನ ನಂಬಿಕೆ ಹಾಗೂ ವಿಶ್ವಾಸದಿಂದಾಗಿ ಮೇಲಧಿಕಾರಿಗಳು ನಿಮ್ಮ ನಿರ್ಧಾರಗಳನ್ನು ಸುಲಭವಾಗಿ ಒಪ್ಪಿಕೊಳ್ಳುವರು. ಮನದ ಆಸೆಗಳು ಈ ದಿನ ಈಡೇರಲಿವೆ.

ಪದಬಂಧ 5769
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಭಾರವುಳ್ಳ ಉಪಕಾರ! (3)
4.ಉದಯ ಕಾಲದಲ್ಲಿ ಸಂಗ್ರಹಿಸಿರುವ ನೀರು (3)
5.ತಾಪದ ಹೊತ್ತಿನಲ್ಲಿ ಅತಿಯಾದ ದುಃಖ (4)
6.ಕಬ್ಬಿನಲ್ಲಿ ಒಂದು ಜಾತಿ (4)
8.ಕಾಡಿನಲ್ಲಿ ಊಟ ಮಾಡುವುದು (5)
11.ಅದೇ ತಾನೆ ಮೂಡುತ್ತಿರುವ ಸೂರ್ಯ (4)
13.ಹೆಣ್ಣು ದುಂಬಿ ಇಲ್ಲಿದೆ (4)
15.ತುಂಟ ಸ್ವಭಾವದ ಬಾಲೆ! (3)
16.ಚರುಪು ಕೊಟ್ಟಾಗ ತೋರಿದ ಉತ್ಸಾಹ! (3)

ಮೇಲಿಂದ ಕೆಳಕ್ಕೆ
1.ಸಂಗೀತದಲ್ಲಿ ರಾಗದ ಛಾಯೆಯನ್ನು ವಿಸ್ತರಿಸಿ ತೋರಿಸುವುದು (3)
2.ಮರದ ಹತ್ತಿರವಿರುವ ಮೊಸಳೆ (3)
3.ಬಾಳೆಗಿಡ ಹಾಗೂ ಅದರ ಫಲ (3)
4.ಊರಿನ ಸಮೀಪದಲ್ಲಿರುವ ತೋಟ (4)
7.ಪಗಡೆಯಾಟದಲ್ಲಿ ಉಪಯೋಗಿಸುವ ಲೆತ್ತ (2)
9.ಎಡಬಿಡದೆ ಸುರಿಯುವ ಮಳೆ (4)
10.ಜಟಿಲತೆಯಿಂದ ಸಂಗ್ರಹಿಸಿದ ನೀರು (2)
11.ಗಬ್ಬಿಲ ಇಲ್ಲಿದೆ (3)
12.ಚರ್ಚೆ ಅಥವಾ ವಾದ (3)
14.ಕುದುರೆಯನ್ನೇರುವ ಬಳೆ (3)



5768ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನೋವಿಶ್ಲೇಷಣೆ 4.ನವಿಲು
7.ಕವಿ 9.ಉದಯರವಿ
12.ಭಾವಾನುವಾದ 14.ಸಕ
17.ಸಂಗತಿ 18.ಪ್ರಣಯಕಲಹ

ಮೇಲಿಂದ ಕೆಳಕ್ಕೆ:
2.ವಿಮೆ 3.ಷಡ್ಜಕ
5.ವಿನೋದ 6.ಅವಿನಾಭಾವ
8.ವಿಶಾರದ 9.ಉಪವಾಸ
10.ಯಮ 11.ಪಾನು
13.ವಾಲಗ 15.ಕಲ್ಯಾಣ
16.ಶುಕ

ಸುಡೊಕು 6154

				7			3	
7			2		3	6		8
		6		4			2	
4		3		1		8		6
	1		9		4		7	
9		8		3		4		1
1		9	3		5		8	
	6			9			1	
5		7	4		1	9		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6153 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆನೆಕಾಲು ರೋಗ: ಔಷಧ ವಿತರಣೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆನೆಕಾಲು ರೋಗವನ್ನು ನಿರ್ಮೂಲಗೊಳಿಸುವ ಉದ್ದೇಶದಿಂದ ಕೇಂದ್ರ ಆರೋಗ್ಯ ಸಚಿವಾಲಯವು ಉಚಿತವಾಗಿ ಔಷಧ ವಿತರಿಸುವ ಅರ್ಧವಾರ್ಷಿಕ ಕಾರ್ಯಕ್ರಮದ ಎರಡನೆಯ ಹಂತಕ್ಕೆ ಶನಿವಾರ ಚಾಲನೆ ನೀಡಿದೆ.

ರಾಜ್ಯದ ಬೀದರ್ ಸೇರಿದಂತೆ ಈ ರೋಗವು ಜನರನ್ನು ಹೆಚ್ಚಾಗಿ ಬಾಧಿಸುತ್ತಿರುವ 63 ಜಿಲ್ಲೆಗಳಲ್ಲಿ ಔಷಧ ವಿತರಣೆ ಮಾಡಲಾಗುತ್ತದೆ. ಕ್ಯುಲೆಕ್ಸ್ ಸೊಳ್ಳೆಗಳು ಕಚ್ಚುವುದರಿಂದ ಈ ರೋಗ ಹರಡುತ್ತದೆ.

'ಔಷಧ ವಿತರಣೆ ಕಾರ್ಯಕ್ರಮವು ಯಶಸ್ಸು ಕಾಣಬೇಕು ಎಂದಾದರೆ, ಔಷಧ ಪಡೆಯಲು ಅರ್ಹವಾಗಿರುವವರ ಪೈಕಿ ಶೇ 90ರಷ್ಟು ಮಂದಿ ಅದನ್ನು ಪಡೆದು, ಸೇವಿಸಬೇಕು' ಎಂದು ಕೇಂದ್ರ ಆರೋಗ್ಯ ಖಾತೆ ರಾಜ್ಯ ಸಚಿವ ಪ್ರತಾಪರಾವ್ ಜಾಧವ್ ಹೇಳಿದ್ದಾರೆ.

2027ಕ್ಕೆ ಮೊದಲು ಆನೆಕಾಲು ರೋಗವನ್ನು ನಿರ್ಮೂಲಗೊಳಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಆದರೆ ಪಡೆದ ಔಷಧವನ್ನು ಜನ ಸೇವಿಸದೆ ಇರುವುದು ಈ ಗುರಿ ತಲುಪುವಲ್ಲಿ ದೊಡ್ಡ ಅಡ್ಡಿಯಾಗಿದೆ.

ವಯನಾಡ್ ಪರಿಸ್ಥಿತಿ ಅವಲೋಕಿಸಿದ ಪ್ರಧಾನಿ ನರೇಂದ್ರ ಮೋದಿ ಭರವಸೆ

'ಕೇಂದ್ರದಿಂದ ಸಾಧ್ಯವಿರುವ ಎಲ್ಲ ನೆರವು'

ಪ್ರಜಾವಾಣಿ ವಾರ್ತೆ/ಪಿಟಿಐ

ವಯನಾಡ್: ವಯನಾಡ್ ಜಿಲ್ಲೆಯಲ್ಲಿ ಭೂಕುಸಿತದಿಂದಾಗಿ ತೊಂದರೆಗೆ ಒಳಗಾಗಿರುವ ಪ್ರದೇಶಗಳಲ್ಲಿ ನಡೆಯುತ್ತಿರುವ ರಕ್ಷಣೆ ಹಾಗೂ ಪುನರ್ವಸತಿ ಕಾರ್ಯಗಳಿಗೆ ಕೇಂದ್ರ ಸರ್ಕಾರದಿಂದ ಸಾಧ್ಯವಿರುವ ಎಲ್ಲ ನೆರವು ಸಿಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಭರವಸೆ ನೀಡಿದರು.

ದುರಂತದಲ್ಲಿ ಎಲ್ಲವನ್ನೂ ಕಳೆದುಕೊಂಡವರಿಗೆ ನೆರವು ನೀಡುವ ಕೆಲಸದಲ್ಲಿ ಕೇಂದ್ರ ಸರ್ಕಾರವು ಕೇರಳ ಸರ್ಕಾರದ ಜೊತೆ ಇರಲಿದೆ ಎಂದು ಅವರು ಹೇಳಿದರು.

ಪರಿಹಾರ ಹಾಗೂ ಪುನರ್ವಸತಿ ಕ್ರಮಗಳು, ಅನಾಥರಾದ ಮಕ್ಕಳಿಗೆ ದೀರ್ಘಾವಧಿಯಲ್ಲಿ ಅಗತ್ಯವಿರುವ ನೆರವುಗಳ ಬಗ್ಗೆ ವಿಸ್ತೃತವಾದ ಮನವಿಪತ್ರ ನೀಡುವಂತೆ ಮೋದಿ ಅವರು ಕೇರಳ ಸರ್ಕಾರಕ್ಕೆ ತಿಳಿಸಿದರು. 'ಕೇರಳದ ಮನವಿಪತ್ರದ ವಿಚಾರವಾಗಿ ಕೇಂದ್ರ ಉದಾರ ಮನಸ್ಸಿನಿಂದ ನಿಲುವು ತಾಳಲಿದೆ' ಎಂದರು.

ಭೂಕುಸಿತ ಸಂಭವಿಸಿದ ಕಡೆಗಳಲ್ಲಿ ಪರಿಸ್ಥಿತಿಯ ಪರಿಶೀಲನೆ ನಡೆಸುವುದಕ್ಕೆ ಹಾಗೂ ಸಂತ್ರಸ್ತರಾದವರಿಗೆ ಪುನರ್ವಸತಿ ಕಲ್ಪಿಸಲು ಯೋಜನೆಯೊಂದನ್ನು ರೂಪಿಸುವುದಕ್ಕೆ ಸಂಬಂಧಿಸಿದಂತೆ ಡಿ.ಸಿ. ಕಚೇರಿಯಲ್ಲಿ ನಡೆಸಿದ ಸಭೆಯಲ್ಲಿ ಪ್ರಧಾನಿ ಮಾತನಾಡಿದರು.

ವಯನಾಡ್ ಭೂಕುಸಿತ ಸಂತ್ರಸ್ತರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕಾಳಜಿ ಕೇಂದ್ರವೊಂದರಲ್ಲಿ ಶನಿವಾರ ಭೇಟಿ ಮಾಡಿದರು. —ಪಿಟಿಐ ಚಿತ್ರ

ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಕೇಂದ್ರ ಸಚಿವ ಸುರೇಶ್ ಗೋಪಿ, ಹಿರಿಯ ಅಧಿಕಾರಿಗಳು ಮತ್ತು ಸ್ಥಳೀಯ ಆಡಳಿತ ಸಂಸ್ಥೆಯ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

ಮೋದಿ ಅವರು ನಿಗದಿಯಂತೆ ವಯನಾಡ್‌ನಲ್ಲಿ ಮೂರು ತಾಸು ಇರಬೇಕಿತ್ತು. ಆದರೆ ಅವರು ಐದು ತಾಸಿಗೂ ಹೆಚ್ಚು ಕಾಲ ಅಲ್ಲಿದ್ದರು. ಕಣ್ಣೂರು ವಿಮಾನ ನಿಲ್ದಾಣಕ್ಕೆ ಬಂದ ಮೋದಿ ಅವರು ಅಲ್ಲಿಂದ ಹೆಲಿಕಾಪ್ಟರ್ ಮೂಲಕ ವಯನಾಡ್ ತಲುಪಿದರು. ಭೂಕುಸಿತದಿಂದಾಗಿ ಹಾನಿಗೆ ಒಳಗಾದ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದರು.

ಕಲ್ಪೆಟ್ಟದ ಎಸ್‌ಕೆಎಂಜೆ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಇಳಿದ ಮೋದಿ ಅವರು ರಸ್ತೆ ಮಾರ್ಗವಾಗಿ ಚೂರಲ್‌ಮಲಕ್ಕೆ ತೆರಳಿದರು. ಹಾನಿಯ ತೀವ್ರತೆಯನ್ನು ವೀಕ್ಷಿಸುವ ಸಂದರ್ಭದಲ್ಲಿ ಮೋದಿ ಅವರು, ಸೇನೆಯು ನಿರ್ಮಿಸಿರುವ ತಾತ್ಕಾಲಿಕ ಸೇತುವೆಯ ಮೇಲೆ ನಡೆದರು.

ಮನೆ ಕಳೆದುಕೊಂಡವರು ಇರುವ ಶಿಬಿರವೊಂದಕ್ಕೆ ಭೇಟಿ ನೀಡಿದರು. ಅಲ್ಲಿನ ಕೆಲವರ ಜೊತೆ ಮಾತುಕತೆ ನಡೆಸಿದರು. ಅವರ ಜೊತೆ ಮಾತನಾಡಿ, ಅವರ ಬೇಡಿಕೆಗಳ ಬಗ್ಗೆ ಆಲಿಸಿದರು. ಅಲ್ಲದೆ, ಅವರಿಗೆ ಸಮಾಧಾನ ಹೇಳಲು ಯತ್ನಿಸಿದರು.

ನಡೆದ ದುರ್ಘಟನೆಯನ್ನು ಪ್ರಧಾನಿಯವರ ಎದುರು ನೆನಪು ಮಾಡಿಕೊಳ್ಳುವ ಸಂದರ್ಭದಲ್ಲಿ ಕೆಲವು ಸಂತ್ರಸ್ತರು ಕಣ್ಣೀರು ಹಾಕಿದರು. ಮೋದಿ ಅವರು, ಸಂತ್ರಸ್ತರ ಭುಜದ ಮೇಲೆ ಕೈ ಇರಿಸಿ, ತಲೆ ಸವರಿ ಸಂತೈಸಲು ಯತ್ನಿಸಿದರು.

ದುರ್ಘಟನೆಯಲ್ಲಿ ಗಾಯಗೊಂಡಿರುವವರು ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಗೆ ಭೇಟಿ ನೀಡಿದ ಮೋದಿ ಅವರು, ಅಗತ್ಯ ನೆರವಿನ ಭರವಸೆಯನ್ನು ಸಂತ್ರಸ್ತರಿಗೆ ನೀಡಿದರು.

ರಾಜ್ಯದ ಮನವಿಗಳಿಗೆ ಪ್ರಧಾನಿಯವರು ಪೂರಕವಾಗಿ ಸ್ಪಂದಿಸಿದರು ಎಂದು ಕೇರಳದ ಸಚಿವರಾದ ಕೆ. ರಾಜನ್ ಹಾಗೂ ಎ.ಕೆ. ಶಶೀಂದ್ರನ್ ಅವರು ತಿಳಿಸಿದರು.

ಪುನರ್ವಸತಿಗೆ ₹2,000 ಕೋಟಿ ಕೋರಿಕೆ

ವಯನಾಡ್ (ಪಿಟಿಐ): ಭೂಕುಸಿತ, ದಿಢೀರ್ ಪ್ರವಾಹದ ಕಾರಣದಿಂದಾಗಿ ವಯನಾಡ್ ಪ್ರದೇಶದಲ್ಲಿ ಆಗಿರುವ ನಷ್ಟದ ಮೊತ್ತವು ₹1,200 ಕೋಟಿ ಎಂದು ಕೇರಳದ ಕಂದಾಯ ಸಚಿವ ಕೆ. ರಾಜನ್ ತಿಳಿಸಿದರು. ಪುನರ್ವಸತಿಗಾಗಿಯೇ ಕೇಂದ್ರದಿಂದ ₹2,000 ಕೋಟಿ ಕೋರಲಾಗಿದೆ ಎಂದರು.

ರಾಜ್ಯದ ಕೋರಿಕೆಗಳಿಗೆ ಕೇಂದ್ರವು ಪೂರಕವಾಗಿ ಸ್ಪಂದಿಸಲಿದೆ ಎಂಬ ಭರವಸೆಯನ್ನು ಪ್ರಧಾನಿ ಜೊತೆಗಿನ ಸಭೆಯಲ್ಲಿ ಭಾಗಿಯಾಗಿದ್ದ ಕೆಲವು ಸಚಿವರು ವ್ಯಕ್ತಪಡಿಸಿದ್ದಾರೆ.

ಪರಿಶಿಷ್ಟರ ಮೀಸಲಾತಿಯಲ್ಲಿ ಕೆನೆಪದರ: ಖರ್ಗೆ ವಿರೋಧ

ಪ್ರಜಾವಾಣಿ ವಾರ್ತೆ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ಪರಿಶಿಷ್ಟ ಜಾತಿಗಳು (ಎಸ್‌ಸಿ) ಹಾಗೂ ಪರಿಶಿಷ್ಟ ಪಂಗಡಗಳಲ್ಲಿ (ಎಸ್‌ಟಿ) ಕೆನೆಪದರದವರನ್ನು ಗುರುತಿಸಿ, ಅವರನ್ನು ಮೀಸಲಾತಿ ಕೋಟಾದಿಂದ ಹೊರಗಿರಿಸುವ ಆಲೋಚನೆಯು ಖಂಡನಾರ್ಹ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ಹೇಳಿದರು.

ಕೆನೆಪದರವನ್ನು ಗುರುತಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿರುವುದನ್ನು ಅನೂರ್ಜಿತಗೊಳಿಸುವ ಮಸೂದೆಯನ್ನು ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಡಿಸಬೇಕಿತ್ತು ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಕೂಡ ಆಗಿರುವ ಖರ್ಗೆ ಅವರು ಹೇಳಿದರು.

ಎಸ್‌ಸಿ ಹಾಗೂ ಎಸ್‌ಟಿ ಸಮುದಾಯಗಳಿಗೆ ನೀಡಿರುವ ಮೀಸಲಾತಿಯಲ್ಲಿ ಕೆನೆಪದರ ತತ್ವವನ್ನು ಜಾರಿಗೆ ತರುವುದಕ್ಕೆ ಸಂವಿಧಾನದ ಅಡಿಯಲ್ಲಿ ಅವಕಾಶ ಇಲ್ಲ ಎಂದು ಕೇಂದ್ರ ಸಚಿವ ಸಂಪುಟವು ಹೇಳಿದ ನಂತರದಲ್ಲಿ ಖರ್ಗೆ ಅವರು ಈ ಮಾತುಗಳನ್ನು ಆಡಿದ್ದಾರೆ.

'ಕೆನೆಪದರ ತತ್ವವನ್ನು ಜಾರಿಗೆ ತರುವ ಮೂಲಕ ಯಾರಿಗೆ ಲಾಭ ಮಾಡಿಕೊಡುತ್ತೀರಿ? ಕೆನೆಪದರ ತತ್ವವನ್ನು ಅಳವಡಿಸಿ ನೀವು ಅಸ್ಪೃಶ್ಯರಿಗೆ ಸೌಲಭ್ಯ ನಿರಾಕರಿಸುತ್ತೀರಿ, ಸಹಸ್ರಾರು ವರ್ಷಗಳಿಂದ ಸವಲತ್ತುಗಳನ್ನು ಅನುಭವಿಸುತ್ತ ಬಂದವರಿಗೆ ಅದನ್ನು ಕೊಡುತ್ತೀರಿ. ಇದನ್ನು ನಾನು ಖಂಡಿಸುತ್ತೇನೆ... ಈ ದೇಶದಲ್ಲಿ ಅಸ್ಪೃಶ್ಯತೆಯ ಆಚರಣೆ ಇರುವವರೆಗೂ ಮೀಸಲಾತಿ ಇರಬೇಕು, ಇದಕ್ಕಾಗಿ ನಾವು ಹೋರಾಡುತ್ತೇವೆ' ಎಂದು ಖರ್ಗೆ ಅವರು ಸುದ್ದಿಗಾರರ ಬಳಿ ಹೇಳಿದರು.

ಬಿಜೆಪಿಯು ಮೀಸಲಾತಿ ವ್ಯವಸ್ಥೆಯನ್ನು ಕೊನೆಗೊಳಿಸಲು ಯತ್ನಿಸುತ್ತಿದೆ ಎಂದು ಆರೋಪಿಸಿದ ಖರ್ಗೆ, ಸರ್ಕಾರಿ ವ್ಯವಸ್ಥೆಯಲ್ಲಿ ಇದ್ದ ಉದ್ಯೋಗಗಳನ್ನು ಮೋದಿ ನೇತೃತ್ವದ ಆಡಳಿತ ವ್ಯವಸ್ಥೆಯು ಖಾಸಗಿಯವರಿಗೆ ಒಪ್ಪಿಸಿದೆ, ಹಲವು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ ಎಂದು ದೂರಿದರು.

'ಎಸ್‌ಸಿಗಳು ಹಾಗೂ ಎಸ್‌ಟಿಗಳಿಗೆ ಉದ್ಯೋಗ ಪಡೆಯಲು ಆಗುತ್ತಿಲ್ಲ. ಉನ್ನತ ಸ್ಥಾನಗಳಲ್ಲಿ ಎಸ್‌ಸಿ ಸಮುದಾಯದವರು ಇಲ್ಲ. ಎಸ್‌ಸಿ ಹಾಗೂ ಎಸ್‌ಟಿಗಳನ್ನು ಕೆನೆಪದರದಲ್ಲಿ ವರ್ಗೀಕರಿಸಿ ಅವರು ಈ ಎರಡು ಸಮುದಾಯಗಳನ್ನು ಹತ್ತಿಕ್ಕಲು ಯತ್ನಿಸುತ್ತಿದ್ದಾರೆ. ಕೋರ್ಟ್ ಆದೇಶ ನನಗೆ ಆಶ್ಚರ್ಯ ಮೂಡಿಸುವಂತಿದೆ. ದೊಡ್ಡ ಹುದ್ದೆಗಳಲ್ಲಿ ಇರುವ ಎಸ್‌ಸಿ ಹಾಗೂ ಎಸ್‌ಟಿ ಸಮುದಾಯದವರು ಅಲ್ಲಿಯೂ ತಾರತಮ್ಯ ಎದುರಿಸುತ್ತಿದ್ದಾರೆ. ಹಣ ಇದ್ದರೂ ಅವರಿಗೆ ತಾರತಮ್ಯ ಎದುರಾಗುತ್ತದೆ' ಎಂದು ಖರ್ಗೆ ಹೇಳಿದರು.

ಮಾದಕವಸ್ತು ಖರೀದಿಗೆ ಕ್ರಿಪ್ಟೊಕರೆನ್ಸಿ: ಸಾಫ್ಟ್‌ವೇರ್ ಎಂಜಿನಿಯರ್ ಬಂಧನ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಡಾರ್ಕ್ ವೆಬ್ ಬಳಸಿ ಆನ್‌ಲೈನ್ ಮೂಲಕ ಮಾದಕವಸ್ತು ಖರೀದಿಸಲು ಆರ್ಡರ್ ಮಾಡಿ, ಕ್ರಿಪ್ಟೊಕರೆನ್ಸಿ ಬಳಸಿ ಹಣ ಪಾವತಿಸಿದ್ದ ಸಾಫ್ಟ್‌ವೇರ್ ಎಂಜಿನಿಯರ್‌ರೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ತೆಲಂಗಾಣದ ಮಾದಕವಸ್ತು ನಿಗ್ರಹ ಘಟಕದ ತಾಂತ್ರಿಕ ವಿಭಾಗವು, ಈ ಆನ್‌ಲೈನ್ ವಹಿವಾಟನ್ನು ಗುರುತಿಸಿದೆ. ಈ ಮೂಲಕ ಡಾರ್ಕ್‌ವೆಬ್ ಬಳಸಿ ಮಾದಕವಸ್ತು ಮಾರಾಟ ನಡೆಯುತ್ತಿದ್ದ ಜಾಲವನ್ನು ಪತ್ತೆ ಮಾಡಿದೆ..

ಮಾದಕವಸ್ತು ನಿಗ್ರಹ ಘಟಕದ ತೀವ್ರ ನಿಗಾ ಹಿನ್ನೆಲೆಯಲ್ಲಿ ರಾಜ್ಯವನ್ನು ನೆಲೆಯಾಗಿಸಿಕೊಂಡು ಮಾದಕವಸ್ತು ಸಾಗಣೆ, ಮಾರಾಟದಲ್ಲಿ ತೊಡಗಿದ್ದ ಅನೇಕ ದುಷ್ಕರ್ಮಿಗಳು ತಮ್ಮ ಚಟುವಟಿಕೆಗಳನ್ನು ಕಡಿಮೆ ಮಾಡಿದ್ದಾರೆ ಅಥವಾ ರಾಜ್ಯದಿಂದಲೇ ಹೊರನಡೆದಿದ್ದಾರೆ ಎನ್ನಲಾಗಿದೆ.

ಮಾದಕವಸ್ತು ಮಾರಾಟ ಆರೋಪಿಗಳ ಪತ್ತೆ ಜೊತೆಗೆ ಈಗ ಘಟಕವು, ಆನ್‌ಲೈನ್ ವಹಿವಾಟಿನ ಮೇಲೂ ನಿಗಾ ಇಟ್ಟಿದೆ. ಈ ಘಟಕವು ನೀಡಿದ್ದ ಮಾಹಿತಿ ಆಧರಿಸಿ ಕಮ್ಮಂ ಪಟ್ಟಣದಿಂದ ಸ್ಥಳೀಯ ಪೊಲೀಸರು ಸಾಫ್ಟ್‌ವೇರ್ ಎಂಜಿನಿಯರ್‌ನನ್ನು ಬಂಧಿಸಿದ್ದಾರೆ.

ಸಾಫ್ಟ್‌ವೇರ್ ಎಂಜಿನಿಯರ್ ಜುಲೈ 31ರಂದು ಡಾರ್ಕ್‌ವೆಬ್ ಮೂಲಕ ವಹಿವಾಟು ನಡೆಸಿದ್ದ. ಕ್ರಿಪ್ಟೊಕರೆನ್ಸಿ ಮೂಲಕ ಹಣ ಸಂದಾಯವಾದ ಬಳಿಕ, ಅಸ್ಸಾಂ ಸಿಲ್‌ಪುಖುರಿಯಿಂದ ಮಾದಕವಸ್ತು ಕಳುಹಿಸಲಾಗಿತ್ತು. ಪೊಲೀಸರು ಈ ವಹಿವಾಟು ಗಮನಿಸುತ್ತಿದ್ದರು. ಆ. 8ರಂದು ಸ್ಪೀಡ್ ಪೋಸ್ಟ್ ಮೂಲಕ ಮಾದಕವಸ್ತು ಮನೆಗೆ ತಲುಪುತ್ತಿದ್ದಂತೆ ಬಂಧಿಸಿದರು.

ವಿದ್ಯಾರ್ಥಿನಿ ಕೊಲೆ: ಅಪರಾಧಿಗಳಿಗೆ ಕಠಿಣ ಶಿಕ್ಷೆಗೆ ನೀಡಿ– ಆಗ್ರಹ

ವೈದ್ಯ ವಿದ್ಯಾರ್ಥಿಗಳ ಆಕ್ರೋಶ, ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ವೈದ್ಯ ವಿದ್ಯಾರ್ಥಿನಿಯ ಕೊಲೆ ಕೃತ್ಯಕ್ಕೆ ವಿದ್ಯಾರ್ಥಿ ಸಮುದಾಯದಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಆರೋಪಿಗೆ ಕಠಿಣ ಶಿಕ್ಷೆ ಗುರಿಪಡಿಸಬೇಕೆಂದು ಆಗ್ರಹಪಡಿಸಿ ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಕಿರಿಯ ವೈದ್ಯರು ಪ್ರತಿಭಟನೆ ನಡೆಸಿದರು.

ಕಿರಿಯ ವೈದ್ಯರು, ತರಬೇತಿ ನಿರತ ವೈದ್ಯರು, ಸ್ನಾತಕೋತ್ತರ ವಿದ್ಯಾರ್ಥಿನಿಯರು, ವೈದ್ಯೇತರ ಸಿಬ್ಬಂದಿಯು ಆರ್.ಜಿ. ಕರ್ ವೈದ್ಯಕೀಯ ಕಾಲೇಜು, ನ್ಯಾಷನಲ್ ವೈದ್ಯಕೀಯ ಕಾಲೇಜು ಸೇರಿ ವಿವಿಧೆಡೆ ಪ್ರತಿಭಟಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಲ್ಲಿಯೂ ಪ್ರತಿಭಟನೆ ನಡೆದಿವೆ.

ಕೃತ್ಯ ಎಸಗಿದ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕು ಮತ್ತು ಕರ್ತವ್ಯದಲ್ಲಿರುವ ವೈದ್ಯರಿಗೆ ರಕ್ಷಣೆ ಒದಗಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆ ನಡೆದ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸಾ ಸೇವೆಯು ಎಂದಿನಂತೆ ಇತ್ತು. ಎಸ್‌ಎಫ್‌ಐ, ಡಿವೈಎಫ್‌ಐ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆಗೆ ಕೈಜೋಡಿಸಿದ್ದು,ರಾಜ್ಯದ ವಿವಿಧೆಡೆ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ತರಬೇತಿ ನಿರತ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿ ಮೇಲಿನ ಲೈಂಗಿಕ ದೌರ್ಜನ್ಯ, ಕೊಲೆ ಕೃತ್ಯ ಖಂಡಿಸಿ ಕೋಲ್ಕತ್ತದಲ್ಲಿ ಕಿರಿಯ ವೈದ್ಯರು ಶನಿವಾರ ಬೃಹತ್ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ತ್ವರಿತ ವಿಚಾರಣೆ, ಕಠಿಣ ಶಿಕ್ಷೆಗೆ ಕ್ರಮ– ಮುಖ್ಯಮಂತ್ರಿ ಮಮತಾ

ಕೋಲ್ಕತ್ತ (ಪಿಟಿಐ): 'ವೈದ್ಯ ವಿದ್ಯಾರ್ಥಿನಿಯ ಕೊಲೆ ಪ್ರಕರಣದ ಆರೋಪಿಗಳಿಗೆ ಮರಣದಂಡನೆ ಶಿಕ್ಷೆ ಆಗಬೇಕು. ಸರ್ಕಾರ ಆ ನಿಟ್ಟಿನಲ್ಲಿ ಕ್ರಮವಹಿಸಲಿದೆ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

'ತರಬೇತಿನಿರತ ವೈದ್ಯೆಯ ಮೇಲೆ ಲೈಂಗಿಕ ದೌರ್ಜನ್ಯ, ಕೊಲೆ ಕೃತ್ಯದ ವಿಚಾರಣೆಯು ತ್ವರಿತ ನ್ಯಾಯಾಲಯದಲ್ಲಿ ನಡೆಯುವಂತೆ ಕ್ರಮಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದ್ದಾರೆ.

ಕೃತ್ಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆ ಸಮರ್ಥನೀಯವಾದುದು ಎಂದು ಹೇಳಿದ್ದಾರೆ.

'ವಿದ್ಯಾರ್ಥಿಗಳ ಬೇಡಿಕೆಯನ್ನು ನಾನೂ ಅನುಮೋದಿಸುತ್ತೇನೆ. ಬೇಡಿಕೆ ಎದುರಾದರೆ ಸಿಬಿಐ ಸೇರಿದಂತೆ ಈ ಪ್ರಕರಣದ ತನಿಖೆಯನ್ನು ಯಾವುದೇ ಸಂಸ್ಥೆಗೆ ಒಪ್ಪಿಸಲು ಸರ್ಕಾರದ ಆಕ್ಷೇಪವಿರುವುದಿಲ್ಲ' ಎಂದು ಹೇಳಿದ್ದಾರೆ.

'ಇದೊಂದು ಭೀಕರ ಮತ್ತು ಹೀನಕೃತ್ಯ. ನನ್ನ ಕುಟುಂಬದ ಸದಸ್ಯರೊಬ್ಬರನ್ನೇ ಕಳೆದುಕೊಂಡಂತಾಗಿದೆ. ಪ್ರತಿಭಟನನಿರತರು ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆ ಒದಗಿಸಲು ಆದ್ಯತೆ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

'ವೈದ್ಯರ ಮೇಲಿನ ಹಲ್ಲೆ ತಡೆಯಲು ಪ್ರತಿ ಆಸ್ಪತ್ರೆಯಲ್ಲಿಯೂ ಪೊಲೀಸ್ ಕ್ಯಾಂಪ್ ಸ್ಥಾಪಿಸಲಾಗುವುದು. ವೈದ್ಯರು ಸೇರಿ ಆಸ್ಪತ್ರೆಯ ಸಿಬ್ಬಂದಿಗೆ ರಕ್ಷಣೆ ಒದಗಿಸುವುದು ಆಯಾ ಆಸ್ಪತ್ರೆಗಳ ಮುಖ್ಯಾಧಿಕಾರಿಗಳು, ಪ್ರಾಂಶುಪಾಲರ ಹೊಣೆಗಾರಿಕೆಯಾಗಿದೆ' ಎಂದು ಹೇಳಿದ್ದಾರೆ.

ಅಂಕಗಳ ಅಂತಿಮ ಪಟ್ಟಿ ಪ್ರಕಟ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿ (ಕಲ್ಯಾಣ ಕರ್ನಾಟಕ) ಹಾಗೂ ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿನ ಖಾಲಿ ಹುದ್ದೆಗಳಿಗೆ ನಡೆಸಲಾಗಿದ್ದ ಲಿಖಿತ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಅಂತಿಮ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪ್ರಕಟಿಸಿದೆ.

ಬೆಂಗಳೂರು ಮಹಾನಗರ ಸಾರಿಗೆ ನಿಗಮದ ನಿರ್ವಾಹಕರ ಹುದ್ದೆಗಳು, ಒಳಚರಂಡಿ ಮಂಡಳಿಯ ಪ್ರಥಮ ದರ್ಜೆ ಸಹಾಯಕರು ಹಾಗೂ ಕೆಎಸ್‌ಆರ್‌ಟಿಸಿಯ ವಿವಿಧ ಹುದ್ದೆಗಳಿಗೆ ಜುಲೈ 13, 14ರಂದು ಲಿಖಿತ ಪರೀಕ್ಷೆ ನಡೆದಿತ್ತು.

'ಸರ್ವಾಧಿಕಾರದ ವಿರುದ್ಧ ಹೋರಾಡಿ'

ನವದೆಹಲಿ (ಪಿಟಿಐ): 'ದೇಶದಲ್ಲಿರುವ ಸರ್ವಾಧಿಕಾರದ ವಿರುದ್ಧ ಜನರು ಹಾಗೂ ಪಕ್ಷದ ಕಾರ್ಯಕರ್ತರು ಹೋರಾಟ ನಡೆಸಬೇಕು' ಎಂದು ಎಎಪಿ ನಾಯಕ ಮನೀಶ್ ಸಿಸೋಡಿಯಾ ಕರೆ ನೀಡಿದರು.

ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದಂತೆ ಜೈಲಿನಿಂದ ಬಿಡುಗಡೆಯಾದ ಮರುದಿನ ಪಕ್ಷದ ಕೇಂದ್ರ ಕಚೇರಿಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಬಿಜೆಪಿ ವಿರುದ್ಧ ಟೀಕಾ ಪ್ರಹಾರ ನಡೆಸಿದ ಅವರು, 'ಸಂವಿಧಾನಕ್ಕಿಂತಲೂ ಅವರು ಹೆಚ್ಚಿನ ಶಕ್ತಿಶಾಲಿಗಳಲ್ಲ. ಜನರನ್ನು ಹಿಂಸಿಸುವ, ನಾಯಕರನ್ನು ಜೈಲಿಗೆ ಹಾಕುವ 'ಸರ್ವಾಧಿಕಾರ'ದ ವಿರುದ್ಧ ಪ್ರತಿಯೊಬ್ಬರು ಹೋರಾಟ ನಡೆಸಬೇಕು ಎಂದು ತಿಳಿಸಿದರು.

'ಜೈಲಿನಲ್ಲಿದ್ದಾಗ ನನಗೆ ಜಾಮೀನು ಸಿಗುವ ಕುರಿತು ಚಿಂತಿತನಾಗಿ ಇರಲಿಲ್ಲ. ಬಿಜೆಪಿಗೆ ದೇಣಿಗೆ ನೀಡದ ಕಾರಣಕ್ಕಾಗಿ ನಕಲಿ ಪ್ರಕರಣಗಳಲ್ಲಿ ಉದ್ಯಮಿಗಳನ್ನು ಜೈಲಿನಲ್ಲಿಟ್ಟಿದ್ದನ್ನು ನೋಡಿ ತೀವ್ರವಾಗಿ ದುಃಖಿತನಾಗಿದ್ದೆ' ಎಂದರು.

'ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ದೇಶದ ಪ್ರಾಮಾಣಿಕತೆಯ ಪ್ರತೀಕ ' ಎಂದು ಬಣ್ಣಿಸಿದರು.

'ಕೇಜ್ರಿವಾಲ್ ಕೆಲಸವನ್ನು ದೂಷಿಸಲು ಷಡ್ಯಂತ್ರ ರೂಪಿಸಿದ್ದು, ವಿರೋಧ ಪಕ್ಷಗಳು ಸರ್ವಾಧಿಕಾರದ ವಿರುದ್ಧ ಒಂದಾಗಿ ಹೋರಾಟ ನಡೆಸಿದರೆ, 24 ಗಂಟೆಯ ಒಳಗಾಗಿ ಅವರು ಜೈಲಿನಿಂದ ಹೊರಬರಲಿದ್ದಾರೆ' ಎಂದು ಸಿಸೋಡಿಯಾ ತಿಳಿಸಿದರು.

ಸಿಜೆ ಹಸನ್ ರಾಜೀನಾಮೆ

ಒಂದನೇ ಪುಟದಿಂದ...

'ನಮ್ಮ ಮುಖ್ಯ ನ್ಯಾಯಮೂರ್ತಿ ಕೆಲ ನಿಮಿಷಗಳ ಹಿಂದೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸುದ್ದಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಅವರ ರಾಜೀನಾಮೆ ಪತ್ರ ಈಗಾಗಲೇ ಕಾನೂನು ಸಚಿವಾಲಯ ತಲುಪಿದೆ' ಎಂದು ಅವರು ಪೋಸ್ಟ್ ಮಾಡಿದ್ದಾರೆ.

'ಮುಖ್ಯ ನ್ಯಾಯಮೂರ್ತಿ ಸಲ್ಲಿಸಿರುವ ರಾಜೀನಾಮೆ ಪತ್ರ ಮಾತ್ರ ನಮಗೆ ತಲುಪಿದೆ. ಉಳಿದ ನ್ಯಾಯಮೂರ್ತಿಗಳ ರಾಜೀನಾಮೆ ಕುರಿತು ಹೆಚ್ಚಿನ ಮಾಹಿತಿ ಇಲ್ಲ. ಮುಖ್ಯ ನ್ಯಾಯಮೂರ್ತಿಗಳ ರಾಜೀನಾಮೆ ಪತ್ರವನ್ನು ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರಿಗೆ ಕಳುಹಿಸಿ ಕೊಡಲಾಗಿದೆ' ಎಂದೂ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಸಭೆ ರದ್ದು: ಇದಕ್ಕೂ ಮುನ್ನ, ತಮ್ಮ ರಾಜೀನಾಮೆಗೆ ಆಗ್ರಹಿಸಿ ವಿದ್ಯಾರ್ಥಿಗಳು ಪ್ರತಿಭಟನೆ ಆರಂಭಿಸಿದ ಬೆನ್ನಲ್ಲೇ, ಮುಖ್ಯ ನ್ಯಾಯಮೂರ್ತಿ ಹಸನ್ ಅವರು ಸುಪ್ರೀಂ ಕೋರ್ಟ್‌ನ ಎಲ್ಲ ನ್ಯಾಯಮೂರ್ತಿಗಳ ಸಭೆ ನಡೆಸಲು ಮುಂದಾಗಿದ್ದರು.

ಈ ಸುದ್ದಿ ತಿಳಿಯುತ್ತಿದ್ದಂತೆಯೇ, ವಿದ್ಯಾರ್ಥಿಗಳು ಸುಪ್ರೀಂ ಕೋರ್ಟ್‌ನತ್ತ ಮೆರವಣಿಗೆಯಲ್ಲಿ ಹೊರಟರು.

'ಮಾಜಿ ಪ್ರಧಾನಿ ಶೇಖ್ ಹಸೀನಾ ನೇತೃತ್ವದ ಅವಾಮಿ ಲೀಗ್ ಪಕ್ಷಕ್ಕೆ ನಿಷ್ಠರಾಗಿರುವ ಮುಖ್ಯ ನ್ಯಾಯಮೂರ್ತಿ ಹಾಗೂ ಇತರ ನ್ಯಾಯಮೂರ್ತಿಗಳು ಕೂಡಲೇ ರಾಜೀನಾಮೆ ನೀಡಬೇಕು. ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಸಮಗ್ರ ಸುಧಾರಣೆ ತರಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ವಿದ್ಯಾರ್ಥಿಗಳು ಸುಪ್ರೀಂ ಕೋರ್ಟ್‌ನತ್ತ ಮೆರವಣಿಗೆಯಲ್ಲಿ ಹೊರಟಿದ್ದಾರೆ ಎಂಬ ಸುದ್ದಿ ತಿಳಿಯುತ್ತಿದ್ದಂತೆಯೇ, ನ್ಯಾಯಮೂರ್ತಿಗಳೊಂದಿಗಿನ ಸಭೆಯನ್ನು ಮುಖ್ಯ ನ್ಯಾಯಮೂರ್ತಿ ಹಸನ್ ರದ್ದುಗೊಳಿಸಿ, ತಮ್ಮ ರಾಜೀನಾಮೆ ನಿರ್ಧಾರವನ್ನು ಪ್ರಕಟಿಸಿದರು.

ವಿದ್ಯಾರ್ಥಿಗಳ ಪ್ರತಿಭಟನಾ ಮೆರವಣಿಗೆ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ಕಟ್ಟಡ ಹಾಗೂ ಇತರ ಕಟ್ಟಡಗಳಿಗೆ ಭಾರಿ ಭದ್ರತೆ ಒದಗಿಸಲಾಗಿತ್ತು. ಯೋಧರನ್ನು ನಿಯೋಜಿಸಲಾಗಿತ್ತು.

ಬಾಂಗ್ಲಾದೇಶ: ಮಾಹಿತಿ ಹಂಚಿಕೊಂಡ ಹಿಂದೂ ಸಂಘಟನೆಗಳು

'ಅಲ್ಪಸಂಖ್ಯಾತರ ಮೇಲೆ 205 ದಾಳಿಗಳು'

ಢಾಕಾ(ಪಿಟಿಐ): ಶೇಖ್ ಹಸೀನಾ ನೇತೃತ್ವದ ಸರ್ಕಾರ ಪತನವಾದ ನಂತರ, ದೇಶದ 52 ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಕನಿಷ್ಠ 205 ದಾಳಿಗಳು ನಡೆದಿವೆ ಎಂದು ಎರಡು ಹಿಂದೂ ಸಂಘಟನೆಗಳು ಹೇಳಿವೆ.

ಈ ಕುರಿತು, ಬಾಂಗ್ಲಾದೇಶ ಹಿಂದೂ, ಬುದ್ಧಿಸ್ಟ್ ಕ್ರಿಶ್ಚಿಯನ್ ಯುನಿಟಿ ಕೌನ್ಸಿಲ್ ಹಾಗೂ ಬಾಂಗ್ಲಾದೇಶ ಪೂಜಾ ಉದ್ಯಾಪನ ಪರಿಷತ್ ಎಂಬ ಸಂಘಟನೆಗಳು ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರಿಗೆ ಬರೆದ ಪತ್ರದಲ್ಲಿ ವಿವರಿಸಿವೆ.

'ನಾವು ವಿಪತ್ತಿನಲ್ಲಿದ್ದು, ರಕ್ಷಣೆ ನೀಡಬೇಕು. ರಾತ್ರಿ ನಿದ್ದೆ ಮಾಡದೇ, ನಮ್ಮ ಮನೆಗಳು ಹಾಗೂ ದೇವಸ್ಥಾನಗಳನ್ನು ರಕ್ಷಣೆ ಮಾಡುತ್ತಿದ್ದೇವೆ. ನನ್ನ ಜೀವಮಾನದಲ್ಲಿಯೇ ಇಂತಹ ಪರಿಸ್ಥಿತಿ ನೋಡಿರಲಿಲ್ಲ. ಕೂಡಲೇ ದೇಶದಲ್ಲಿ ಕೋಮು ಸೌಹಾರ್ದ ಮರುಸ್ಥಾಪಿಸಬೇಕು' ಎಂದು ಕೌನ್ಸಿಲ್‌ನ ಅಧ್ಯಕ್ಷರಲ್ಲೊಬ್ಬರಾದ ನಿರ್ಮಲ್ ರೊಸಾರಿಯೊ ಹೇಳಿದ್ದಾರೆ.

ಸಂಘಟನೆಗಳ ಮುಖಂಡರಾದ ರಾಣಾ ದಾಸಗುಪ್ತ, ಬಸುದೇವ ಧರ್, ಕಾಜಲ್ ದೇವನಾಥ್ ಮತ್ತಿತರರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

ಬಾಂಗ್ಲಾದೇಶದ ಹಿಂದೂಗಳ ಮನೆಗಳು, ದೇವಾಲಯಗಳು, ಅಂಗಡಿ ಮುಂಗಟ್ಟುಗಳ ಮೇಲೆ ನಡೆದಿರುವ ದಾಳಿ ಖಂಡಿಸಿ ಸಮುದಾಯದ ಸದಸ್ಯರು ಢಾಕಾದ ಶಾಹಬಾಗ್ ವೃತ್ತದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಬ್ಯಾಂಕ್ ಗವರ್ನರ್ ರಾಜೀನಾಮೆ?

ಢಾಕಾ(ರಾಯಿಟರ್ಸ್): ಬಾಂಗ್ಲಾದೇಶ ಬ್ಯಾಂಕ್ ಗವರ್ನರ್ ಅಬ್ದುರ್ ರೌಫ್ ತಾಲೂಕ್ದರ್ ಶನಿವಾರ ರಾಜೀನಾಮೆ ನೀಡಿದ್ದಾರೆ. ಆದರೆ, ಅವರ ಹುದ್ದೆಯು ಮಹತ್ವದ್ದಾಗಿರುವ ಕಾರಣ, ರಾಜೀನಾಮೆ ಅಂಗೀಕಾರವಾಗಿಲ್ಲ ಎಂದು ಹಣಕಾಸು ಸಚಿವಾಲಯ ಸಲಹೆಗಾರ ಸಲೆಹುದ್ದೀನ್ ಅಹ್ಮದ್ ತಿಳಿಸಿದ್ದಾರೆ.

ಢಾಕಾ ವಿಶ್ವವಿದ್ಯಾಲಯ ಕುಲಪತಿ ಎ.ಎಸ್.ಎಂ.ಮಕ್ಸೂದ್ ಕಮಾಲ್ ಅವರೂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

'ಅಬು ಅನುಕರಿಸಿ'

'ವಿದ್ಯಾರ್ಥಿ ಹೋರಾಟಗಾರ ಅಬು ಸಯೇದ್ ಅವರ ದಿಟ್ಟತನ ಎಲ್ಲರಿಗೂ ಮಾದರಿ. ಸರ್ಕಾರವನ್ನೇ ಉರುಳಿಸಿದ ಹೋರಾಟದ ವೇಳೆ ಅಬು ತೋರಿದ ಸ್ಥೈರ್ಯವನ್ನು ಎಲ್ಲರೂ ಅನುಕರಣೆ ಮಾಡಬೇಕು' ಎಂದು ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಶನಿವಾರ ಹೇಳಿದರು.

ಹೋರಾಟದ ವೇಳೆ ಜುಲೈ 16ರಂದು ಪೊಲೀಸರ ಗುಂಡಿಗೆ ಬಲಿಯಾದ ಮೊದಲ ವ್ಯಕ್ತಿ ಅಬು ಸಯೇದ್. 25 ವರ್ಷದ ಅಬು, ರಂಗಪುರದ ಬೇಗಂ ರಕೆಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದರು.

ರಂಗಪುರದ ಪೀರಗಂಜ್‌ನಲ್ಲಿರುವ ಅಬು ಅವರ ನಿವಾಸಕ್ಕೆ ಭೇಟಿ, ಅವರ ಕುಟುಂಸ್ಥರಿಗೆ ಸಾಂತ್ವನ ಹೇಳಿದ ನಂತರ ಅವರು ಮಾತನಾಡಿದರು. 'ನಾವೆಲ್ಲರೂ ಅಬು ಕುಟುಂಬದೊಂದಿಗೆ ನಿಲ್ಲಬೇಕಿದೆ. ಅವರ ಕುಟುಂಬಸ್ಥರನ್ನು ರಕ್ಷಿಸುವ ಹೊಣೆ ನಮ್ಮ ಮೇಲಿದೆ' ಎಂದರು.

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹470
12 ಕ್ಕೆ ₹60
ಮೈಸೂರು
100ಕ್ಕೆ ₹470

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹280-472
ದ್ವಿತಳಿ (ಬಿ.ವಿ)
₹326-629

ಎನ್.ಆರ್.ಪುರ ರಬ್ಬರ್

ಆರ್ಎಸ್ಎಸ್-4
₹243
ಆರ್ಎಸ್ಎಸ್-5
₹232
ಗುಡ್ ಲಾಟ್
(ಪ್ರತಿ ಕೆ.ಜಿಗೆ) ₹221

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

12ನೇ ವರ್ಷದ ಚಿರಸ್ಮರಣೆ

ಶ್ರೀ ಎಲ್. ಪದ್ಮನಾಭರೆಡ್ಡಿ
ನಿಧನ : 11.8.2012
ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳು, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ. ನಿಮ್ಮನ್ನು ಸದಾ ಸ್ಮರಿಸುವ.....
ದುಃಖತಪ್ತರು: ಪತ್ನಿ– ಶ್ರೀಮತಿ ಶಶಿಕಲಾ ಮತ್ತು ಮಕ್ಕಳು ಹಾಗೂ ಕುಟುಂಬದವರು

ಚಿರಸ್ಮರಣೆ

ಪಿ. ಡಿ. ವಿಜಯಕುಮಾರ್ (ಪಿ.ಡಿ.ವಿ)
02.10.1951 | 30.07.2024
ನೀವು ಎಂದಿಗೂ ನೆನಪಿನಲ್ಲಿರುವಿರಿ
–ಸುಮತಿ, ಸಂದೀಪ್, ವಾಣಿ ಅಭಿರಾಮ್, ಭವ್ಯ ಮತ್ತು ಕುಟುಂಬ

LOOKING FOR JOB OPPORTUNITY
Refer Classifieds on Wednesday

ಬಾಂಗ್ಲಾದೇಶದ ಬಿಕ್ಕಟ್ಟು: ಜವಳಿಗೆ ತುಸು ಪೆಟ್ಟು

ನವದೆಹಲಿ (ಪಿಟಿಐ): 'ಬಾಂಗ್ಲಾದೇಶದಲ್ಲಿ ತಲೆದೋರಿರುವ ಬಿಕ್ಕಟ್ಟಿನಿಂದಾಗಿ ದೇಶದ ಗಾರ್ಮೆಂಟ್ ಮತ್ತು ಹೆಣಿಗೆ ಬಟ್ಟೆ ಉದ್ಯಮವು ಕೊಂಚಮಟ್ಟಿಗೆ ಅನಿಶ್ಚಿತತೆ ಎದುರಿಸುತ್ತಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೊಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರವು ಈ ಬಿಕ್ಕಟ್ಟಿಗೆ ಪರಿಹಾರ ಹುಡುಕಲಿದ್ದು, ಶೀಘ್ರವೇ ಬಗೆಹರಿಯಲಿದೆ. ಆ ಬಳಿಕ ಉದ್ಯಮದ ವಹಿವಾಟು ಸಹಜ ಸ್ಥಿತಿಗೆ ಮರಳಲಿದೆ' ಎಂದು ಹೇಳಿದರು.

ತಮಿಳುನಾಡಿನ ಜವಳಿ ಉದ್ದಿಮೆದಾರರು ಬಾಂಗ್ಲಾದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಮಾಡಿದ್ದಾರೆ. ಆ ರಾಷ್ಟ್ರದ ರಫ್ತು ಪ್ರಮಾಣ ಹೆಚ್ಚಿದೆ. ಅಲ್ಲಿ ಬಂಡವಾಳ ಹೂಡಿರುವ ಭಾರತೀಯ ಜವಳಿ ಉದ್ದಿಮೆದಾರರು ಭಾರತಕ್ಕೂ ರಫ್ತು ಮಾಡಬಹುದಾಗಿದೆ ಎಂದರು.

'ಅಲ್ಲಿ ಹೂಡಿಕೆ ಮಾಡಿರುವ ಬಂಡವಾಳ ಸುರಕ್ಷಿತವಾಗಿದೆ. ದೇಶದ ಆರ್ಥಿಕ ಪರಿಸ್ಥಿತಿ ಮೇಲೆ ಅಲ್ಲಿನ ಬಿಕ್ಕಟ್ಟು ಯಾವ ರೀತಿಯ ಪರಿಣಾಮ ಬೀರುತ್ತದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ' ಎಂದರು.

ರಫ್ತು ಪ್ರಮಾಣ ಇಳಿಕೆ

ದೇಶೀಯ ಆಟಿಕೆಗೆ ಕುಗ್ಗಿದ ಬೇಡಿಕೆ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಭಾರತೀಯ ಆಟಿಕೆಗಳಿಗೆ ಬೇಡಿಕೆ ಕುಗ್ಗಿರುವುದರಿಂದ, ರಫ್ತು ಪ್ರಮಾಣವು ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2021–22ರಲ್ಲಿ ಭಾರತವು ₹1,500 ಕೋಟಿ ಮೌಲ್ಯದ ಆಟಿಕೆಗಳನ್ನು ರಫ್ತು ಮಾಡಿತ್ತು. 2023–24ರಲ್ಲಿ ₹1,300 ಕೋಟಿ ಮೌಲ್ಯದ ಆಟಿಕಗಳನ್ನು ರಫ್ತು ಮಾಡಿದೆ.

'ಭಾರತವು ಪ್ರಮುಖವಾಗಿ ಅಮೆರಿಕ, ಬ್ರಿಟನ್ ಮತ್ತು ಜರ್ಮನಿಗೆ ರಫ್ತು ಮಾಡುತ್ತದೆ. ಈ ರಾಷ್ಟ್ರಗಳಲ್ಲಿ ಶೇ 16ರಿಂದ ಶೇ 20ರಷ್ಟು ಬೇಡಿಕೆ ಕಡಿಮೆಯಾಗಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆಯ ರಾಜ್ಯ ಸಚಿವ ಜಿತಿನ್ ಪ್ರಸಾದ, ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಜಾಗತಿಕ ಮಟ್ಟದ ಆಟಿಕೆಗಳ ಮಾರುಕಟ್ಟೆಯಲ್ಲಿ ಭಾರತದ ಪಾಲು ತೀರಾ ಕಡಿಮೆಯಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಇರುವ ಬೇಡಿಕೆಯನ್ನು ಅವಲೋಕಿಸಿದರೆ ದೇಶದಿಂದ ಆಗುವ ಆಟಿಕೆಗಳ ರಫ್ತಿನ ಪ್ರಮಾಣ ಶೇ 0.3ರಷ್ಟಿದೆ. ಆಟಿಕೆ ಉದ್ದಿಮೆ ವಲಯದಲ್ಲಿ ರಫ್ತಿಗೆ ಬಹಳಷ್ಟು ಅವಕಾಶವಿದ್ದರೂ, ನಿರೀಕ್ಷಿತ ಗುರಿ ಸಾಧನೆಯಾಗುತ್ತಿಲ್ಲ ಎನ್ನುವುದು ಮಾರುಕಟ್ಟೆ ತಜ್ಞರ ಹೇಳಿಕೆ. ದೇಶೀಯ ಆಟಿಕೆ ಉದ್ಯಮದ ಬೆಳವಣಿಗೆಗೆ ಕೇಂದ್ರ ಸರ್ಕಾರ ಹಲವು ಕ್ರಮಕೈಗೊಂಡಿದೆ. ದೇಶೀಯ ತಯಾರಕರಿಗೆ ಹೆಚ್ಚಿನ ಉತ್ತೇಜನ ನೀಡುತ್ತಿದೆ. 2020ರಲ್ಲಿ ಆಮದು ಆಟಿಕೆಗಳ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಶೇ 20ರಿಂದ 60ಕ್ಕೆ ಹೆಚ್ಚಿಸಿದೆ. ಗುಣಮಟ್ಟ ನಿಯಂತ್ರಣ ಆದೇಶ ಪಾಲನೆಗೆ ಸೂಚಿಸಿದೆ.



ಆರ್ಥಿಕ ಸಮೀಕ್ಷೆ ಹೇಳಿದ್ದೇನು?

ಆಟಿಕೆಗಳ ಆಮದಿಗೆ ಸಂಬಂಧಿಸಿದಂತೆ ಚೀನಾದ ಮೇಲಿನ ಅತಿಯಾದ ಅವಲಂಬನೆ ತಪ್ಪಿಸಲು ಹಲವು ಕ್ರಮ ಕೈಗೊಳ್ಳಲಾಗಿದೆ ಎಂದು ಇತ್ತೀಚೆಗೆ ಸಂಸತ್‌ನಲ್ಲಿ ಮಂಡಿಸಿರುವ ಆರ್ಥಿಕ ಸಮೀಕ್ಷಾ ವರದಿ ಹೇಳಿದೆ.

ಭಾರತವನ್ನು ಆಟಿಕೆಗಳ ರಫ್ತು ಮಾಡುವ ದೇಶಗಳ ಪಟ್ಟಿಯಲ್ಲಿ ಮುಂಚೂಣಿಗೆ ತರಲು ಅಗತ್ಯ ಕ್ರಮವಹಿಸಲಾಗಿದೆ. ಕಳೆದ ಒಂದು ದಶಕದ ಅವಧಿಯಲ್ಲಿ ಚೀನಾದಿಂದ ಆಮದು ಪ್ರಮಾಣವು ಶೇ 76ರಷ್ಟು ಕಡಿಮೆಯಾಗಿದೆ ಎಂದು ವಿವರಿಸಿದೆ.

2012–13ರಲ್ಲಿ ಚೀನಾದಿಂದ ₹1,800 ಕೋಟಿ ಮೌಲ್ಯದ ಆಟಿಕೆಗಳನ್ನು ಆಮದು ಮಾಡಿಕೊಳ್ಳಲಾಗಿತ್ತು. 2023–24ರಲ್ಲಿ ₹350 ಕೋಟಿಗೆ ತಗ್ಗಿದೆ. ಇದು ಜಾಗತಿಕ ಮಟ್ಟದಲ್ಲಿ ಭಾರತದ ಸ್ಪರ್ಧಾತ್ಮಕತೆಯ ಸೂಚಕವಾಗಿದೆ ಎಂದು ಹೇಳಿದೆ.

ಚೀನಾ ಮುಂಚೂಣಿ

ಆಟಿಕೆಗಳ ರಫ್ತಿನಲ್ಲಿ ಚೀನಾ ಮುಂಚೂಣಿಯಲ್ಲಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಇದರ ಪಾಲು ಶೇ 80ರಷ್ಟಿದೆ. ₹4 ಲಕ್ಷ ಕೋಟಿ ಮೌಲ್ಯದ ಆಟಿಕೆಗಳನ್ನು ರಫ್ತು ಮಾಡುತ್ತದೆ. ಆ ನಂತರದ ಸ್ಥಾನದಲ್ಲಿ ಜೆಕ್ ರಿಪಬ್ಲಿಕ್, ಯುರೋಪಿಯನ್ ಒಕ್ಕೂಟ, ವಿಯೆಟ್ನಾಂ ಮತ್ತು ಹಾಂಗ್‌ಕಾಂಗ್ ಇವೆ.

ರಫ್ತಿನಲ್ಲಿ ಭಾರತವು 27ನೇ ಸ್ಥಾನ ಹಾಗೂ ಆಮದು ಮಾಡಿಕೊಳ್ಳುವ ರಾಷ್ಟ್ರಗಳ ಪಟ್ಟಿಯಲ್ಲಿ 61ನೇ ಸ್ಥಾನದಲ್ಲಿದೆ.

ಅತಿಹೆಚ್ಚು ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ದೇಶಗಳ ಪೈಕಿ ಅಮೆರಿಕ ಮುಂಚೂಣಿಯಲ್ಲಿದೆ. ಆ ನಂತರದಲ್ಲಿ ಯುರೋಪಿಯನ್ ಒಕ್ಕೂಟ, ಜಪಾನ್ ಹಾಗೂ ಕೆನಡಾ ಇವೆ.

ರಫ್ತು ಇಳಿಕೆಗೆ ಕಾರಣ ಏನು?

ಜಾಗತಿಕ ಬಿಕ್ಕಟ್ಟುಗಳು ಭಾರತೀಯ ಆಟಿಕೆ ಉದ್ದಿಮೆ ವಲಯದ ಮೇಲೆ ಗಂಭೀರ ಪರಿಣಾಮ ಬೀರಿವೆ. ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧದಿಂದಾಗಿ ಕೆಂಪು ಸಮುದ್ರದಲ್ಲಿ ಸರಕು ಸಾಗಣೆಗೆ ದೊಡ್ಡ ಅಡಚಣೆಯಾಗಿದೆ. ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿಯೂ ಆಟಿಕೆಗಳ ಬೇಡಿಕೆ ಕುಗ್ಗಿದೆ ಎಂದು ಸಚಿವ ಜಿತಿನ್ ಪ್ರಸಾದ ಹೇಳಿದ್ದಾರೆ.

ಕಾಫಿ ಡೇ ದಿವಾಳಿ ಪ್ರಕ್ರಿಯೆಗೆ ಎನ್‌ಸಿಎಲ್‌ಟಿ ಅನುಮತಿ

ನವದೆಹಲಿ (ಪಿಟಿಐ): ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ (ಸಿಡಿಇಎಲ್) ವಿರುದ್ಧ ಕಾರ್ಪೊರೇಟ್ ದಿವಾಳಿ ಪ್ರಕ್ರಿಯೆ ಆರಂಭಿಸಲು, ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಬೆಂಗಳೂರು ಶಾಖೆಯು ಅನುಮತಿ ನೀಡಿದೆ.

₹228.45 ಕೋಟಿ ಬಾಕಿ ಪಾವತಿಗೆ ಸಂಬಂಧಿಸಿದಂತೆ ಐಡಿಬಿಐ ಟ್ರಸ್ಟಿಶಿಪ್ ಸರ್ವಿಸಸ್ ಲಿಮಿಟೆಡ್, ಆಗಸ್ಟ್ 8ರಂದು ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿತ್ತು. ಇದನ್ನು ಪುರಸ್ಕರಿಸಿರುವ ನ್ಯಾಯಮಂಡಳಿಯು, ಕಾಫಿ ಡೇ ಕಂಪನಿಯ ಕಾರ್ಯಾಚರಣೆಗೆ ಮಧ್ಯಂತರ ನಿರ್ಣಯ ಅಧಿಕಾರಿಯನ್ನು ನೇಮಿಸಿದೆ.

ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್, ರೆಸಾರ್ಟ್ ಹಾಗೂ ಸಲಹಾ ಸೇವಾ ಸಂಸ್ಥೆಗಳನ್ನು ಹೊಂದಿದೆ. ಕಂಪನಿಯು ಮಾರ್ಪಡಿಸಲಾಗದ ಡಿಬೆಂಚರ್‌ಗಳ (ಎನ್‌ಸಿಡಿ) ಮೂಲಕ ಬಂಡವಾಳ ಸಂಗ್ರಹಿಸಿದೆ. 2019ರ ಮಾರ್ಚ್‌ವರೆಗೆ ಒಂದು ಸಾವಿರ ಎನ್‌ಸಿಡಿಗಳಿಗೆ ₹100 ಕೋಟಿ ಬಡ್ಡಿ ಪಾವತಿಸಿದೆ.

ಐಡಿಬಿಐ ಟ್ರಸ್ಟಿಶಿಪ್ ಸರ್ವಿಸಸ್ ಲಿಮಿಟೆಡ್ ಅನ್ನು ಡಿಬೆಂಚರ್‌ಗಳ ಟ್ರಸ್ಟಿಯನ್ನಾಗಿ ನೇಮಿಸಿಕೊಂಡಿತ್ತು. 2019ರ ಸೆಪ್ಟೆಂಬರ್‌ನಿಂದ 2020ರ ಜೂನ್‌ವರೆಗೆ ಬಡ್ಡಿ ಪಾವತಿಸಿಲ್ಲ ಎಂದು ಹೇಳಲಾಗಿದೆ. ಈ ಸಂಬಂಧ 2020ರ ಜುಲೈ 28ರಂದು ಕಾಫಿ ಡೇ ಕಂಪನಿಗೆ, ಡಿಬೆಂಚರ್ ಟ್ರಸ್ಟಿಯು ನೋಟಿಸ್ ನೀಡಿ ನ್ಯಾಯಮಂಡಳಿಯ ಮೊರೆ ಹೋಗಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಸಿಡಿಇಎಲ್, ಡೆಬೆಂಚರ್ ಟ್ರಸ್ಟಿ ಒಪ್ಪಂದ ಮತ್ತು ಡಿಬೆಂಚರ್ ಟ್ರಸ್ಟ್ ಡೀಡ್ ಪ್ರಕಾರ ಅದಕ್ಕೆ ಈ ಅಧಿಕಾರವಿಲ್ಲ ಎಂದು ಹೇಳಿತ್ತು.

2023ರ ಜುಲೈ 20ರಂದು ₹94 ಕೋಟಿ ಬಾಕಿ ಪಾವತಿ ವಿಳಂಬಕ್ಕೆ ಸಂಬಂಧಿಸಿದಂತೆ ಇಂಡಸ್ ಇಂಡ್ ಬ್ಯಾಂಕ್ ಕೂಡ ಕಾಫಿ ಡೇ ವಿರುದ್ಧ ಕಾರ್ಪೊರೇಟ್ ದಿವಾಳಿ ಪ್ರಕ್ರಿಯೆಗೆ ಕೋರಿ ಎನ್‌ಸಿಎಲ್‌ಟಿಗೆ ಅರ್ಜಿ ಸಲ್ಲಿಸಿತ್ತು. ಇದಕ್ಕೆ ಅದೇ ವರ್ಷದ ಆಗಸ್ಟ್ 11ರಂದು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು ತಡೆ ನೀಡಿತ್ತು.

ಸಣ್ಣ ಉಳಿತಾಯ ಠೇವಣಿಗೆ ಒತ್ತು ನೀಡಲು ಸಚಿವೆ ಕಿವಿಮಾತು

ಬ್ಯಾಂಕ್‌ಗಳ ಕಿವಿ ಹಿಂಡಿದ ನಿರ್ಮಲಾ

ನವದೆಹಲಿ (ಪಿಟಿಐ): 'ಕೌಟುಂಬಿಕ ಉಳಿತಾಯವು ಬ್ಯಾಂಕ್‌ಗಳ ಠೇವಣಿಗಳಲ್ಲಿ ಹೂಡಿಕೆಯಾಗುತ್ತಿಲ್ಲ. ಪರ್ಯಾಯ ಹೂಡಿಕೆಯತ್ತ ಮುಖ ಮಾಡಿದೆ. ಹಾಗಾಗಿ, ಬ್ಯಾಂಕ್‌ಗಳು ಕೋರ್ ಬ್ಯಾಂಕಿಂಗ್ ವಹಿವಾಟಿಗೆ ಒತ್ತು ನೀಡಬೇಕು. ಜೊತೆಗೆ, ಠೇವಣಿ ಸಂಗ್ರಹದ ಹೆಚ್ಚಳಕ್ಕೆ ಹೊಸ ಹಾಗೂ ಆಕರ್ಷಕ ಯೋಜನೆಗಳನ್ನು ರೂಪಿಸಬೇಕಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಲಹೆ ನೀಡಿದ್ದಾರೆ.

ಶನಿವಾರ ನಡೆದ ಭಾರತೀಯ ರಿಸರ್ವ್ ಬ್ಯಾಂಕ್‌ನ ಆಡಳಿತ ಮಂಡಳಿ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಠೇವಣಿ ಮತ್ತು ಸಾಲವು ರಥದ ಎರಡು ಚಕ್ರಗಳಿದ್ದಂತೆ. ಠೇವಣಿ ಚಕ್ರವು ನಿಧಾನಗತಿಯಲ್ಲಿ ಚಲಿಸುತ್ತಿರುತ್ತದೆ' ಎಂದರು.

ಠೇವಣಿ ಸಂಗ್ರಹ ಮತ್ತು ಸಾಲ ನೀಡುವಿಕೆಯಲ್ಲಿ ಬ್ಯಾಂಕ್‌ಗಳು ಪರಿಣಾಮಕಾರಿಯಾದ ಕ್ರಮಗಳನ್ನು ಅನುಸರಿಸಬೇಕಿದೆ. ಆರ್‌ಬಿಐ ಮತ್ತು ಕೇಂದ್ರ ಸರ್ಕಾರವು ಇದನ್ನೇ ಒತ್ತಿ ಹೇಳುತ್ತಿವೆ ಎಂದು ಹೇಳಿದರು.

ಶನಿವಾರ ನಡೆದ ಆರ್‌ಬಿಐನ ಆಡಳಿತ ಮಂಡಳಿ ಸಭೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಗವರ್ನರ್ ಶಕ್ತಿಕಾಂತ ದಾಸ್ ಆಗಮಿಸಿದ ಕ್ಷಣ —ಪಿಟಿಐ ಚಿತ್ರ

ಪ್ರಸ್ತುತ ಬ್ಯಾಂಕ್‌ಗಳ ಠೇವಣಿ ಸಂಗ್ರಹ ಮತ್ತು ಸಾಲ ನೀಡುವಿಕೆಯಲ್ಲಿ ಹೊಂದಾಣಿಕೆಯ ಸಮಸ್ಯೆ ತಲೆದೋರಿದೆ ಎಂದರು.

ಬಡ್ಡಿದರ ನಿರ್ವಹಣೆಗೆ ಸಂಬಂಧಿಸಿದಂತೆ ಆರ್‌ಬಿಐ ಬ್ಯಾಂಕ್‌ಗಳಿಗೆ ಕೆಲವು ಸ್ವಾತಂತ್ರ್ಯ ನೀಡಿದೆ. ಇದನ್ನು ಬಳಸಿಕೊಳ್ಳುವ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಠೇವಣಿ ಸಂಗ್ರಹಕ್ಕೆ ಮುಂದಾಗಬೇಕಿದೆ ಎಂದು ಸಲಹೆ ನೀಡಿದರು.

ದೊಡ್ಡ ಅಥವಾ ಬೃಹತ್ ಠೇವಣಿಗಳ ಸಂಗ್ರಹಕ್ಕೆ ಒತ್ತು ನೀಡುವ ಬದಲು ಸಣ್ಣ ಉಳಿತಾಯ ಠೇವಣಿ ಸಂಗ್ರಹಕ್ಕೆ ಹೆಚ್ಚಿನ ಗಮನಹರಿಸಬೇಕು ಎಂದು ಸಲಹೆ ನೀಡಿದರು.

'ಸಣ್ಣ ಉಳಿತಾಯವೇ ಬ್ಯಾಂಕ್‌ಗಳಿಗೆ ಬ್ರೆಡ್ ಮತ್ತು ಬೆಣ್ಣೆ ಇದ್ದಂತೆ. ಇದರಿಂದ ಹಣದ ಹರಿವು ಹೆಚ್ಚಲಿದೆ.

'ಬಡ್ಡಿದರ ವ್ಯತ್ಯಾಸ ಸರಿಪಡಿಸಿ'

ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಮಾತನಾಡಿ, 'ಠೇವಣಿ ಮತ್ತು ಸಾಲದ ಮೇಲಿನ ಬಡ್ಡಿದರದ ನಡುವೆ ಶೇ 3ರಿಂದ ಶೇ 4ರಷ್ಟು ವ್ಯತ್ಯಾಸವಿದೆ. ಠೇವಣಿಗೆ ನೀಡುತ್ತಿರುವ ಬಡ್ಡಿ ಪ್ರಮಾಣ ತೀರಾ ಕಡಿಮೆಯಿದೆ. ಇದನ್ನು ಸರಿಪಡಿಸಬೇಕು ಎಂದರು.

ಶಾಖೆಗಳ ನೆಟ್‌ವರ್ಕ್ ದೊಡ್ಡದಿದೆ. ಇವುಗಳ ಮೂಲಕ ಠೇವಣಿ ಸಂಗ್ರಹಕ್ಕೆ ಒತ್ತು ನೀಡಬೇಕಿದೆ ಎಂದು ಹೇಳಿದರು.

ಈ ಹಿಂದೆಯೇ ಇದರತ್ತ ಗಮನ ಹರಿಸಿದ್ದರೆ ನಾವು (ಬ್ಯಾಂಕ್‌ಗಳು) ತೊಂದರೆಗೆ ಸಿಲುಕುತ್ತಿರಲಿಲ್ಲ. ನಾವು ಸಂಪೂರ್ಣವಾಗಿ ಇನ್ನೊಂದು ಬದಿಗೆ ಹೋಗಿದ್ದೇವೆ. ಈಗ ಗುರಿ ಸಾಧನೆಗಾಗಿ ಬೃಹತ್ ಠೇವಣಿಗಳ ಹಿಂದೆ ಬಿದ್ದಿದ್ದೇವೆ' ಎಂದರು.

ತಿಮೋರ್ ಜತೆ ಉತ್ತಮ ಸ್ನೇಹ ಸಂಬಂಧ

ಡಿಲಿ(ತಿಮೋರ್ ಲೆಸ್ಟ್) (ಪಿಟಿಐ): 'ಪ್ರಜಾಪ್ರಭುತ್ವ ಹಾಗೂ ಬಹುತ್ವದ ಮೌಲ್ಯಗಳ ಹಂಚಿಕೆಯ ಬದ್ಧತೆಯ ಆಧಾರದ ಮೇಲೆ ತಿಮೋರ್ ಲೆಸ್ಟ್ ದೇಶದ ಜತೆಗೆ ಭಾರತವು ಉತ್ತಮ ಸ್ನೇಹ ಸಂಬಂಧವನ್ನು ಬಯಸುತ್ತದೆ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಇಲ್ಲಿ ತಿಳಿಸಿದರು.

ತಿಮೋರ್ ಲೆಸ್ಟ್‌ನ ಅಧ್ಯಕ್ಷ ಜೊಸ್ ರಮೋಸ್ ಹೊರ್ಟಾ ಜೊತೆಗೆ ದ್ವಿಪಕ್ಷೀಯ ಸಹಕಾರ ಸಂಬಂಧ ವೃದ್ಧಿ ಕುರಿತು ವಿಸ್ತೃತ ಚರ್ಚೆ ನಡೆಸಿದ ಬಳಿಕ ಈ ವಿಷಯ ತಿಳಿಸಿದರು.

ಶನಿವಾರ ಇಲ್ಲಿಗೆ ಬಂದಿಳಿದ ಮುರ್ಮು ಅವರನ್ನು ಅಧ್ಯಕ್ಷೀಯ ನಿವಾಸದಲ್ಲಿ ಗೌರವ ವಂದನೆ ನೀಡಿ ಬರಮಾಡಿಕೊಳ್ಳಲಾಯಿತು. ಭಾರತದ ರಾಷ್ಟ್ರಪತಿಯೊಬ್ಬರು ಮೊಟ್ಟ ಮೊದಲ ಬಾರಿಗೆ ಈ ದೇಶಕ್ಕೆ ಭೇಟಿ ನೀಡಿದ ಗೌರವಕ್ಕೂ ಪಾತ್ರರಾದರು.

ಈ ವೇಳೆ ತಿಮೋರ್ ಲೆಸ್ಟ್‌ನ ಅಧ್ಯಕ್ಷ ಜೊಸ್ ರಮೋಸ್ ಹೊರ್ಟಾ ಅವರು ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರ 'ಗ್ರ್ಯಾಂಡ್ ಕಾಲರ್ ಆಫ್ ದ ಆರ್ಡರ್ ಆಫ್ ತಿಮೋರ್ ಲೆಸ್ಟ್' ಅನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ನೀಡಿ ಗೌರವಿಸಿದರು.

ತಿಮೋರ್ ಲೆಸ್ಟ್‌ನ ಅಧ್ಯಕ್ಷ ಜೊಸ್ ರಮೋಸ್ ಹೊರ್ಟಾ ಅವರು ಶನಿವಾರ ಡಿಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರ 'ಗ್ರ್ಯಾಂಡ್ ಕಾಲರ್ ಆಫ್ ದ ಆರ್ಡರ್ ಆಫ್ ತಿಮೋರ್ ಲೆಸ್ಟ್' ಅನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ನೀಡಿ ಗೌರವಿಸಿದರು —ಪಿಟಿಐ ಚಿತ್ರ

ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 'ಡಿಲಿಯಲ್ಲಿ ಭಾರತವು ಆದಷ್ಟು ಬೇಗ ತನ್ನ ಶಾಶ್ವತ ರಾಯಭಾರ ಕಚೇರಿಯನ್ನು ಆರಂಭಿಸಲಿದೆ. ಅದೇ ರೀತಿ, ತಿಮೋರ್ ಲೆಸ್ಟ್ ದೇಶವು ತನ್ನ ರಾಯಭಾರ ಕಚೇರಿಯನ್ನು ದೆಹಲಿಯಲ್ಲಿ ಆರಂಭಿಸುವುದನ್ನು ಭಾರತ ಎದುರು ನೋಡುತ್ತಿದೆ, ಮುಂದಿನ ದಿನಗಳಲ್ಲಿ ದೆಹಲಿ– ಡಿಲಿ ನಡುವಿನ ಗಟ್ಟಿಯಾದ ಸ್ನೇಹ ಸಂಬಂಧ ಬೆಳೆಯಲಿದೆ' ಎಂದು ಭರವಸೆ ನೀಡಿದರು.

'ಐ.ಟಿ, ಡಿಜಿಟಲ್ ತಂತ್ರಜ್ಞಾನ, ಆರೋಗ್ಯ, ಔಷಧ ಕ್ಷೇತ್ರ, ಕೃಷಿ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವೃದ್ಧಿ ಕುರಿತು ಉಭಯ ನಾಯಕರು ಮಾತುಕತೆ ನಡೆಸಿದರು' ಎಂದು ವಿದೇಶಾಂಗ ಇಲಾಖೆ ವಕ್ತಾರ ರಣ್‌ಧೀರ್ ಜೈಸ್ವಾಲ್ ಅವರು 'ಎಕ್ಸ್'ನಲ್ಲಿ ತಿಳಿಸಿದರು.

ಯುಪಿಐ ಪಾವತಿ ವ್ಯವಸ್ಥೆ ಜಾರಿ ಭಾರತ–ಮಾಲ್ದೀವ್ಸ್ ಒಪ್ಪಂದ

ಮಾಲೆ (ಪಿಟಿಐ): ಯುಪಿಐ ಪಾವತಿ ವ್ಯವಸ್ಥೆಯನ್ನು ಮಾಲ್ದೀವ್ಸ್‌ನಲ್ಲಿ ಜಾರಿಗೊಳಿಸುವ ಕುರಿತು ಉಭಯ ದೇಶಗಳು ಒಪ್ಪಂದಕ್ಕೆ ಸಹಿ ಹಾಕಿವೆ. 'ಇದು, ಪ್ರವಾಸೋದ್ಯಮದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಆಶಿಸಿದ್ದಾರೆ.

ಭಾರತದ ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಮತ್ತು ಮಾಲ್ದೀವ್ಸ್‌ನ ಆರ್ಥಿಕ ಅಭಿವೃದ್ಧಿ ಸಚಿವಾಲಯದ ನಡುವೆ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ಒಪ್ಪಂದವಾಗಿದೆ ಎಂದು ಜೈಶಂಕರ್ 'ಎಕ್ಸ್' ಜಾಲತಾಣದ ಖಾತೆಯಲ್ಲಿ ಸಂದೇಶ ಹಂಚಿಕೊಂಡಿದ್ದಾರೆ.

ಮಾಲ್ದೀವ್ಸ್‌ನ ವಿದೇಶಾಂಗ ಸಚಿವ ಮೂಸಾ ಜಮೀರ್ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೈಶಂಕರ್, 'ಭಾರತವು ಯುಪಿಐ ವ್ಯವಸ್ಥೆಯ ಮೂಲಕ ಡಿಜಿಟಲ್ ಪಾವತಿಯಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದೆ' ಎಂದು ತಿಳಿಸಿದರು.

'ಆರ್ಥಿಕ ಸೇರ್ಪಡೆಯನ್ನು ಭಾರತದಲ್ಲಿ ಹೊಸ ಎತ್ತರಕ್ಕೆ ಕೊಂಡೊಯ್ಯಲಾಗಿದೆ. ಇಂದು ಜಗತ್ತಿನ ಶೇ 40ರಷ್ಟು ಡಿಜಿಟಲ್ ಪಾವತಿ ವ್ಯವಸ್ಥೆಯು ಭಾರತದಲ್ಲೇ ಅಗುತ್ತಿದೆ. ನಿತ್ಯದ ಬದುಕಿನಲ್ಲಿ ನಾವು ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಗಮನಿಸುತ್ತಿದ್ದೇವೆ' ಎಂದು ತಿಳಿಸಿದರು.

'ಭಾರತ ಮತ್ತು ಮಾಲ್ದೀವ್ಸ್ ಕೇವಲ ನೆರೆ ಹೊರೆ ರಾಷ್ಟ್ರಗಳಲ್ಲ. ಸಹಜ ಪಾಲುದಾರರು' ಎಂದು ಅಭಿಪ್ರಾಯಪಟ್ಟರು.

'ಬೆಲೆಕಟ್ಟಲಾದ ಪಾಲುದಾರ'

ಮಾಲೆ (ಪಿಟಿಐ): ಭಾರತ ಎಂದಿಗೂ ಮಾಲ್ದೀವ್ಸ್‌ನ ಹತ್ತಿರದ ಮೈತ್ರಿ ರಾಷ್ಟ್ರ. ಬೆಲೆಕಟ್ಟಲಾದ ಪಾಲುದಾರ. ಅಗತ್ಯ ಇದ್ದಾಗಲೆಲ್ಲಾ ಭಾರತ ನೆರವಾಗುತ್ತಿದೆ ಎಂದು ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಹೇಳಿದ್ದಾರೆ.

ದ್ವೀಪರಾಷ್ಟ್ರದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳ ಕಾಮಗಾರಿ ಪೂರ್ಣಗೊಂಡ ನಿಮಿತ್ತ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಭಾರತದ ಸಾಲ ನೆರವು ಕಾರ್ಯಕ್ರಮದಲ್ಲಿ ಈ ಯೋಜನೆ ಜಾರಿಗೊಳಿಸಲಾಗಿದೆ.

ಭಾರತದ ಸಾಲ ನೆರವು ಕಾರ್ಯಕದವು ಆರ್ಥಿಕ ಅನುಕೂಲತೆ ಕಲ್ಪಿಸಿದೆ. ಸ್ಥಳೀಯವಾಗಿ ಆರ್ಥಿಕತೆ ಅಭಿವೃದ್ಧಿಗೆ ನೆರವಾಗಿದೆ. ದೇಶದ ಅಭ್ಯುದಯಕ್ಕೆ ನೆರವಾಗಿದೆ. ಉಭಯ ದೇಶಗಳ ಮೈತ್ರಿಯಲ್ಲಿ ಗಣನೀಯ ಮೈಲಿಗಲ್ಲಾಗಿವೆ ಎಂದು ಅವರು ಹೇಳಿದರು.

ಮಾಲ್ದೀವ್ಸ್‌ನ ವಿದೇಶಾಂಗ ಸಚಿವ ಜಮೀರ್, 'ಭಾರತ ನಮ್ಮ ಸ್ನೇಹಿ ರಾಷ್ಟ್ರ. ಅಭಿವೃದ್ಧಿಯಲ್ಲಿ ಎಂದಿಗೂ ಭಾಗಿಯಾಗಿರಲಿದೆ' ಎಂದು ಹೇಳಿದರು.

ಗಾಜಾ: ಇಸ್ರೇಲ್ ದಾಳಿಗೆ 93 ಸಾವು

ದೇರ್–ಅಲ್–ಬಲಾಹ್ (ಎಪಿ, ಎಎಫ್‌ಪಿ): ನಿರಾಶ್ರಿತರ ಶಿಬಿರವನ್ನಾಗಿ ಮಾರ್ಪಾಡು ಮಾಡಲಾಗಿದ್ದ ಗಾಜಾದ ತಬೀನ್ ಶಾಲೆ ಮೇಲೆ ಇಸ್ರೇಲ್ ಶನಿವಾರ ವಾಯುದಾಳಿ ನಡೆಸಿದ ಪರಿಣಾಮ ಕನಿಷ್ಠ 93 ಮಂದಿ ಮೃತಪಟ್ಟಿದ್ದು, 47 ಮಂದಿ ಗಾಯಗೊಂಡಿದ್ದಾರೆ.

ಇಸ್ರೇಲ್ ಸೇನೆ ಈ ದಾಳಿಯ ಹೊಣೆ ಹೊತ್ತಿದೆ. ಶಾಲೆಯಲ್ಲಿ ಹಮಾಸ್ ಬಂಡುಕೋರರು ಅಡಗಿದ್ದರು. ಅವರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ. ಆದರೆ, ಇಸ್ರೇಲ್ ಆರೋಪವನ್ನು ಹಮಾಸ್ ತಳ್ಳಿಹಾಕಿದೆ.

ಆಶ್ರಯ ಪಡೆದಿದ್ದವರು ಶಾಲೆಯೊಳಗಿದ್ದ ಮಸೀದಿಯಲ್ಲಿ ನಸುಕಿನ ಜಾವ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಇನ್ನೂ ಹಲವರು ಮಲಗಿದ್ದಾಗ ಮೂರು ಕ್ಷಿಪಣಿಗಳ ದಾಳಿ ನಡೆಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಮೃತರಲ್ಲಿ ಹಲವರ ಗುರುತು ಪತ್ತೆಮಾಡಲು ಸಾಧ್ಯವಾಗುತ್ತಿಲ್ಲ. ಸಾವಿನ ಸಂಖ್ಯೆಯಲ್ಲಿ ಏರಿಕೆಯಾಗುವ ಸಾಧ್ಯತೆ ಇದೆ.

'ಮಸೀದಿಯಲ್ಲಿದ್ದವರೆಲ್ಲರೂ ಸಾವಿಗೀಡಾಗಿದ್ದಾರೆ' ಎಂದು ಸ್ಥಳೀಯ ನಿವಾಸಿ ಅಬು ವಾಸೀಮ್ ತಿಳಿಸಿದ್ದಾರೆ.

ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ಮೃತಪಟ್ಟವರ ದೇಹಗಳ ಬಳಿ ಕುಳಿತು ಬಾಲಕನೊಬ್ಬ ರೋಧಿಸುತ್ತಿರುವ ದೃಶ್ಯ —ಎಎಫ್‌ಪಿ ಚಿತ್ರ

ಖಂಡನೆ: ದಾಳಿಯನ್ನು ಹಲವು ದೇಶಗಳು ಖಂಡಿಸಿವೆ. ಈ ದಾಳಿಯಿಂದ ಶಾಂತಿ ಸ್ಥಾಪಿಸುವ ಪ್ರಯತ್ನಗಳಿಗೆ ಇಸ್ರೇಲ್ ಅಡ್ಡಿಪಡಿಸುತ್ತಿದೆ ಎಂದು ಜೋರ್ಡಾನ್ ವಿದೇಶಾಂಗ ಸಚಿವಾಲಯ ತಿಳಿಸಿದೆ.

'ಗಾಜಾದಲ್ಲಿ ಸಾಮೂಹಿಕ ಹತ್ಯೆ ನಡೆಯುವುದನ್ನು ತಡೆಯಬೇಕು' ಎಂದು ಸೌದಿ ಅರೇಬಿಯಾದ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಬೇಕಾಗಿದ್ದಾರೆ
ಗೋಡೌನ್ ಕ್ಲರ್ಕ್‌ಗಳು (ಪುರುಷರು)
ಫರ್ನಿಚರ್ ಗೋಡೌನ್‌ನಲ್ಲಿ ಕೆಲಸ ಮಾಡಲು
ಸಂಬಳ : ತಿಂಗಳಿಗೆ 16,500/–
ವಯಸ್ಸು – ಕನಿಷ್ಠ – 30 ವರ್ಷ, ಗರಿಷ್ಠ – 50 ವರ್ಷ
ಸಂದರ್ಶನಕ್ಕೆ ಆಧಾರ್ ಕಾಪಿ ಸಮೇತ ಬನ್ನಿ:
ಪ್ಯಾನ್ ಆಫೀಸ್ ಸಿಸ್ಟಮ್ಸ್
ನಂ. 5, ಒಂದನೇ "ಅ" ಕ್ರಾಸ್, ಬಿಸ್ಮಿಲ್ಲಾನಗರ್, ಬನ್ನೇರುಘಟ್ಟ ರಸ್ತೆ ಕ್ರಾಸ್, ಬೆಂಗಳೂರು–29.

Carpenter Job Opportunity for Freshers
Criteria: 10th/12th pass, Bangalore resident, willing to undergo 15-day training.
Perks: Certificate, Complete job placement (₹18,000-20,000), growth path (Can earn upto 50,000 in 2 years), free registration.
Whatsapp us on 8591304815

ಹಿರಿಯೂರು ಸಮೀಪದ ಕೃಷಿ ಭೂಮಿಗೆ ನೋಡಿಕೊಳ್ಳಲು ಕುಟುಂಬ ಬೇಕು. ವಾಸದ ವ್ಯವಸ್ಥೆ ಪೂರೈಸಲಾಗುತ್ತದೆ. ತಿಂಗಳಿಗೆ ರೂ. 15000 ನೀಡಲಾಗುತ್ತದೆ. ಸಂಪರ್ಕಿಸಿ: 8123780770

TO FIND SUITABLE job for you in any sectors likeSchools/ Colleges, Engineering, Manufacturing, Hospitals. IT, Finance,Administration, Marketing, Media etc.Registeryour resume for free at www.checkmatejobs.com

Drivers

ಕವಿ ಲಾಜಿಸ್ಟಿಕ್ಸ್: ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ, ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9886683188/ 9738421001

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Marketing & Sales

REQUIRED SALES OFFICERS
We are seeking motivated & results-driven Sales Officers to join our sales team. Candidates with a min. experience of 5 years who can increase market presence and are well versed in Salesforce are preferred.
Apply to opportunitiesblr@gmail.com

Engg/ Production Technical

WANTED
ITI-WELDERS FITTERS & ELECTRICIANS
(0 - 2 years Experienced)
for a manufacturing factory in Nelamangala, Bangalore Rural -562123.
M:9591819339 e-mail id: factoryjobs2024@outlook.com

Security & Detectives

REQUIREMENT OF Field Officer For Security and Facility Management Services Contact 9164375199

ರೆಂಟಲ್ ಪ್ರಾಪರ್ಟೀಸ್

Accommodation Wanted

Flat

NEED RENTAL 1BHK house fully furnished anywhere in Mysore with car parking, north or east facing. Contact 9363362196

ರಿಯಲ್ ಎಸ್ಟೇಟ್ ಬೈಯಿಂಗ್

Agricultural Land

Chickmagalur

ಚಿಕ್ಕಮಗಳೂರಿನಲ್ಲಿ ಕಾಫಿ ಎಸ್ಟೇಟ್ ಅಥವಾ ಅಡಿಕೆ ತೋಟ ಖರೀದಿಸಲು ತಕ್ಷಣ ಬೇಕಾಗಿದೆ ಈ ಕೂಡಲೇ ಸಂಪರ್ಕಿಸಿ : 7483651933

ಪ್ರವಾಸ

Travel

13.09.2024 21.10.2024 06.11.2024 ಸಿಂಗಾಪುರ್, ಮಲೇಶಿಯಾ ಥೈಲ್ಯಾಂಡ್ 7/ 11 ದಿನಗಳು. 23.09.2024 17.10.2024 ಭೂತಾನ್ 8 ದಿನಗಳು. 23.09.2024 07.10.2024 30.10.2024 ಅಸ್ಸಾಂ,ಮೇಘಾಲಯ 9 ದಿನಗಳು. 26.09.2024 17.10.2024 ಮಧ್ಯಪ್ರದೇಶ 10 ದಿನಗಳು. 17.10.2024 24.11.2024 ಶ್ರೀಲಂಕಾ 6 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು03. 9448402248 7022547922

★16.09.2024 ರಿಂದ★ 12ದಿನಗಳು ಬದರಿನಾಥ, ಕೇದಾರನಾಥ, ಗಂಗೋತ್ರಿ, ಯಮುನೋತ್ರಿ, ಹರಿದ್ವಾರ, ದೆಹಲಿ. ಸಂಪರ್ಕಿಸಿ: ಶ್ರೀಗಂಗಾ ಟೂರಿಸ್ಟ್. 9480253807, 8105522123

ಸುಸಜ್ಜಿತ ಪ್ರವಾಸಗಳು: 14.10.2024 29.10.2024 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. ನವೆಂಬರ್ ಡಿಸೆಂಬರ್ ತಿಂಗಳಲ್ಲಿ 6 ದಿನಗಳ ದುಬೈ,ಅಬುದಾಬಿ ಶಾರ್ಜಾ ಮತ್ತು 10 ದಿನಗಳ ವಿಯಟ್ನಾಂ ಕಾಂಬೋಡಿಯ. 18.09.2024 26.09.2024 ರಿಂದ 5/8 ದಿನಗಳ ಕಾಶಿ,ಗಯಾ,ಅಯೋಧ್ಯಾ. 05.10.2024 ರಿಂದ 11 ದಿನಗಳ ನೇಪಾಳ ಮುಕ್ತಿನಾಥ ಅಯೋಧ್ಯಾ. 13.09.2024 14.10.2024 ರಿಂದ 15 ದಿನಗಳ ಚಾರ್‌ಧಾಮ್. ನವೆಂಬರ್ ಡಿಸೆಂಬರ್ ತಿಂಗಳಲ್ಲಿ ಮಧ್ಯಪ್ರದೇಶ ರಾಜಸ್ಥಾನ್ ಗುಜರಾತ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ವ್ಯಾಪಾರ

Business to Business

Business

CBSE/ ICSE ಶಾಲೆಯನ್ನು ಸ್ವಾಧೀನಪಡಿಸಿಕೊಳ್ಳಲು ಅಥವಾ ಸಂಪೂರ್ಣ ಖರೀದಿಗೆ ಬೇಕಾಗಿದೆ ಕರೆ ಮಾಡಿ : 7019742489

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
@500/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9845114560 | +91 9886213331
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036

ಪುರುಷರ 57 ಕೆ.ಜಿ. ಫ್ರೀಸ್ಟೈಲ್ ಕುಸ್ತಿಯಲ್ಲಿ ಕಂಚಿನ ಪದಕ ಗೆದ್ದ ಭಾರತದ ಕಿರಿಯ ವಯಸ್ಸಿನ ಪೈಲ್ವಾನ

4.6 ಕೆ.ಜಿ. ತೂಕ ಇಳಿಸಿದ್ದ ಅಮನ್ ಸೆಹ್ರಾವತ್!

ಪ್ಯಾರಿಸ್ (ಪಿಟಿಐ): ಕುಸ್ತಿಪಟು ಅಮನ್ ಸೆಹ್ರಾವತ್ ಅವರು ಒಲಿಂಪಿಕ್ಸ್ ಪದಕ ಗಳಿಸುವ ಮುನ್ನ ಒಂದಷ್ಟು ತೂಕ ಕಳೆದುಕೊಳ್ಳಬೇಕಾದ ಸವಾಲು ಎದುರಿಸಿದ್ದರು.

ಗುರುವಾರ ಅವರು 57 ಕೆ.ಜಿ. ಫ್ರೀಸ್ಟೈಲ್ ಕುಸ್ತಿ ಸೆಮಿಫೈನಲ್‌ನಲ್ಲಿ ಜಪಾನಿನ ರೀ ಹಿಗುಚಿ ವಿರುದ್ಧ ಸೋತಿದ್ದರು. ಅದರ ಮರುದಿನ (ಶುಕ್ರವಾರ) ಕಂಚಿನ ಪದಕಕ್ಕಾಗಿ ಪ್ಲೇ ಆಫ್‌ನಲ್ಲಿ ಸೆಣಸಬೇಕಿತ್ತು. ಆದರೆ ಅವರ ದೇಹತೂಕವು 61.5 ಕೆ.ಜಿ.ಗೆ ಏರಿತ್ತು. ನಿಗದಿತ ತೂಕದ ವ್ಯಾಪ್ತಿಗೆ ಬರಬೇಕಾದರೆ 4.5 ಕೆ.ಜಿ. ಇಳಿಸಬೇಕಿತ್ತು. ಸ್ಪರ್ಧೆಯ ನಿಯಮದ ಪ್ರಕಾರ ಎರಡನೇ ದಿನದ ತೂಕ ಪರೀಕ್ಷೆ ಮಾಡಿಸಿಕೊಳ್ಳಲು ಅವರ ಬಳಿ ಇದ್ದದ್ದು ಕೇವಲ 10 ಗಂಟೆಗಳು ಮಾತ್ರ.

ಈ ಅವಧಿಯಲ್ಲಿಯೇ ಕೋಚ್‌ಗಳಾದ ಜಗಮಂದರ್ ಸಿಂಗ್ ಮತ್ತು ವೀರೇಂದರ್ ಸಿಂಗ್ ಅವರ ಮಾರ್ಗದರ್ಶನದಲ್ಲಿ 4.6 ಕೆ.ಜಿ. ಇಳಿಸುವಲ್ಲಿ ಅಮನ್ ಯಶಸ್ವಿಯಾದರು. ಅವರು ಸ್ಪರ್ಧಾದಿನದಂದು ತೂಕದ ಯಂತ್ರದ ಮೇಲೆ ನಿಂತಾಗ 56.9 ಕೆ.ಜಿ. ಎಂದು ತೋರಿಸಿತ್ತು.

ಭಾರತದ ಕುಸ್ತಿಪಟು ಅಮನ್ ಸೆಹ್ರಾವತ್ ಅವರು ಕಂಚಿನ ಪದಕವನ್ನು ಕಚ್ಚಿ ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್

ಮಹಿಳೆಯರ 50 ಕೆ.ಜಿ. ವಿಭಾಗದ ಫೈನಲ್ ಪ್ರವೇಶಿಸಿದ್ದ ವಿನೇಶ್ ಫೋಗಟ್ ಅವರು ಬೌಟ್ ದಿನದಂದು 100 ಗ್ರಾಮ್ ಹೆಚ್ಚು ತೂಗಿದ್ದರಿಂದ ಅನರ್ಹಗೊಂಡಿದ್ದರು. ಅದರೊಂದಿಗೆ ಭಾರತಕ್ಕೆ ಒಂದು ಪದಕ ಕೈತಪ್ಪಿತ್ತು.

ಆದರೆ ಅಮನ್ ತಮ್ಮ ನಿಗದಿಯ ತೂಕಕ್ಕಿಂತ 100 ಗ್ರಾಮ್ ಕಡಿಮೆಯಾಗಿದ್ದರು. ಇದಕ್ಕಾಗಿ ಅವರು ಇಡೀ ರಾತ್ರಿ ಪಟ್ಟ ಪರಿಶ್ರಮ ಅಷ್ಟಿಷ್ಟಲ್ಲ. ಗುರುವಾರ ಸೆಮಿಫೈನಲ್ ಮುಗಿಯುತ್ತಿದ್ದಂತೆಯೇ ತೂಕ ಇಳಿಸುವ ಕಾರ್ಯ ಆರಂಭವಾಯಿತು. ಇಬ್ಬರೂ ಅನುಭವಿ ಕೋಚ್‌ಗಳ ಸೂಚನೆಯಂತೆ ಅಮನ್ ತಮ್ಮ ದೇಹ ದಂಡಿಸಿದರು. ಸುಮಾರು ಒಂದೂವರೆ ತಾಸು ಕುಸ್ತಿಯಲ್ಲಿ ನಿಂತುಕೊಂಡು ಪ್ರಯೋಗಿಸುವ ಪಟ್ಟುಗಳ ಅಭ್ಯಾಸ ನಡೆಸಿದರು. ಅದಾದ ಕೂಡಲೇ ಒಂದು ಗಂಟೆ ಬಿಸಿ ನೀರು ಸ್ನಾನ. ಮಧ್ಯರಾತ್ರಿ 12.30ಕ್ಕೆ ಜಿಮ್ನಾಷಿಯಂನಲ್ಲಿ ಥ್ರೆಡ್‌ಮಿಲ್ ಮೇಲೆ ಒಂದು ಗಂಟೆ ಸತತ ಓಟ. ನಂತರ 30 ನಿಮಿಷ ವಿಶ್ರಾಂತಿ ಪಡೆದರು. ಮತ್ತೆ ಕಸರತ್ತು ಮುಂದುವರಿಸಿದ ಅವರು, ತಲಾ 5 ನಿಮಿಷದ ಐದು ಸೆಷನ್‌ಗಳ ಹಬೆಸ್ನಾನ ಮಾಡಿದರು.ಇದು ಮುಕ್ತಾಯವಾದ ನಂತರ ತೂಕ ನೋಡಿದಾಗ ಇನ್ನೂ 900 ಗ್ರಾಂ ಹೆಚ್ಚು ತೂಕವಿತ್ತು. ಆಗ ಅವರಿಗೆ ಮಸಾಜ್ ಮಾಡಲಾಯಿತು. ನಂತರ 15 ನಿಮಿಷ ನಿಧಾನಗತಿಯಲ್ಲಿ ಜಾಗಿಂಗ್ ಮಾಡಿದರು. ಬೆಳಗಿನ ಜಾವ 4.30ರ ವೇಳೆಗೆ ಅವರ ತೂಕವು 56.9 ಕೆ.ಜಿ ತೋರಿಸಿದಾಗ ಅಮನ್ ಮತ್ತು ಕೋಚ್‌ಗಳು ನಿರಾಳರಾದರು.

ಈ ಕಸರತ್ತುಗಳ ನಡುವೆ ಅಮನ್ ಅವರು ಬೆಚ್ಚಗಿನ ನೀರಿನಲ್ಲಿ ನಿಂಬೆರಸ ಮತ್ತು ಜೇನುತುಪ್ಪ ಮಿಶ್ರ ಮಾಡಿ ಕುಡಿದಿದ್ದರು. ಸ್ವಲ್ಪ ಕಾಫಿ ಕೂಡ ಕುಡಿದಿದ್ದರು. ಇಷ್ಟೆಲ್ಲ ಆದ ನಂತರ ಅಮನ್ ಮಲಗಲಿಲ್ಲ.

'ಇಡೀ ರಾತ್ರಿ ನಾನು ಕುಸ್ತಿ ಬೌಟ್‌ಗಳ ವಿಡಿಯೊ ನೋಡುತ್ತಿದ್ದೆ. ಪ್ರತಿ ಗಂಟೆಗೊಮ್ಮೆ ತೂಕದ ಪರೀಕ್ಷೆ ಮಾಡುತ್ತಿದ್ದೆವು. ಬೌಟ್‌ಗೂ ಮುನ್ನ ದೇಹತೂಕ ಇಳಿಸುವ ಕಸರತ್ತು ನಮ್ಮ ಕೆಲಸದ ಭಾಗ. ಇದರಲ್ಲಿ ಹೊಸದೇನಿಲ್ಲ. ಆದರೆ ಈ ಬಾರಿ ನಮಗೂ ಬಹಳ ಒತ್ತಡವಾಯಿತು. ಈಚೆಗೆ ನಡೆದ ಘಟನೆ (ವಿನೇಶ್) ಇದಕ್ಕೆ ಕಾರಣ. ಮತ್ತೊಂದು ಪದಕ ನಮ್ಮ ಕೈಯಿಂದ ಜಾರಿಹೋಗದಂತೆ ನೋಡಿಕೊಳ್ಳಬೇಕಿತ್ತು' ಎಂದು ಕೋಚ್ ದಹಿಯಾ ವಿವರಿಸಿದರು.

ಈ ಎಲ್ಲ ಕಠಿಣ ಪರಿಶ್ರಮಕ್ಕೆ ತಕ್ಕ ಫಲ ಲಭಿಸಿತು. 21 ವರ್ಷದ ಅಮನ್ ಅವರು ಪೋರ್ಟೊರಿಕೊದ ಡೇರಿಯನ್ ಕ್ರೂಸ್ ಅವರನ್ನು ಸೋಲಿಸಿ ಕಂಚಿನ ಪದಕ ಗಳಿಸಿದರು. ಈ ಒಲಿಂಪಿಕ್ಸ್ ನಲ್ಲಿ ಭಾರತಕ್ಕೆ ಕುಸ್ತಿಯಲ್ಲಿ ಒಲಿದ ಏಕೈಕ ಪದಕ ಇದು.

ವಿನೇಶ್ ಅನರ್ಹತೆ ಪ್ರಕರಣ: 13ರಂದು ತೀರ್ಪು ಸಾಧ್ಯತೆ

ಪ್ಯಾರಿಸ್ (ಪಿಟಿಐ): ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಅವರು ತಮ್ಮ ಅನರ್ಹತೆ ಯನ್ನು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಯ

ಕುರಿತ ತೀರ್ಪನ್ನು ಕ್ರೀಡಾ ನ್ಯಾಯಮಂಡಳಿಯು ಆ.13ರವರೆಗೆ ಕಾಯ್ದಿರಿಸಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 29 ವರ್ಷದ ವಿನೇಶ್ ಅವರು 50 ಕೆ.ಜಿ ಫ್ರೀಸ್ಟೈಲ್ ಕುಸ್ತಿ ಫೈನಲ್ ತಲುಪಿದ್ದರು. ಆದರೆ ಬೌಟ್‌ಗೂ ಮುನ್ನ ನಡೆಯುವ ಪರೀಕ್ಷೆಯಲ್ಲಿ ಅವರ ದೇಹ ತೂಕವು 100 ಗ್ರಾಮ್ ಹೆಚ್ಚಾಗಿತ್ತು. ಆದ್ದರಿಂದ ಅವರನ್ನು ಅನರ್ಹಗೊಳಿಸಲಾಗಿತ್ತು. ಆದ್ದರಿಂದ ಸೆಮಿಫೈನಲ್ ಜಯದ ವರೆಗೂ ತಮ್ಮ ತೂಕ ನಿಗದಿಯ ಪ್ರಮಾಣದಲ್ಲಿತ್ತು. ಎರಡನೇ ದಿನ ನಡೆದ ಫೈನಲ್‌ಗೂ ಮುನ್ನ ತೂಕ ಹೆಚ್ಚಳವಾಗಿದೆ. ಆದ್ದರಿಂದ ಕನಿಷ್ಠ ಬೆಳ್ಳಿ ಪದಕವನ್ನು ನೀಡಬೇಕು ಎಂದು ವಿನೇಶ್ ಮೇಲ್ಮನವಿ ಸಲ್ಲಿಸಿದ್ದರು. ಶುಕ್ರವಾರ ವಿಚಾರಣೆ ನಡೆದಿತ್ತು. ಶನಿವಾರ ತೀರ್ಪು ಪ್ರಕಟವಾಗುವ ನಿರೀಕ್ಷೆ ಇತ್ತು.

'ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕ್ರೀಡಾ ನ್ಯಾಯ ಮಂಡಳಿಯ ಹಂಗಾಮಿ ವಿಭಾಗವು ತೀರ್ಪು ಪ್ರಕಟಿಸುವುದನ್ನು ಇದೇ 13ರವರೆಗೆ ವಿಸ್ತರಿಸಿದೆ. ತೀರ್ಪುಗಾರ ಡಾ. ಅನಾಬೆಲ್ ಬೆನೆಟ್ ವಿನೇಶ್ ಮತ್ತು ವಿಶ್ವ ಕುಸ್ತಿ ಫೆಡರೇಷನ್, ಅಂತರ ರಾಷ್ಟ್ರೀಯ ಒಲಿಂಪಿಕ್ಸ್ ಸಂಸ್ಥೆಯ ವಾದಗಳನ್ನು ಆಲಿಸಿದ್ದಾರೆ' ಎಂದು ಐಒಎ ಪ್ರಕಟಣೆಯಲ್ಲಿ ತಿಳಿಸಿದೆ.

50 ಗ್ರಾಂ ತೂಕ: ಅಂದು ಅನರ್ಹಗೊಂಡಿದ್ದ ಹಿಗುಚಿಗೆ ಈಗ ಚಿನ್ನ

ಪ್ಯಾರಿಸ್ (ಪಿಟಿಐ): ಪುರುಷರ 57 ಕೆ.ಜಿ ವಿಭಾಗದ ಫ್ರೀಸ್ಟೈಲ್ ಕುಸ್ತಿಯಲ್ಲಿ ಚಿನ್ನದ ಪದಕ ಜಯಿಸಿದ ರೀ ಹಿಗುಚಿ ಅವರು ತಮ್ಮದೇ ತವರಿನಲ್ಲಿ ಮೂರು

ವರ್ಷಗಳ ಹಿಂದೆ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಅನರ್ಹರಾಗಿದ್ದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ಕಣಕ್ಕಿಳಿಯುವ ಮುನ್ನ ನಡೆದ ತೂಕ ಪರೀಕ್ಷೆಯಲ್ಲಿ ಕೇವಲ 50 ಗ್ರಾಂ ಹೆಚ್ಚು ದೇಹತೂಕ ಹೊಂದಿದ್ದರು. ಅದರಿಂದಾಗಿ ಅವರನ್ನು ಅನರ್ಹಗೊಳಿಸಲಾಗಿತ್ತು.

ಇದೀಗ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ ವಿನೇಶ್ ಫೋಗಟ್ ಅವರು 100 ಗ್ರಾಂ ಹೆಚ್ಚು ದೇಹ ತೂಕ ಹೊಂದಿದ್ದ ಕಾರಣಕ್ಕೆ 50 ಕೆ.ಜಿ ಕುಸ್ತಿ ಫೈನಲ್ ಬೌಟ್ ಮುನ್ನ ಅನರ್ಹಗೊಂಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಹಿಗುಚಿ ಅವರು. 'ವಿನೇಶ್, ನಿಮ್ಮ ನೋವು ನನಗೆ ಎಲ್ಲರಿಗಿಂತ ಚೆನ್ನಾಗಿ ಅರ್ಥವಾಗುತ್ತದೆ. ನಿಮ್ಮ ಸುತ್ತಲೂ ಕೇಳಿ ಬರುತ್ತಿರುವ ಮಾತುಗಳ ಬಗ್ಗೆ ಚಿಂತಿಸಬೇಡಿ. ಇಂತಹ ಹಿನ್ನಡೆಗಳಿಂದ ಮರಳಿ ಮೇಲೆದ್ದು ನಿಂತಾಗಲೇ ಬದುಕು ಸುಂದರವಾಗುತ್ತದೆ' ಎಂದು ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ.

ಹಿಗುಚಿ ಅವರು 2016ರಲ್ಲಿ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಅದಿತಿ ಅಶೋಕ್ —ಎಪಿ/ಪಿಟಿಐ ಚಿತ್ರ

ಗಾಲ್ಫ್: ಅದಿತಿಗೆ 29ನೇ ಸ್ಥಾನ

ಪ್ಯಾರಿಸ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದ ಭಾರತದ ಅದಿತಿ ಅಶೋಕ್ ಅವರು ಪ್ಯಾರಿಸ್ ನಲ್ಲಿ ನಿರಾಸೆ ಮೂಡಿಸಿದರು.

ಮಹಿಳೆಯರ ವೈಯಕ್ತಿಕ ಗಾಲ್ಫ್ ಸ್ಪರ್ಧೆಯಲ್ಲಿ 26 ವರ್ಷ ವಯಸ್ಸಿನ ಬೆಂಗಳೂರಿನ ಅದಿತಿ ಅವರು ಜಂಟಿ 29ನೇ ಸ್ಥಾನದಲ್ಲಿ ಅಭಿಯಾನ ಅಂತ್ಯಗೊಳಿಸಿದರು. ಭಾರತದ ಮತ್ತೊಬ್ಬ ಸ್ಪರ್ಧಿ ದೀಕ್ಷಾ ಡಾಗರ್ ಜಂಟಿ 49ನೇ ಸ್ಥಾನ ಪಡೆದರು.

ನ್ಯೂಜಿಲೆಂಡ್‌ನ ಲೆಡಿಯಾ ಕೊ ಚಿನ್ನ, ಜರ್ಮನಿಯ ಎಸ್ತರ್ ಹೆನ್ಸೆಲೈಟ್ ಬೆಳ್ಳಿ ಮತ್ತು ಚೀನಾದ ಶಿಯು ಲಿನ್ ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು.

ಈ ವಿಜಯದೊಂದಿಗೆ ಮೂರು ಒಲಿಂಪಿಕ್ಸ್‌ಗಳಲ್ಲಿ ಸತತ ಮೂರು ಪದಕಗಳನ್ನು ಗೆದ್ದ ಮೊದಲ ಗಾಲ್ಫ್ ಆಟಗಾರ್ತಿ ಎಂಬ ಖ್ಯಾತಿಗೆ ಕೊ ಪಾತ್ರರಾದರು.

ಕಂಚು ಗೆದ್ದ ಹಾಕಿ ತಂಡಕ್ಕೆ ಅದ್ಧೂರಿ ಸ್ವಾಗತ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದು ತವರಿಗೆ ಮರಳಿದ ಭಾರತ ಹಾಕಿ ತಂಡದ ಆಟಗಾರರಿಗೆ ಶನಿವಾರ ನವದೆಹಲಿಯ ವಿಮಾನ ನಿಲ್ದಾಣದಲ್ಲಿ ಅದ್ಧೂರಿ ಸ್ವಾಗತ ನೀಡಲಾಗಿತು.

ಮೂರನೇ ಸ್ಥಾನಕ್ಕಾಗಿ ಗುರುವಾರ ನಡೆದ ಪಂದ್ಯದಲ್ಲಿ ಭಾರತದ ಆಟಗಾರರು 2–1 ಗೋಲುಗಳಿಂದ ಸ್ಪೇನ್ ತಂಡವನ್ನು ಮಣಿಸಿ, ಸತತ ಎರಡನೇ ಬಾರಿ ಕಂಚಿನ ಪದಕಕ್ಕೆ ಕೊರಳೊಡ್ಡಿದ್ದರು.

ಹಾಕಿ ತಂಡದ ಎಲ್ಲಾ ಆಟಗಾರರು ತವರಿಗೆ ಬಂದಿಲ್ಲ. ಭಾನುವಾರ ಒಲಿಂಪಿಕ್ಸ್ ಸಮಾರೋಪ ಸಮಾರಂಭ ನಡೆಯಲಿದ್ದು, ಕೆಲವು ಆಟಗಾರರು ಪ್ಯಾರಿಸ್‌ನಲ್ಲೇ ಉಳಿಸಿದ್ದಾರೆ.

ಭಾರತದ 'ವಾಲ್' ಖ್ಯಾತಿಯ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರು ಶೂಟರ್ ಮನು ಭಾಕರ್ ಅವರೊಂದಿಗೆ ಸಮಾರೋಪದಲ್ಲಿ ಧ್ವಜಧಾರಿಯಾಗಲಿದ್ದಾರೆ. ಅವರಿಗೆ ಇದು ನಾಲ್ಕನೇ ಒಲಿಂಪಿಕ್ಸ್ ಆಗಿದೆ. ಅವರು ಅಂತರರಾಷ್ಟ್ರೀಯ ಹಾಕಿಗೆ ನಿವೃತ್ತಿ ಘೋಷಿಸಿದ್ದಾರೆ.

ಶ್ರೀಜೇಶ್ ಅವರೊಂದಿಗೆ ಅಮಿತ್ ರೋಹಿದಾಸ್, ರಾಜ್‌ಕುಮಾರ್ ಪಾಲ್, ಅಭಿಷೇಕ್, ಸುಖಜೀತ್ ಸಿಂಗ್ ಮತ್ತು ಸಂಜಯ್ ಅವರು ಸಮಾರೋಪ ಸಮಾರಂಭದ ನಂತರ ತವರಿಗೆ ವಾಪಸಾಗಲಿದ್ದಾರೆ.

ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಸೇರಿದಂತೆ ಹಲವು ಆಟಗಾರರು ಇಂದಿರಾಗಾಂಧಿ ವಿಮಾನ ನಿಲ್ದಾಣಕ್ಕೆ ಶನಿವಾರ ಬೆಳಿಗ್ಗೆ ಬಂದಿದ್ದು, ಅವರನ್ನು ಹೂಮಾಲೆ ಮತ್ತು ಸಂಭ್ರಮದ ಡೋಲು ವಾದ್ಯಗಳೊಂದಿಗೆ ಸ್ವಾಗತಿಸಲಾಯಿತು.

'ತಂಡಕ್ಕೆ ಎಲ್ಲ ಕಡೆಯಿಂದಲೂ ಉತ್ತಮ ಸಹಕಾರ, ಪ್ರೋತ್ಸಾಹ ದೊರಕಿದೆ. ಪ್ಯಾರಿಸ್‌ನಲ್ಲಿ ಪದಕ ಗೆದ್ದಿರುವುದು ಸಂತಸವಾಗಿದೆ. ಬೆಂಬಲ ನೀಡಿದ ಎಲ್ಲರಿಗೂ ಕೃತಜ್ಞತೆಗಳು' ಎಂದು ಹರ್ಮನ್‌ಪ್ರೀತ್ ಪ್ರತಿಕ್ರಿಯಿಸಿದರು.

ನವದೆಹಲಿಯ ವಿಮಾನ ನಿಲ್ದಾಣದಲ್ಲಿ ಶನಿವಾರ ಭಾರತ ಹಾಕಿ ತಂಡದ ಆಟಗಾರರನ್ನು ಗೌರವಿಸಲಾಯಿತು —ಪಿಟಿಐ ಚಿತ್ರ

ಜೂನಿಯರ್ ತಂಡಕ್ಕೆ ಶ್ರೀಜೇಶ್ ಕೋಚ್

ಪ್ಯಾರಿಸ್ (ಪಿಟಿಐ): ಅಂತರರಾಷ್ಟ್ರೀಯ ಹಾಕಿಗೆ ನಿವೃತ್ತಿ ಘೋಷಿಸಿರುವ ಪಿ.ಆರ್. ಶ್ರೀಜೇಶ್ ಅವರು ಶೀಘ್ರದಲ್ಲೇ ಹೊಸ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ. 36 ವರ್ಷ ವಯಸ್ಸಿನ ಶ್ರೀಜೇಶ್ ಅವರನ್ನು ಅವರನ್ನು ಹಾಕಿ ಇಂಡಿಯಾ, ರಾಷ್ಟ್ರೀಯ ಜೂನಿಯರ್ ತಂಡದ ಕೋಚ್ ಆಗಿ ನೇಮಕಮಾಡಿಕೊಳ್ಳಲು ನಿರ್ಧರಿಸಿದೆ.

ಕಂಚಿನ ಪದಕಕ್ಕಾಗಿ ಗುರುವಾರ ನಡೆದ ಪಂದ್ಯದಲ್ಲಿ ಸ್ಪೇನ್ ವಿರುದ್ಧ ಭಾರತ ಜಯ ಗಳಿಸಿದ ನಂತರ ಶ್ರೀಜೇಶ್ ಅವರು ತಮ್ಮ ದೀರ್ಘ ಹಾಕಿ ವೃತ್ತಿಜೀವನಕ್ಕೆ ಅಧಿಕೃತವಾಗಿ ತೆರೆ ಎಳೆದಿದ್ದರು.

'ನಾವು ಕೆಲವೇ ದಿನಗಳಲ್ಲಿ ಶ್ರೀಜೇಶ್ ಅವರನ್ನು ಪುರುಷರ ಜೂನಿಯರ್ ತಂಡದ ಕೋಚ್ (21 ವರ್ಷದೊಳಗಿನವರು) ಆಗಿ ನೇಮಕ ಮಾಡುತ್ತೇವೆ. ಈ ಕುರಿತು ಅವರೊಂದಿಗೆ ಚರ್ಚಿಸಿದ್ದೇವೆ. ಯುವಕರಿಗೆ ಮಾರ್ಗದರ್ಶನ ನೀಡಲು ಅವರಿಗಿಂತ ಉತ್ತಮ ವ್ಯಕ್ತಿ ಸಿಗಲ್ಲ' ಎಂದು ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟರ್ಕಿ ಪ್ಯಾರಿಸ್‌ನಲ್ಲಿ ಪಿಟಿಐಗೆ ತಿಳಿಸಿದ್ದಾರೆ.

76 ಕೆ.ಜಿ ಮಹಿಳೆಯರ ಫ್ರೀಸ್ಟೈಲ್: ದಿಟ್ಟ ಹೋರಾಟ ನಡೆಸಿದ ಕುಸ್ತಿಪಟು

ಕ್ವಾರ್ಟರ್‌ನಲ್ಲಿ ರಿತಿಕಾಗೆ ಸೋಲು

ಪ್ಯಾರಿಸ್ (ಪಿಟಿಐ: ಭಾರತದ ಕುಸ್ತಿಪಟು ರಿತಿಕಾ ಹೂಡಾ ಅವರು ಒಲಿಂಪಿಕ್ಸ್‌ನ 76 ಕೆ.ಜಿ ಮಹಿಳೆಯರ ಫ್ರೀಸ್ಟೈಲ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ದಿಟ್ಟ ಹೋರಾಟ ನಡೆಸಿ ಪರಾಭವಗೊಂಡರು.

21 ವರ್ಷ ವಯಸ್ಸಿನ ರಿತಿಕಾ ಶನಿವಾರ ಆರಂಭಿಕ ಸುತ್ತಿನಲ್ಲಿ ಹಂಗೇರಿಯ ಬರ್ನಾಡೆಟ್ ನ್ಯಾಗಿ ಅವರನ್ನು ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಮಣಿಸಿ ಕ್ವಾರ್ಟರ್ ಫೈನಲ್ ತಲುಪಿದ್ದರು. ಆದರೆ, ನಂತರದ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಐಪೆರಿ ಮೆಡೆಟ್ ಕಿಝಿ ಅವರಿಗೆ ಶರಣಾದರು.

ಕಳೆದ ವರ್ಷ 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್ ನಲ್ಲಿ ಚಿನ್ನ ಗೆದ್ದಿದ್ದ ರಿತಿಕಾ, ಏಷ್ಯನ್ ಗೇಮ್ಸ್ ಚಾಂಪಿಯನ್ ಮತ್ತು ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತೆ ಕಿರ್ಗಿಸ್ತಾನದ ಐಪೆಟ್ ವಿರುದ್ಧ ಪಂದ್ಯದ ಕೊನೆಯವರೆಗೂ 1-1 ಸಮಬಲ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಇಬ್ಬರೂ ಕುಸ್ತಿಪಟುಗಳು ರಕ್ಷಣಾತ್ಮಕ ಆಟಕ್ಕೆ ಹೆಚ್ಚಿನ ಒತ್ತು ನೀಡಿದರು.

ಕುಸ್ತಿ ನಿಯಮದ ಅನ್ವಯ ಅಂಕಗಳು ಸಮಬಲಗೊಂಡರೆ ಕೊನೆಯದಾಗಿ ಅಂಕವನ್ನು ಗಳಿಸಿದವರನ್ನು ವಿಜೇತರು ಎಂದು ಘೋಷಿಸಲಾಗುತ್ತದೆ. ಹೀಗಾಗಿ, 25 ವರ್ಷ ವಯಸ್ಸಿನ ಐಪೆರಿ ಮುಂದಿನ ಸುತ್ತು ಪ್ರವೇಶಿಸಿದರು.

ಇದಕ್ಕೂ ಮೊದಲು ಹೂಡಾ, ಬರ್ನಾಡೆಟ್ ನ್ಯಾಗಿ ವಿರುದ್ಧ 12-2ರ ಅಂತರದಲ್ಲಿ ಸುಲಭ ಗೆಲುವು ದಾಖಲಿಸಿ ಶುಭಾರಂಭ ಮಾಡಿದ್ದರು. ತನ್ನ ಶಕ್ತಿ ಮತ್ತು ಕೌಶಲ ಪ್ರದರ್ಶಿಸಿದ್ದ ರಿತಿಕಾ ಎದುರಾಳಿಗಿಂತಲೂ 10 ಅಂಕ ಮುನ್ನಡೆ ಗಳಿಸಿದ್ದ ಹಿನ್ನೆಲೆಯಲ್ಲಿ ನಿಗದಿತ ಸಮಯಕ್ಕಿಂತಲೂ 29 ಸೆಕೆಂಡಿಗೂ ಮುನ್ನವೇ ರೆಫರಿ ಪಂದ್ಯವನ್ನು ಮುಕ್ತಾಯಗೊಳಿಸಿದ್ದರು.

ರಿತಿಕಾ ಅವರ ಭವಿಷ್ಯವು ಐಪೆರಿಯ ಸೆಮಿಫೈನಲ್ ಪಂದ್ಯದ ಫಲಿತಾಂಶವನ್ನು ಅವಲಂಬಿತವಾಗಿದೆ. ಒಂದು ವೇಳೆ ಕಿರ್ಗಿಸ್ತಾನದ ಕುಸ್ತಿಪಟು ಫೈನಲ್‌ಗೆ ತಲುಪಿದರೆ, ರಿತಿಕಾ ಅವರಿಗೆ ಕಂಚಿನ ಪ್ಲೇ ಆಫ್‌ನ ರೆಪಷಾನ್ ಸುತ್ತಿಗೆ ಅರ್ಹತೆ ಪಡೆಯುತ್ತಾರೆ.

ಕಣದಲ್ಲಿದ್ದ ಭಾರತದ ಐವರು ಮಹಿಳಾ ಕುಸ್ತಿಪಟುಗಳಲ್ಲಿ ರಿತಿಕಾ ಕೊನೆಯವರು. ಅಂತಿಮ್ ಪಂಘಲ್ (53 ಕೆಜಿ), ಅಂಶು ಮಲಿಕ್ (57 ಕೆಜಿ) ಮತ್ತು ನಿಶಾ ದಹಿಯಾ (68 ಕೆಜಿ) ಈಗಾಗಲೇ ಹೊರಬಿದ್ದಿದ್ದಾರೆ.

ಭಾರತದ ಕುಸ್ತಿಪಟು ರಿತಿಕಾ ಹೂಡಾ (ನೀಲಿ) ಅವರು 76 ಕೆ.ಜಿ ಮಹಿಳೆಯರ ಫ್ರೀಸ್ಟೈಲ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಶನಿವಾರ ಕಿರ್ಗಿಸ್ತಾನದ ಐಪೆರಿ ಮೆಡೆಟ್ ಕಿಝಿ ವಿರುದ್ಧ ಸೆಣಸಿದರು ಪ್ರಜಾವಾಣಿ ಚಿತ್ರ: ಕೆ.ಎನ್. ಶಾಂತಕುಮಾರ್

ಒಲಿಂಪಿಕ್ಸ್ ಸಮಾರೋಪ ಇಂದು

ಪ್ಯಾರಿಸ್: ಇಲ್ಲಿ ಜುಲೈ 26ರಂದು ಆರಂಭಗೊಂಡ 33ನೇ ಒಲಿಂಪಿಕ್ ಕ್ರೀಡಾ ಕೂಟಕ್ಕೆ ಭಾನುವಾರ ತೆರೆ ಬೀಳಲಿದೆ.

ಸಮಾರೋಪ ಸಮಾರಂಭವು ಮಧ್ಯರಾತ್ರಿ 12.30ಕ್ಕೆ (ಭಾರತೀಯ ಕಾಲಮಾನ) ಪ್ರಾರಂಭವಾಗಿ ಸೋಮವಾರ ನಸುಕಿನ ಜಾವ 3ರವರೆಗೆ ನಡೆಯುವ ಸಾಧ್ಯತೆ ಇದೆ. ಆದರೆ, ಕಾರ್ಯಕ್ರಮದ ಬಗ್ಗೆ ಆಯೋಜನಾ ಸಮಿತಿ ಅಧಿಕೃತವಾಗಿ ಮಾಹಿತಿ ನೀಡಿಲ್ಲ.

ಸ್ಟೇಟ್ ಡಿ ಫ್ರಾನ್ಸ್ ಕ್ರೀಡಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನಟ ಟಾಮ್ ಕ್ರೂಸ್, ರ್‍ಯಾಪರ್ ಸ್ನೂಪ್ ಡಾಗ್, ಗಾಯಕಿ ಬಿಲ್ಲಿ ಎಲಿಶ್ ಮತ್ತು ರ್‍ಯಾಪರ್ ದಿ ರೆಡ್ ಹಾಟ್ ಚಿಲ್ಲಿ ಪೆಪ್ಪರ್ಸ್ ಕಾಣಿಸಿಕೊಳ್ಳಲಿದ್ದಾರೆ ಎಂದು ಇಎಸ್‌ಪಿಎನ್ ವೆಬ್‌ಸೈಟ್ ಪ್ರಕಟಿಸಿದೆ.

ಸಮಾರೋಪ ಸಮಾರಂಭವು ಸಾಂಪ್ರದಾಯಿಕವಾಗಿ ಧ್ವಜಗಳ ಮೆರವಣಿಗೆಯೊಂದಿಗೆ ಪ್ರಾರಂಭವಾಗುತ್ತದೆ. ಪ್ರತಿ ರಾಷ್ಟ್ರದ ಕ್ರೀಡಾಪಟುಗಳು ತಮ್ಮ ದೇಶದ ಧ್ವಜದೊಂದಿಗೆ ಭಾಗವಹಿಸುತ್ತಾರೆ. ಒಲಿಂಪಿಕ್ಸ್ ಪ್ರಾರಂಭವಾದಾಗಿನಿಂದ ಗ್ರೀಕ್ ಧ್ವಜಕ್ಕೆ ಮೆರವಣಿಗೆಯಲ್ಲಿ ಮೊದಲ ಸ್ಥಾನವಿದೆ.

ಕೂಟದ ಪ್ರಸ್ತುತ ಆತಿಥೇಯ ನಗರದ ಮೇಯರ್ ಒಲಿಂಪಿಕ್ ಧ್ವಜವನ್ನು ಅಂತರ ರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧ್ಯಕ್ಷರಿಗೆ ಹಸ್ತಾಂತರಿಸುತ್ತಾರೆ. ನಂತರ ಅವರು ಅದನ್ನು ಮುಂದಿನ ಒಲಿಂಪಿಕ್ಸ್‌ನ ಆತಿಥೇಯ ನಗರದ ಮೇಯರ್‌ಗೆ ಪ್ರಸ್ತುತಪಡಿಸುತ್ತಾರೆ. ಸಮಾರಂಭದಲ್ಲಿ ಅಧಿಕೃತ ಒಲಿಂಪಿಕ್ ಧ್ವಜವನ್ನು ಸ್ವೀಕರಿಸುವ ಮೊದಲ ಕಪ್ಪು ವರ್ಣದ ಮಹಿಳೆ ಎಂಬ ಖ್ಯಾತಿ ಲಾಸ್ ಏಂಜಲೀಸ್‌ನ ಮೇಯರ್ ಬಾಸ್ ಅವರದ್ದಾಗಲಿದೆ. ನಂತರ ಒಲಿಂಪಿಕ್ ಜ್ಯೋತಿ ನಂದಿಸುವ ಮೂಲಕ ಒಲಿಂಪಿಕ್ಸ್ ಮುಕ್ತಾಯಗೊಳಿಸಲಾಗುತ್ತದೆ.

ಪ್ಯಾರಿಸ್ ಒಲಿಂಪಿಕ್ ಕೂಟದ ಮಹಿಳೆಯರ ರಿಧಮಿಕ್ ಜಿಮ್ನಾಸ್ಟಿಕ್ಸ್‌ನಲ್ಲಿ ಚೀನಾದ ಅಥ್ಲೀಟ್‌ಗಳ ಆಕರ್ಷಕ ಕಸರತ್ತು —ಎಎಫ್‌ಪಿ

ಚೀನಾ ವನಿತೆಯರಿಗೆ ರಿಧಮಿಕ್ ಚಿನ್ನ

ಪ್ಯಾರಿಸ್ (ಎಪಿ): ಚೀನಾ ತಂಡವು ಒಲಿಂಪಿಕ್ಸ್‌ನಲ್ಲಿ ಇದೇ ಮೊದಲ ಸಲ ರಿಧಮಿಕ್ ಜಿಮ್ನಾಸ್ಟಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿತು.

ಐವರು ಮಹಿಳೆಯರ ಚೀನಾ ತಂಡವು ಶನಿವಾರ ನಡೆದ ಫೈನಲ್‌ನಲ್ಲಿ 69.800 ಅಂಕಗಳನ್ನು ಗಳಿಸಿತು. ಎರಡು ವಿಭಾಗಗಳಲ್ಲೀ ಫೈನಲ್ ಸುತ್ತು ವಿಂಗಡಣೆಯಾಗಿತ್ತು.

ಮೊದಲನೆಯ ವಿಭಾಗದಲ್ಲಿ ಹೂಪ್‌ಗಳನ್ನು ಮತ್ತು ಎರಡನೇ ವಿಭಾಗದಲ್ಲಿ ರಿಬ್ಬನ್, ಚೆಂಡುಗಳನ್ನು ಬಳಸಿ ಕಸರತ್ತು ತೋರಿಸಿದರು.

ಇಸ್ರೇಲ್ ತಂಡವು ಬೆಳ್ಳಿ ಪದಕ ಜಯಿಸಿತು. ದೇಶಕ್ಕೆ ಲಭಿಸಿದ ಮೊದಲ ರಿಧಮಿಕ್ ಜಿಮ್ನಾಸ್ಟಿಕ್ಸ್ ಪದಕ ಇದಾಗಿದೆ. ಇಟಲಿ ಕಂಚು ಗಳಿಸಿತು.

ಥ್ರೋಬಾಲ್: ಬೆಂಗಳೂರು, ಚಿತ್ರದುರ್ಗ ತಂಡಗಳಿಗೆ ಪ್ರಶಸ್ತಿ

ಹುಬ್ಬಳ್ಳಿ: ಬೆಂಗಳೂರು ವೈದ್ಯಕೀಯ ಕಾಲೇಜಿನ ಪುರುಷರ ತಂಡ ಮತ್ತು ಚಿತ್ರದುರ್ಗದ ಬಸವೇಶ್ವರ ವೈದ್ಯಕೀಯ ಕಾಲೇಜಿನ ಮಹಿಳೆಯರ ತಂಡಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಆಯೋಜಿಸಿದ್ದ ರಾಜ್ಯಮಟ್ಟದ ಥ್ರೋಬಾಲ್ ಟೂರ್ನಿಯಲ್ಲಿ ಟ್ರೋಫಿ ಜಯಿಸಿದವು.

ಇಲ್ಲಿನ ಗೋಕುಲ ರಸ್ತೆಯ ಸಂಜೀವಿನಿ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜಿನ ಪುರುಷರ ತಂಡವು 25-17, 23-25, 15-13ರಿಂದ ಚಿತ್ರದುರ್ಗದ ಬಸವೇಶ್ವರ ವೈದ್ಯಕೀಯ ಕಾಲೇಜು ತಂಡವನ್ನು ಮಣಿಸಿತು.

ಮಹಿಳೆಯರ ವಿಭಾಗದಲ್ಲಿ ಚಿತ್ರದುರ್ಗದ ಬಸವೇಶ್ವರ ವೈದ್ಯಕೀಯ ಕಾಲೇಜು ತಂಡವು 22-25, 25-19, 15-12ರಿಂದ ದಾವಣಗೆರೆಯ ಶಾಮನೂರು ಶಿವಶಂಕರಪ್ಪ ವೈದ್ಯಕೀಯ ಕಾಲೇಜು ತಂಡದ ಎದುರು ಜಯಗಳಿಸಿತು.

ಮಹಿಳೆಯರ ವಿಭಾಗದಲ್ಲಿ ಕೊಡಗು ವೈದ್ಯಕೀಯ ಕಾಲೇಜಿನ ತಂಡ ತೃತೀಯ ಸ್ಥಾನ, ವಿಜಯಪುರದ ಬಿ.ಎಲ್.ಡಿ.ಇ.ಸಂಸ್ಥೆಯ ಆಯುರ್ವೇದ ಕಾಲೇಜು ನಾಲ್ಕನೇ ಸ್ಥಾನ ಪಡೆದವು. ಪುರುಷರ ವಿಭಾಗದಲ್ಲಿ ಮೈಸೂರಿನ ವೈದ್ಯಕೀಯ ಕಾಲೇಜಿನ ತಂಡ ತೃತೀಯ, ಬೆಂಗಳೂರಿನ ಆಕಾಶ ವೈದ್ಯಕೀಯ ಕಾಲೇಜಿನ ತಂಡ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟವು. ವಿಜೇತ ತಂಡಗಳಿಗೆ ಟ್ರೋಫಿ, ಪ್ರಶಸ್ತಿ ಪತ್ರ ನೀಡಲಾಯಿತು. ಪುರುಷರ 36 ಮತ್ತು ಮಹಿಳೆಯರ 37 ತಂಡಗಳು ಟೂರ್ನಿಯಲ್ಲಿ ಭಾಗವಹಿಸಿದ್ದವು.

ಹರ್ ಘರ್ ತಿರಂಗಾ: ಮೋದಿ ನಡೆಗೆ ಟೀಕೆ

ನವದೆಹಲಿ (ಪಿಟಿಐ): 'ಮನೆ ಮನೆಯಲ್ಲೂ ತಿರಂಗಾ' ಅಭಿಯಾನ ನಡೆಯಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿರುವ ಮನವಿಯನ್ನು ಟೀಕಿಸಿರುವ ಕಾಂಗ್ರೆಸ್, 'ತಮ್ಮ ಸೈದ್ಧಾಂತಿಕ ಬಂಧುಗಳು ಎಂದೋ ಕೈಬಿಟ್ಟಿರುವ ರಾಷ್ಟ್ರೀಯ ಸಂಕೇತವೊಂದನ್ನು ಅವರು ತಮ್ಮದಾಗಿಸಿಕೊಳ್ಳಲು ಯತ್ನಿಸುತ್ತಿದ್ದಾರೆ' ಎಂದು ಹೇಳಿದೆ.

'ಮನೆ ಮನೆಯಲ್ಲೂ ತಿರಂಗಾ' ಅಭಿಯಾನವನ್ನು ಸ್ಮರಣೀಯವಾದ ಸಾಮೂಹಿಕ ಅಭಿಯಾನವನ್ನಾಗಿಸಬೇಕು ಎಂದು ಮೋದಿ ಅವರು ಶುಕ್ರವಾರ ಕರೆ ನೀಡಿದ್ದಾರೆ. ಎಕ್ಸ್ ವೇದಿಕೆಯಲ್ಲಿ ರಾಷ್ಟ್ರ ಧ್ವಜವನ್ನು ತಮ್ಮ ಖಾತೆಯ ಪ್ರೊಫೈಲ್ ಚಿತ್ರವನ್ನಾಗಿಸಿಕೊಂಡಿದ್ದಾರೆ, ದೇಶದ ಎಲ್ಲರೂ ಇದೇ ರೀತಿ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಕಿಲಿಮಂಜಾರೊದಲ್ಲಿ ತ್ರಿವರ್ಣ ಧ್ವಜ ಅನಾವರಣ

ನವದೆಹಲಿ (ಪಿಟಿಐ): 78ನೆಯ ಸ್ವಾತಂತ್ರ್ಯ ದಿನಾಚರಣೆ ಹೊಸ್ತಿನಲ್ಲಿ ಪರ್ವತಾರೋಹಿಗಳ ತಂಡವೊಂದು, ರಕ್ಷಣಾ ಸಚಿವಾಲಯದ ನೆರವು ಪಡೆದು, 7,800 ಚದರ ಅಡಿ ಗಾತ್ರದ ತ್ರಿವರ್ಣ ಧ್ವಜವನ್ನು ಆಫ್ರಿಕಾ ಖಂಡದ ಕಿಲಿಮಂಜಾರೊದ ಉಹುರು ಪರ್ವತದ ಶೃಂಗದಲ್ಲಿ ಅನಾವರಣ ಮಾಡಿದೆ.

'ಕನಸುಗಳನ್ನು ಈಡೇರಿಸಿಕೊಳ್ಳುವುದು ಎಷ್ಟೇ ಸವಾಲಿನದ್ದಾಗಿ ಕಂಡರೂ, ಅವುಗಳನ್ನು ನನಸಾಗಿಸಿ ಕೊಳ್ಳುವ ಸ್ಫೂರ್ತಿಯನ್ನು ಇದು ಅಂಗವಿಕಲರ ಮುಂದಿನ ತಲೆಮಾರಿ ನವರಲ್ಲಿ ಮೂಡಿಸುವ ಗುರಿಯನ್ನು ಹೊಂದಿದೆ' ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಈ ತಂಡವನ್ನು ಗ್ರೂಪ್ ಕ್ಯಾಪ್ಟನ್ ಜೈ ಕಿಷನ್ ಅವರು ಮುನ್ನಡೆಸಿದ್ದರು. ದೇಹದ ಅಂಗವೊಂದನ್ನು ಕಳೆದುಕೊಂಡಿರುವ ವ್ಯಕ್ತಿಯೊಬ್ಬರು ಊರುಗೋಲು ಬಳಸಿ ಇದೇ ಮೊದಲಿಗೆ ಈ ಶೃಂಗವನ್ನು ಏರಿದ್ದಾರೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಪಂಜಾಬ್‌ಗೆ ನಿತಿನ್ ಎಚ್ಚರಿಕೆ

'ಕಾನೂನು ಸ್ಥಿತಿ ಸುಧಾರಿಸದಿದ್ದರೆ ಯೋಜನೆಗಳು ಸ್ಥಗಿತ'

ನವದೆಹಲಿ (ಪಿಟಿಐ): ಪಂಜಾಬ್ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸ್ಥಿತಿ ಸುಧಾರಿಸದಿದ್ದರೆ ಸದ್ಯ ಚಾಲ್ತಿಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ಯೋಜನೆಗಳನ್ನು ರದ್ದು ಅಥವಾ ಕೈಬಿಡುವ ನಿರ್ಧಾರ ಕೈಗೊಳ್ಳಬೇಕಾಗು ತ್ತದೆ ಎಂದು ಕೇಂದ್ರ ಎಚ್ಚರಿಸಿದೆ.



ನಿತಿನ್ ಗಡ್ಕರಿ

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(ಎನ್‌ಎಚ್‌ಎಐ) ರಾಜ್ಯದಲ್ಲಿ ಎಂಟು ಹೆದ್ದಾರಿ ಕಾಮಗಾರಿ ಕೈಗೊಂಡಿದೆ. ಕಾನೂನು ಸ್ಥಿತಿ ಸುಧಾರಿಸದಿದ್ದರೆ ಯೋಜನೆ ಕೈಬಿಡದೇ ಅನ್ಯ ಮಾರ್ಗವಿಲ್ಲ ಎಂದು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ರಾಜ್ಯ ಸರ್ಕಾರಕ್ಕೆ ಪತ್ರಬರೆದಿದ್ದಾರೆ.

293 ಕಿ.ಮೀ. ಉದ್ದದ ರಸ್ತೆ ನಿರ್ಮಾಣದ ಈ ಯೋಜನೆಗಳ ಒಟ್ಟು ವೆಚ್ಚ ₹14,288 ಕೋಟಿ ಎಂದಿದ್ದಾರೆ.

ಮುಖ್ಯಾಂಶಗಳು

- 293 ಕಿ.ಮೀ. ಉದ್ದದ ₹14,288 ಕೋಟಿ ವೆಚ್ಚದ ಯೋಜನೆಗಳು
- ಎಂಜಿನಿಯರ್, ಗುತ್ತಿಗೆದಾರರ ಮೇಲೆ ನಡೆದ ಹಲ್ಲೆ ಪ್ರಕರಣಗಳ ಉಲ್ಲೇಖ
- ಕಿಡಿಗೇಡಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಇತ್ತೀಚೆಗೆ ದೆಹಲಿ-ಕತ್ರಾ ಎಕ್ಸ್‌ಪ್ರೆಸ್‌ವೇ ಯೋಜನೆಯಲ್ಲಿ ನಡೆದ ಎರಡು ಘಟನೆಗಳನ್ನು ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ.

ಜಲಂಧರ್ ಜಿಲ್ಲೆಯಲ್ಲಿ ಎಂಜಿನಿಯರ್ ಮತ್ತು ಗುತ್ತಿಗೆದಾರನ ಮೇಲೆ ತೀವ್ರ ಹಲ್ಲೆನಡೆದಿದ್ದು, ಎಫ್‌ಐಆರ್ ದಾಖಲಿಸಿದೆ. ಲೂಧಿಯಾನ ಜಿಲ್ಲೆಯಲ್ಲಿ ನಡೆದ ಇನ್ನೊಂದು ಘಟನೆಯಲ್ಲಿಯೂ ದುಷ್ಕರ್ಮಿಗಳು ಎಂಜಿನಿಯರ್‌ಗಳ ಟೆಂಟ್‌ಗಳಿಗೆ ಬೆಂಕಿ ಹಚ್ಚುವ ಬೆದರಿಕೆ ಹಾಕಲಾಗಿದೆ ಎಂದು ಆಗಸ್ಟ್ 9ರಂದು ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ಎನ್‌ಎಚ್‌ಎಐ ಅಧಿಕಾರಿಗಳ ಲಿಖಿತ ಮನವಿಯ ನಂತರವೂ ಎರಡನೇ ಪ್ರಕರಣದಲ್ಲಿ ಇನ್ನೂ ಎಫ್‌ಐಆರ್ ದಾಖಲಾಗಿಲ್ಲ. ಆರೋಪಿಗಳನ್ನು ಬಂಧಿಸಿಲ್ಲ ಎಂದು ಉಲ್ಲೇಖಿಸಿದ್ದಾರೆ.

ಭೂಸ್ವಾಧೀನ ಪ್ರಕ್ರಿಯೆ ವಿಳಂಬ, ಕಾನೂನು ಸುವ್ಯವಸ್ಥೆ ಸಮಸ್ಯೆಯಿಂದಾಗಿ ಗುತ್ತಿಗೆದಾರರು ಒಪ್ಪಂದ ರದ್ದತಿಗೆ ಮನವಿ ಮಾಡಿದ್ದಾರೆ. ಈಗಾಗಲೇ ₹3,263 ಕೋಟಿ ಅಂದಾಜು ವೆಚ್ಚದ 3 ಯೋಜನೆ ರದ್ದಾಗಿದೆ ಎಂದು ತಿಳಿಸಿದ್ದಾರೆ.

ಜುಲೈ 15ರಂದು ಎನ್‌ಎಚ್ ಯೋಜನೆಗಳ ಪ್ರಗತಿ ಪರಿಶೀಲನೆ ನಡೆದಿತ್ತು. ಆದ್ಯತೆ ಮೇರೆಗೆ ಭೂಸ್ವಾಧೀನ ಪ್ರಕರಣ ಇತ್ಯರ್ಥಪಡಿಸುವ ಭರವಸೆಯನ್ನು ಅಲ್ಲಿ ನೀಡಲಾಗಿತ್ತು. ಆದರೆ ಯಾವುದೇ ಪ್ರಗತಿ ಕಂಡುಬಂದಿಲ್ಲ ಎಂದು ತಿಳಿಸಿದ್ದಾರೆ.

ಪಂಜಾಬ್ ಮುಖ್ಯಮಂತ್ರಿಗೆ ಬರೆದ ಪತ್ರದೊಂದಿಗೆ ಎಂಜಿನಿಯರ್‌ಗಳ ಮೇಲೆ ನಡೆದಿರುವ ಹಲ್ಲೆಗೆ ಸಂಬಂಧಿಸಿದ ಫೋಟೊಗಳನ್ನೂ ಲಗತ್ತಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಆಲೂಗಡ್ಡೆ ಲಂಚ ಕೇಳಿದ ಪೊಲೀಸ್ ಅಮಾನತು

ಕನೌಜ್, ಉತ್ತರಪ್ರದೇಶ (ಪಿಟಿಐ): ಪ್ರಕರಣವೊಂದನ್ನು ಇತ್ಯರ್ಥಗೊಳಿಸಲು ಲಂಚದ ರೂಪದಲ್ಲಿ ಆಲೂಗಡ್ಡೆ ನೀಡಬೇಕೆಂದು ವ್ಯಾಪಾರಿಯೊಬ್ಬರಿಗೆ ಬೇಡಿಕೆ ಇರಿಸಿದ್ದ ಇಲ್ಲಿನ ಸಬ್ ಇನ್‌ಸ್ಪೆಕ್ಟರ್‌ವೊಬ್ಬರನ್ನು ಅಮಾನತು ಮಾಡಲಾಗಿದೆ.

ಸೌರಿಖ್ ಪೊಲೀಸ್ ಠಾಣೆಯ ಸಬ್– ಇನ್‌ಸ್ಪೆಕ್ಟರ್ ರಾಮಕೃಪಾಲ್ ಅವರು ಆಲೂಗಡ್ಡೆಗೆ ಬೇಡಿಕೆ ಇಟ್ಟದ್ದರು ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಬಳಿಕ, ಕನೌಜ್‌ನ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಕುಮಾರ್ ಆನಂದ್ ಅವರು ಈ ಕ್ರಮ ಕೈಗೊಂಡಿದ್ದಾರೆ.

'ವ್ಯಕ್ತಿಯು ತನಗೆ ಎರಡು ಕಿಲೋ ಆಲೂಗಡ್ಡೆಯನ್ನು ಮಾತ್ರ ಕೊಡಲು ಸಾಧ್ಯ ಎಂದು ಹೇಳುವುದು ಮತ್ತು ಅದಕ್ಕೆ ಅಸಮಾಧಾನಗೊಂಡ ರಾಮ್ ಕೃಪಾಲ್, ಐದು ಕಿಲೋ ನೀಡಲು ಒಪ್ಪಂದವಾಗಿತ್ತು ಎಂದು ಹೇಳುವುದು ಆಡಿಯೊದಲ್ಲಿದೆ. ವ್ಯಾಪಾರ ಕಡಿಮೆಯಾಗಿದ್ದರಿಂದ ಎರಡು ಕಿಲೋ ಮಾತ್ರ ನೀಡಲು ಸಾಧ್ಯ ಎಂದು ವ್ಯಕ್ತಿಯು ಪುನರುಚ್ಚರಿಸಿದಾಗ, ಬಾಕಿ ಮೂರು ಕಿಲೋ ಆಲೂಗಡ್ಡೆಯನ್ನು ನಂತರದಲ್ಲಿ ನೀಡುವಂತೆ ರಾಮ್‌ಕೃಪಾಲ್ ಹೇಳುತ್ತಾರೆ.

ಸಂಪುಟದ ಮುಂದಿನ ಕಾರ್ಯದರ್ಶಿ ಸೋಮನಾಥನ್

ನವದೆಹಲಿ: ಹಣಕಾಸು ಕಾರ್ಯದರ್ಶಿ ಟಿ.ವಿ.ಸೋಮನಾಥನ್ ಅವರನ್ನು ಸಂಪುಟದ ಮುಂದಿನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ.

ಸೋಮನಾಥನ್ ಅವರು ಆಗಸ್ಟ್ 30ರಂದು ಅಧಿಕಾರ ಸ್ವೀಕರಿಸಲಿದ್ದಾರೆ. ಸದ್ಯ, ರಾಜೀವ್ ಗೌಬಾ ಅವರು ಸಂಪುಟ ಕಾರ್ಯದರ್ಶಿಯಾಗಿದ್ದಾರೆ.

ಸೋಮನಾಥನ್ 1987ನೇ ಬ್ಯಾಚ್‌ನ ತಮಿಳುನಾಡು ಕೇಡರ್‌ನ ಐಎಎಸ್ ಅಧಿಕಾರಿ. ಈ ಮೊದಲು, ಅವರು ತಮಿಳುನಾಡು ಸರ್ಕಾರದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ನಂತರ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ, ಪ್ರಧಾನಿ ನರೇಂದ್ರ ಮೋದಿ ಅವರ ಹೆಚ್ಚುವರಿ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

'ಅಗ್ನಿವೀರ' ಅತ್ಯುತ್ತಮ ಅವಕಾಶ: ತ್ರಿಪಾಠಿ

ಭುವನೇಶ್ವರ (ಪಿಟಿಐ): ದೇಶ ಸೇವೆ ಸಲ್ಲಿಸಲು ಯುವಕರಿಗೆ 'ಅಗ್ನಿವೀರ' ಯೋಜನೆಯು ಅತ್ಯುತ್ತಮ ಅವಕಾಶ ವಾಗಿದೆ ಎಂದು ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರು ಹೇಳಿದರು.

ಒಡಿಶಾದ ಖುರ್ದಾ ಜಿಲ್ಲೆಯ ಐಎನ್‌ಎಸ್ ಚಿಲಿಕಾದಲ್ಲಿ ಶುಕ್ರವಾರ ತರಬೇತಿ ಪಡೆದ ಅಗ್ನಿವೀರರ ನಿರ್ಗ ಮನ ಪಥಸಂಚಲನದಲ್ಲಿ ತ್ರಿಪಾಠಿ ಅವರು ಭಾಗಿಯಾಗಿದ್ದರು. ಈ ವೇಳೆ ಮಾತನಾಡಿ, '16 ವಾರಗಳ ತರಬೇತಿ ಪೂರೈಸಿದ 214 ಮಹಿಳಾ ಅಗ್ನಿವೀರರು ಸೇರಿ ಒಟ್ಟು 1,389 ಅಗ್ನಿವೀರರು ಶುಕ್ರವಾರ ನೌಕಾಪಡೆಗೆ ಸೇರ್ಪಡೆಯಾಗಿದ್ದಾರೆ. ಈ ಯೋಜನೆಯು ಯುವಜನರಿಗೆ ದೇಶಸೇವೆ ಮಾಡಲು ನಾಲ್ಕು ವರ್ಷಗಳ ಅವಕಾಶವನ್ನು ನೀಡುತ್ತದೆ' ಎಂದರು.



ಮಹಿಳೆಯರ 100 ಮೀ ಹರ್ಡಲ್ಸ್‌ನಲ್ಲಿ ಅಮೆರಿಕದ ಮಸಾಯ್ ರಸೆಲ್ (ಎಡದಿಂದ ಮೂರನೇಯವರು) ಗುರಿಯತ್ತ ಮುನ್ನುಗ್ಗಿದರು (ಎಡ ಚಿತ್ರ). ಪುರುಷರ 800 ಮೀ ಓಟದಲ್ಲಿ ಮಾರ್ಕೊ ಆರೊಪ್ (ಬೆಳ್ಳಿ ಪದಕ), ಇಮ್ಯಾನ್ಯುವೆಲ್ ವಾನೊಯಿ (ಚಿನ್ನ) ಮತ್ತು ಡಿಜಮೆಲ್ ಸಜೆಟಿ ಅವರು ವಿಜಯದ ಗೆರೆಯತ್ತ ನುಗ್ಗಲು ನಿಕಟ ಪೈಪೋಟಿ ನಡೆಸಿದರು –ಪ್ರಜಾವಾಣಿ ಚಿತ್ರಗಳು/ಕೆ.ಎನ್. ಶಾಂತಕುಮಾರ್

800 ಮೀ ಓಟದಲ್ಲಿ ಇಮ್ಯಾನುವೆಲ್ ಜಯಭೇರಿ • ಕೆನ್ಯಾದ ಫೇಥ್ ಕಿಪೆಗಾನ್‌ಗೆ ಮೂರನೇ ಚಿನ್ನ

ಹರ್ಡಲ್ಸ್‌ನಲ್ಲಿ ಮಸಾಯ್ ರಸೆಲ್‌ಗೆ ಚಿನ್ನ

ಪ್ಯಾರಿಸ್ (ಎಎಫ್‌ಪಿ): ಅಮೆರಿಕದ ಮಸಾಯ್ ರಸೆಲ್ ಅವರು ಫೋಟೊ ಫಿನಿಷ್ ಮುಕ್ತಾಯ ಕಂಡ ಮಹಿಳೆಯರ 100 ಮೀಟರ್ಸ್ ಹರ್ಡಲ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದರು.

ಶನಿವಾರ ನಡೆದ ಈ ರೋಚಕ ಸ್ಪರ್ಧೆಯಲ್ಲಿ ಮಸಾಯ್ 12.33 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಆತಿಥೇಯ ಫ್ರಾನ್ಸ್‌ನ ಸೈರಿನಾ ಸಾಂಬಾ ಮಯೆಲಾ 0.01ಸೆಕೆಂಡು ಅಂತರದಲ್ಲಿ ಗುರಿ ಮುಟ್ಟಿದರು. ಅವರು ಬೆಳ್ಳಿ ಪದಕ ಪಡೆದರು. ಇದು ಆತಿಥೇಯ ದೇಶಕ್ಕೆ ಅಥ್ಲೆಟಿಕ್ಸ್‌ನಲ್ಲಿ ಒಲಿದ ಮೊದಲ ಪದಕವಾಗಿದೆ.

ಪೋರ್ಟೊರಿಕೊದ ಜಾಸ್ಮಿನ್ ಕ್ಯಾಮ್ಕೋ ಕ್ವಿನ್ ಅವರು (12.36 ಸೆ) ಕಂಚು ಗಳಿಸಿದರು.

ಅತ್ಯಂತ ನಿಕಟ ಸ್ಪರ್ಧೆಯಾಗಿದ್ದರಿಂದ ಮೊದಲ ಮೂರು ಸ್ಥಾನಗಳ ವೇಳೆಯನ್ನು ಪರಿಶೀಲಿಸಲು ನಿರ್ಣಾಯಕರು ತುಸು ಸಮಯ ತೆಗೆದುಕೊಂಡರು. ನಂತರ ಫಲಿತಾಂಶ ಪ್ರಕಟಿಸಿದರು.

ಇಮ್ಯಾನುವೆಲ್‌ಗೆ ಚಿನ್ನ: ಕೆನ್ಯಾದ 20 ವರ್ಷದ ಇಮ್ಯಾನುವೆಲ್ ವಾನೊನಿ ಪುರುಷರ 800 ಮೀಟರ್ ಓಟದಲ್ಲಿ ಚಿನ್ನದ ಪದಕ ಜಯಿಸಿದರು. ಅವರು ಈ ಪೈಪೋಟಿಯಲ್ಲಿ ವಿಶ್ವ ಚಾಂಪಿಯನ್ ಆಗಿರುವ ಕೆನಡಾದ ಮಾರ್ಕೊ ಎರೊಪ್ ಅವರನ್ನು ಹಿಂದಿಕ್ಕಿದರು.

1 ನಿಮಿಷ, 41.19 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಇಮ್ಯಾನುವೆಲ್ ಪ್ರಥಮ ಸ್ಥಾನ ಗಳಿಸಿದರು. ಅತ್ಯಲ್ಪ ಅಂತರದಲ್ಲಿ ಎರಡನೇ ಸ್ಥಾನ ಗಳಿಸಿದ ಮಾರ್ಕೊ (1ನಿ,41.20ಸೆ) ಬೆಳ್ಳಿ ಪದಕ ಪಡೆದರು. ಅಲ್ಜೀರಿಯಾದ ಡಿಜೆಮೆಲ್ ಸೆಡ್ಜೇತಿ (1ನಿ, 41.50ಸೆ) ಕಂಚಿನ ಪದಕ ಗಳಿಸಿದರು.

ಮಹಿಳೆಯರ 1500 ಮೀ ಓಟದಲ್ಲಿ ಚಿನ್ನ ಗೆದ್ದ ಕೆನ್ಯಾದ ಫೇಥ್ ಕಿಪೆಗಾನ್ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್

69 ಸಾವಿರ ಪ್ರೇಕ್ಷಕರು ಸೇರಿದ್ದ ಸ್ಟೇಡ್ ಡಿ ಫ್ರಾನ್ಸ್ ಕ್ರೀಡಾಂಗಣದಲ್ಲಿ ನಡೆದ ರೇಸ್‌ನ ಬಹುತೇಕ ಸಮಯ ಇಮ್ಯಾನುವೆಲ್ ಮತ್ತು ಮಾರ್ಕೊ ನಿಕಟ ಪೈಪೋಟಿ ನಡೆಸಿದರು.

ಜೇಕಬ್ ಜಯಭೇರಿ: ನಾರ್ವೆಯ ಜೇಕಬ್ ಇಂಜೆಬ್ರೈಟ್‌ಸೆನ್ ಅವರು 5000 ಮೀ ಇಥಿಯೋಪಿಯಾ ಓಟಗಾರರ ಪೈಪೋಟಿಯನ್ನು ಮೀರಿ ನಿಂತು ಬಂಗಾರ ಪದಕ ಗಳಿಸಿದರು. ವಿಶ್ವ ಚಾಂಪಿಯನ್ ಆಗಿರುವ ಜೇಕಬ್ 13 ನಿಮಿಷ, 13.66 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಕೆನ್ಯಾದ ರೋನಾಲ್ಡ್ ಕೆವಿಮೊಯ್ (13ನಿ, 5.04ಸೆ) ಬೆಳ್ಳಿ ಮತ್ತು ಅಮೆರಿಕದ ಗ್ರ್ಯಾಂಟ್ ಫಿಷರ್ (13ನಿ,15.13ಸೆ) ಕಂಚು ಗಳಿಸಿದರು.

ಕಿಪೆಗಾನ್ ಹ್ಯಾಟ್ರಿಕ್

ಮಧ್ಯಮ ಅಂತರದ ಓಟದ ದಂತಕಥೆ ಕೆನ್ಯಾದ ಫೇಥ್ ಕಿಪೆಗಾನ್ ಸತತ ಮೂರನೇ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 1500 ಮೀಟರ್ಸ್ ಓಟದಲ್ಲಿ ಚಿನ್ನದ ಪದಕ ಗೆದ್ದರು. 3 ನಿಮಿಷ, 51.29 ಸೆಕೆಂಡುಗಳಲ್ಲಿ ಕಿಪೆಗಾನ್ ಅವರು ಗುರಿ ಮುಟ್ಟಿದರು. ಇದು ಒಲಿಂಪಿಕ್ ಕೂಟ ದಾಖಲೆಯಾಗಿದೆ. ಆಸ್ಟ್ರೇಲಿಯಾದ ಜೆಸಿಕಾ ಹಲ್ (3ನಿ,52.56ಸೆ) ಮತ್ತು ಬ್ರಿಟನ್‌ನ ಜಾರ್ಜಿಯಾ ಬೆಲ್ ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

ಸತತವಾಗಿ ಒಲಿಂಪಿಕ್ಸ್ ನಲ್ಲಿ ಐತಿಹಾಸಿಕ ಪದಕ ಗೆದ್ದ ನೀರಜ್ ಚೋಪ್ರಾ

ತೋಲಾಗೆ ಮ್ಯಾರಥಾನ್ ಚಿನ್ನ

ಪ್ಯಾರಿಸ್ (ಎಎಫ್‌ಪಿ): ಇಥಿಯೋಪಿಯಾದ ತಮಿರತ್ ತೋಲಾ ಅವರು ಶ್ರೇಷ್ಠ ಗುಣ ಮಟ್ಟದ ಪ್ರದರ್ಶನ ನೀಡಿ ಒಲಿಂಪಿಕ್ಸ್ ಪುರುಷರ ಮ್ಯಾರಥಾನ್ ಚಿನ್ನ ಗೆದ್ದುಕೊಂಡರು. ಸತತ ಮೂರನೇ ಬಾರಿ ಚಿನ್ನದ ಪದಕ ಗೆಲ್ಲುವ ಇಲ್ಯುಡ್ ಕಿಪ್ಚೋಗೆ ಅವರ ಕನಸು ಶನಿವಾರ ನುಚ್ಚುನೂರಾಯಿತು.

ತೋಲಾ ಅವರು 42.195 ಕಿ.ಮೀ. (26.21 ಮೈಲಿ) ಓಟವನ್ನು 2 ಗಂಟೆ 06 ನಿಮಿಷ 26 ಸೆಕೆಂಡುಗಳಲ್ಲಿ ಓಟವನ್ನು ಪೂರೈಸಿ ಒಲಿಂಪಿಕ್ ದಾಖಲೆ ಸ್ಥಾಪಿಸಿದರು. ಬೆಳ್ಳಿ ಗೆದ್ದ ಬೆಲ್ಜಿಯಂನ ಬಶೀರ್ ಅಬ್ದಿ ಅವರಿಗಿಂತ 21 ಸೆಕೆಂಡು ಮೊದಲೇ ಗುರಿಮುಟ್ಟಿದರು. ಮೂರು ವರ್ಷ ಹಿಂದೆ ಟೋಕಿಯೊ ಕ್ರೀಡೆಗಳ ಮ್ಯಾರಥಾನ್‌ನಲ್ಲಿ ಅಬ್ದಿ ಕಂಚಿನ ಪದಕ ಗೆದ್ದಿದ್ದು, ಇಲ್ಲಿ ಮೇಲ್ದರ್ಜೆಗೇರಿದರು.

ಇತ್ತೀಚಿನ ವರ್ಷಗಳಲ್ಲಿ ಟೋಕಿಯೊ, ಬೋಸ್ಟನ್ ಮತ್ತು ಷಿಕಾಗೊ ಮ್ಯಾರಥಾನ್‌ಗಳಲ್ಲಿ ವಿಜೇತರಾದ ಕೆನ್ಯಾದ ಬೆನ್ಸನ್ ಕಿಪ್ರುಟೊ ಕೇವಲ 13 ಸೆಕೆಂಡಗಳಿಂದ ಹಿಂದೆಬಿದ್ದು ಕಂಚಿನ ಪದಕ ಗೆದ್ದುಕೊಂಡರು.

‘ಥಾಂಕ್ಯೂ ಪ್ಯಾರಿಸ್!’ ಎಂದು ತೋಲಾ ಉದ್ಗರಿಸಿದರು. 2016ರ ರಿಯೊ ಕ್ರೀಡೆಳಲ್ಲಿ 10,000 ಮೀ. ಓಟದಲ್ಲಿ ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದ ತೊಲಾ ಅವರು ಭಾನುವಾರ (ಆಗಸ್ಟ್ 18ರಂದು) 33ನೇ ವರ್ಷದ ಹುಟ್ಟುಹಬ್ಬ ಆಚರಿಸಲಿದ್ದಾರೆ.

ಒಲಿಂಪಿಕ್ಸ್‌ಗೆ ಕಿಪ್ಚೋಗೆ ವಿದಾಯ: ಎಎಫ್‌ಪಿ ವರದಿ: ರಿಯೊ (2016) ಮತ್ತು ಟೋಕಿಯೊ (2021) ಕ್ರೀಡೆಗಳಲ್ಲಿ ಮ್ಯಾರಥಾನ್ ಚಾಂಪಿಯನ್ ಆಗಿದ್ದ ಕೆನ್ಯಾದ ಇಲ್ಯುಡ್ ಕಿಪ್ಚೋಗೆ ಅವರು ಈ ಬಾರಿ ಸ್ಪರ್ಧೆ ಪೂರೈಸಲಾಗಲಿಲ್ಲ. ನಂತರ ಇದು ತಮ್ಮ ಕೊನೆಯ ಒಲಿಂಪಿಕ್ಸ್ ಎಂದು ಘೋಷಿಸಿದರು. ಬೆನ್ನುನೋವಿನ ಕಾರಣ ಸ್ಪರ್ಧೆಯ ಅಂತಿಮ ಹಂತದಲ್ಲಿ ಹಿಂದೆ ಸರಿದರು. 30 ಕಿ.ಮೀ. ಓಟದ ನಂತರ ಹಿಂದೆ ಸರಿದಾಗ ಅವರು 71ನೇ ಸ್ಥಾನದಲ್ಲಿದ್ದರು.

ಎರಡನೇ ಸ್ಥಾನ ಪಡೆದ ಅಬ್ದಿ ಅವರು ‘ತುಂಬಾ ಬಿಸಿಲಿತ್ತು. ಓಟದ ಸ್ಥಳಗಳಲ್ಲಿ ಸಾಕಷ್ಟು ಏರು, ತಗ್ಗುಗಳಿದ್ದವು. ಇದು ನಾನು ಓಡಿದ ಭಯಾನಕ ಮ್ಯಾರಥಾನ್ ಕೋರ್ಸ್’ ಎಂದರು. ‘ಕೆಲವು ಕಡೆ ತುಂಬಾ ಇಳಿಜಾರು ರೀತಿಯಲ್ಲಿತ್ತು. ದೇಹದ ಮೇಲೆ ನಿಯಂತ್ರಣ ಸಾಧಿಸಲು ಕಷ್ಟವಾಗುತಿತ್ತು. ಜಾಗ ಭಯಹುಟ್ಟಿಸುತಿತ್ತು. ಸುಮಾರು 2 ಕಿ.ಮೀ. ತಗ್ಗಿನಂಥ ಪ್ರದೇಶದಲ್ಲಿ ಓಡಬೇಕಾಯಿತು. ನನಗೆ ಬೀಳುತ್ತೇನೆಂಬ ಭಯಹುಟ್ಟಿತ್ತು...’ ಎಂದರು.

ಒಲಿಂಪಿಕ್ಸ್ ಪುರುಷರ ಮ್ಯಾರಥಾನ್‌ನಲ್ಲಿ ಬೆಳ್ಳಿ ಗೆದ್ದ ಬೆಲ್ಜಿಯಂನ ಬಶೀರ್ ಅಬ್ದಿ, ಚಿನ್ನ ಗೆದ್ದ ಇಥಿಯೋಪಿಯಾದ ತಮಿರತ್ ತೋಲಾ ಮತ್ತು ಕಂಚು ಗೆದ್ದ ಕೆನ್ಯಾದ ಬೆನ್ಸನ್ ಕಿಪ್ರುಟೊ –ಎಎಫ್‌ಪಿ ಚಿತ್ರ

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	38	27	24	89
ಅಮೆರಿಕ	36	42	41	119
ಆಸ್ಟ್ರೇಲಿಯಾ	18	18	14	50
ಜಪಾನ್	17	12	13	42
ಫ್ರಾನ್ಸ್	15	22	22	59
ಬ್ರಿಟನ್	14	21	26	61
ದ.ಕೊರಿಯಾ	13	8	9	30
ನೆದರ್‌ಲೆಂಡ್ಸ್	13	6	12	31
ಜರ್ಮನಿ	12	10	8	30
ಇಟಲಿ	11	13	15	39
ನ್ಯೂಜಿಲೆಂಡ್	9	7	2	18
ಕೆನಡಾ	8	7	11	26
ಉಜ್ಬೇಕಿಸ್ತಾನ	6	1	3	10
ಹಂಗೇರಿ	5	7	6	18
ಸ್ಪೇನ್	5	3	8	16
ಕೆನ್ಯಾ	4	2	4	10
ನಾರ್ವೆ	4	1	1	6
ಭಾರತ	0	1	5	6

ಪಟ್ಟಿಯಲ್ಲಿ ಭಾರತ 70ನೇ ಸ್ಥಾನದಲ್ಲಿದೆ

ಪ್ಯಾರಿಸ್‌ನಲ್ಲಿ ಕ್ರೀಡಾಸ್ಫೂರ್ತಿ ಮೆರೆದ ಅಥ್ಲೀಟ್‌ಗಳು • ಸೋಲು– ಗೆಲುವಿನಾಚೆ ಸ್ನೇಹದ ಬಾಂಧವ್ಯ

‘ಪ್ರೇಮನಗರಿ’ಯಲ್ಲಿ ಮನಗೆದ್ದ ಕ್ಷಣಗಳು

ಪ್ರಜಾವಾಣಿ ವಾರ್ತೆ

ಪ್ಯಾರಿಸ್: ಯಾವುದೇ ಕ್ರೀಡಾಕೂಟದಲ್ಲಿ ಪದಕ, ಪ್ರಶಸ್ತಿ ಜಯಿಸಿದವರು ಸಂಭ್ರಮಿಸುವುದು ಮತ್ತು ಸೋತವರು ಹತಾಶರಾಗುವುದು ಸಹಜ. ಇಂತಹ ಕ್ಷಣಗಳು ಒಂದಿಷ್ಟು ಕಾಲ ನೆನಪಿನಲ್ಲಿ ಉಳಿಯುತ್ತವೆ. ಆದರೆ ಸೋಲು, ಗೆಲುವಿನಾಚೆ ದಾಖಲಾಗುವ ಕ್ರೀಡಾಸ್ಫೂರ್ತಿಯ ಕ್ಷಣಗಳ ನೆನಪುಗಳಿಗೆ ದೀರ್ಘ ಆಯಸ್ಸು ಇರುತ್ತದೆ ಎಂಬುದು ಸುಳ್ಳಲ್ಲ. ಪ್ರತಿ ಒಲಿಂಪಿಕ್ಸ್‌ನಲ್ಲಿಯೂ ಇಂತಹ ಘಟನೆಗಳು ನಡೆಯುತ್ತವೆ. ಪ್ಯಾರಿಸ್ ಒಲಿಂಪಿಕ್ಸ್ ಕೂಡ ಇಂತಹ ಕೆಲವು ಕ್ಷಣಗಳಿಗೆ ಸಾಕ್ಷಿಯಾಗಿದೆ. ಅದರ ಪ್ರಮುಖವಾಗಿರುವ ಕೆಲ ಘಟನೆಗಳು ಇಲ್ಲಿವೆ.

ನೀರಜ್ ಚೋಪ್ರಾ ಮತ್ತು ಅರ್ಷದ್ ನದೀಂ –ಪಿಟಿಐ ಚಿತ್ರ

1. ನೀರಜ್– ಅರ್ಷದ್ ಗಳಸ್ಯ ಕಂಠಸ್ಯ

ಭಾರತ ಮತ್ತು ಪಾಕಿಸ್ತಾನ ನಡುವಣ ಕ್ರಿಕೆಟ್, ಹಾಕಿ ಮತ್ತಿತರ ಪಂದ್ಯಗಳು ನಡೆದಾಗ ಎಂತಹ ವಾತಾವರಣ ಇರುತ್ತದೆ ಎಂಬುದು ಗೊತ್ತಿರುವ ವಿಷಯವೇ. ಆದರೆ ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಥ್ರೋ ತಾರೆಯರಾದ ನೀರಜ್ ಚೋಪ್ರಾ ಮತ್ತು ಅರ್ಷದ್ ನದೀಂ ಅವರ ಆತ್ಮೀಯ ಸ್ನೇಹ ಈಗ ಜಗದಗಲ ಪಸರಿಸಿದೆ. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನೀರಜ್ ಚಿನ್ನ ಗೆದ್ದಿದ್ದರು, ಆಗ ಪಾಕಿಸ್ತಾನದ ನದೀಂ ಐದನೇ ಸ್ಥಾನ ಪಡೆದಿದ್ದರು. ಅದರ ನಂತರ ಅವರಿಬ್ಬರ ಸ್ನೇಹ ದಿನದಿಂದ ದಿನಕ್ಕೆ ಗಟ್ಟಿಯಾಯಿತು. ಏಷ್ಯನ್ ಗೇಮ್ಸ್, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ನೀರಜ್ ಚಿನ್ನ ಮತ್ತು ನದೀಂ ಬೆಳ್ಳಿ ಗೆದ್ದರು. ಒಬ್ಬರಿನ್ನೊಬ್ಬರ ಹೆಗಲ ಮೇಲೆ ಕೈಹಾಕಿಕೊಂಡು ಸಂಭ್ರಮಿಸಿದರು. ಇದೀಗ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನದೀಮ್ ಚಿನ್ನ ಗೆದ್ದರೆ, ನೀರಜ್ ಬೆಳ್ಳಿ ಜಯಿಸಿದ್ದಾರೆ. ಒಂದು ಕಾಲದಲ್ಲಿ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಅಮೆರಿಕ, ಯುರೋಪ್ ದೇಶಗಳ ಪ್ರಾಬಲ್ಯವಿತ್ತು. ಈಗ ನೀರಜ್ ಮತ್ತು ನದೀಂ ಗೆಳೆತನದಿಂದಾಗಿ ಏಷ್ಯಾದ ಶಕ್ತಿ ಹೆಚ್ಚಿದೆ. ಅಷ್ಟೇ ಅಲ್ಲ. ನೀರಜ್ ಮತ್ತು ನದೀಂ ಅವರ ತಾಯಂದಿರಿಬ್ಬರೂ ನೀಡಿದ ಹೇಳಿಕೆಗಳು ಸೌಹಾರ್ದತೆಯ ಸಂದೇಶವಾಗಿ ಜನಮನ ಸೆಳೆದಿವೆ.

2. ಬೈಲ್ಸ್–ರೆಬೆಕಾ ದೋಸ್ತಿ

ಮಹಿಳೆಯರ ಜಿಮ್ನಾಸ್ಟಿಕ್ಸ್ ಕ್ರೀಡೆಯಲ್ಲಿ ಅಮೆರಿಕದ ಸಿಮೊನ್ ಬೈಲ್ಸ್ ಮತ್ತು ಬ್ರೆಜಿಲ್‌ನ ರೆಬೆಕಾ ಆ್ಯಂಡ್ರೇಡ್ ಅವರ ನಡುವಿನ ಪೈಪೋಟಿ ಜಗಜ್ಜಾಹೀರು. ಯಾವುದೇ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಪದಕ ಗೆಲುವಿನಲ್ಲಿ ಇವರಿಬ್ಬರ ಸ್ಪರ್ಧೆಯು ತಾರಕಕ್ಕೇರುತ್ತದೆ. ಆದರೆ ಒಬ್ಬರಿನ್ನೊಬ್ಬರ ಸಾಧನೆಯನ್ನು ಪ್ರಶಂಸೆ ಮಾಡುವಾಗಲೂ ಮುಂಚೂಣಿಯಲ್ಲಿರುತ್ತಾರೆ. ಹಾಗೆ ನೋಡಿದರೆ ರೆಬೆಕಾಗಿಂತ ಸಿಮೋನ್ ಇದುವರೆಗೆ ಹೆಚ್ಚು ಪದಕಗಳನ್ನು ಜಯಿಸಿರುವ ಚಾಂಪಿಯನ್ ಜಿಮ್ನಾಸ್ಟ್. ಆದರೆ ರೆಬೆಕಾ ಬಗ್ಗೆ ಅವರಿಗೆ ಅಪಾರ ಪ್ರೀತಿ. ಪ್ಯಾರಿಸ್ ಒಲಿಂಪಿಕ್ಸ್ ಜಿಮ್ನಾಸ್ಟಿಕ್ಸ್‌ನಲ್ಲಿ ಸಿಮೊನ್ ಮೂರು ಚಿನ್ನ ಗೆದ್ದರು. ಫ್ಲೋರ್ ಎಕ್ಸ್‌ಸೈಜ್ ವಿಭಾಗದಲ್ಲಿಯೂ ಜಯಿಸಿದ್ದರೆ ಎಲ್ಲ ವಿಭಾಗದಲ್ಲಿಯೂ ಚಾಂಪಿಯನ್ ಆದಂತೆ ಆಗುತ್ತಿತ್ತು. ಆದರೆ, ಫ್ಲೋರ್‌ನಲ್ಲಿ ರೆಬೆಕಾ ಗೆದ್ದರು. ಸಿಮೊನ್ ಬೆಳ್ಳಿ ಪಡೆದರು. ಇದನ್ನು ಮನಸ್ಸಿಗೆ ಹಚ್ಚಿಕೊಳ್ಳದ ಸಿಮೊನ್ ಅವರು ರೆಬೆಕಾಳನ್ನು ಬಿಗಿದಪ್ಪಿ ಅಭಿನಂದಿಸಿದರು. ವಿಜಯ ವೇದಿಕೆಯಲ್ಲಿ ಪದಕ ಪಡೆದ ನಂತರ ಸಿಮೊನ್ ಅವರು ಮಂಡಿಯೂರಿ ತಮ್ಮ ತಲೆ ಬಾಗಿಸಿ ರೆಬೆಕಾಗೆ ಗೌರವ ಸಲ್ಲಿಸಿದರು. ಅವರಿಗೆ ಕಂಚಿನ ಪದಕ ಗೆದ್ದ ಜೋರ್ಡನ್ ಚಿಲ್ಸ್ ಕೂಡ ಜೊತೆಯಾದರು.

3. ರಗ್ಬಿ ಸೆವೆನ್ ಚಿತ್ರಕಥೆ

ಮಹಿಳೆಯರ ರಗ್ಬಿಯಲ್ಲಿ ನ್ಯೂಜಿಲೆಂಡ್ ತಂಡವು ಅಮೋಘ ಜಯ ಸಾಧಿಸಿ ಚಿನ್ನದ ಪದಕ ಗಳಿಸಿತು. ಕೆನಡಾ ಮತ್ತು ಅಮೆರಿಕ ತಂಡಗಳು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದವು.

ವಿಜಯ ವೇದಿಕೆಯಲ್ಲಿ ಪದಕ ಜಯಿಸಿದ ನಂತರ ನ್ಯೂಜಿಲೆಂಡ್ ತಂಡವು ಗ್ರೂಪ್ ಫೋಟೊ ತೆಗೆಸಿಕೊಂಡಿತು. ಆಗ ತಂಡದ ಆಟಗಾರ್ತಿಯರು ಕೆನಡಾ ಮತ್ತು ಅಮೆರಿಕ ತಂಡಗಳನ್ನು ತಮ್ಮೊಂದಿಗೆ ಸೇರಿಸಿಕೊಂಡು ಸಮೂಹ ಚಿತ್ರ ತೆಗೆಸಿಕೊಂಡು ‘ನಾವು ಗೆಳತಿಯರು’ ಎಂಬ ಸಂದೇಶ ನೀಡಿದರು.

4. ವೈಲ್ಡ್ ಪ್ರೀತಿ

ಟ್ರಯಥ್ಲಾನ್‌ನಲ್ಲಿ ಬ್ರಿಟನ್‌ನ ಅಲೆಕ್ಸ್ ಯೀ ಮತ್ತು ನ್ಯೂಜಿಲೆಂಡ್‌ನ ಹೇಡನ್ ವೈಲ್ಡ್ ಅವರ ಪೈಪೋಟಿಯು ಕ್ರೀಡಾಲೋಕದಲ್ಲಿ ಗೊತ್ತಿರುವಂತದ್ದೆ. ಇಬ್ಬರು ಕಣಕ್ಕಿಳಿದರೆ ಶತಾಯಗತಾಯ ಪರಸ್ಪರ ಒಬ್ಬರಿನ್ನೊಬ್ಬರನ್ನು ಸೋಲಿಸಲು ಪ್ರಯತ್ನಿಸುತ್ತಾರೆ. ಈ ಬಾರಿಯೂ ಅದೇ ರೀತಿ ಸ್ಪರ್ಧಿಸಿದರು.

ಆದರೆ ವೈಯಕ್ತಿಕ ವಿಭಾಗದಲ್ಲಿ ಟ್ರಯಥ್ಲಾನ್ ಸ್ಪರ್ಧೆಯ ಕೊನೆಯ 400 ಮೀಟರ್ಸ್ ಅಂತರದಲ್ಲಿ ಅಲೆಕ್ಸ್ ಅವರು ಹೇಡನ್ ಅವರನ್ನು ಹಿಂದಿಕ್ಕಿದರು. ಚಿನ್ನದ ಪದಕ ಗಳಿಸಿದರು. ರೇಸ್ ಮುಕ್ತಾಯವಾದ ಕೂಡಲೇ ಅಲ್ಲಿಯೇ ಇದ್ದ ನೀಲಿ ಕಾರ್ಪೆಟ್ ಮೇಲೆ ಹೇಡನ್ ಅವರು ಕುಳಿತರು. ಅಲೆಕ್ಸ್ ಅವರನ್ನು ಎಳೆದು ತಮ್ಮ ಪಕ್ಕಕ್ಕೆ ಕೂರಿಸಿಕೊಂಡು ಅಭಿನಂದಿಸಿದರು. ನಂತರ ಈ ಚಿತ್ರವನ್ನು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಾಕಿ ‘ಪ್ರೀತಿಯ ಗೆಳೆಯ ಒಲಿಂಪಿಕ್ ಚಾಂಪಿಯನ್ ಆಗಲು ನೀನು ಅರ್ಹ’ ಎಂದು ಒಕ್ಕಣೆ ಬರೆದರು. ತಮ್ಮ ಕ್ರೀಡಾಜೀವನದ ಅತಿ ದೊಡ್ಡ ‘ವೈರಿ’ಯ ಕುರಿತು ಅವರು ಸ್ನೇಹದ ಸಿಂಚನ ಹರಿಸಿದರು.

5.ನೆರವಿನ ಹಸ್ತ ಚಾಚಿದ ಸಿಲಿನಾ

ಅಥ್ಲೆಟಿಕ್ಸ್‌ನಲ್ಲಿ ಮಹಿಳೆಯರ 100 ಮೀಟರ್ಸ್ ಹೀಟ್ಸ್‌ನಲ್ಲಿ ನಡೆದ ಒಂದು ಘಟನೆಯು ಕ್ರೀಡಾಪ್ರೇಮಿಗಳ ಮನಸ್ಸು ಗೆದ್ದಿತು. ಈ ಓಟ ನಡೆಯುವ ಸಂದರ್ಭದಲ್ಲಿ ದಕ್ಷಿಣ ಸುಡಾನ್ ಸ್ಪರ್ಧಿ ಲೂಸಿಯಾ ಮಾರಿಸ್ ತಮ್ಮ ಕಾಲಿನ ಸ್ನಾಯುಸೆಳೆತದಿಂದಾಗಿ ಟ್ರ್ಯಾಕ್ ಮೇಲೆ ಉರುಳಿದರು. ಎಲ್ಲ ಸ್ಪರ್ಧಿಗಳೂ ಗೆಲುವಿನ ರೇಖೆ ಮುಟ್ಟಿದರು. ಆಗಲೂ ಲೂಸಿಯಾ ಇನ್ನೂ ಟ್ರ್ಯಾಕ್ ಮೇಲೆಯೇ ಒರಗಿದ್ದರು. ನೋವಿನಿಂದ ನರಳುತ್ತಿದ್ದರು. ಅದನ್ನು ನೋಡಿದ ಪ್ರತಿಸ್ಪರ್ಧಿ ಲಾವೊಸ್‌ನ ಸಿಲಿನಾ ಫಾ ಅಫೆ ಅವರು ಲೂಸಿಯಾ ಅವರತ್ತ ಧಾವಿಸಿದರು. ಅವರಿಗೆ ಪ್ರಥಮ ಚಿಕಿತ್ಸೆ ನೀಡುವ ಪ್ರಯತ್ನ ಮಾಡಿದರು. ವೈದ್ಯಕೀಯ ಸಿಬ್ಬಂದಿ ಬಂದು ಸ್ಟ್ರೇಚರ್‌ಗೆ ಲೂಸಿಯಾ ಅವರನ್ನು ಹೊತ್ತೊಯ್ಯಲು ಕೂಡ ಸಿಲಿನಾ ಸಹಕರಿಸಿದರು.

ಕಟ್ಟಡ ಕಾರ್ಮಿಕನ ಮಗನಾಗಿ ಹುಟ್ಟಿದ ‘ಚಿನ್ನದ ಹುಡುಗ’ ಅರ್ಷದ್ ನದೀಮ್

ದೇಸಿ ಜಾವೆಲಿನ್, ಹೊಲ ಅಭ್ಯಾಸದ ತಾಣ...

ಲಾಹೋರ್ (ರಾಯಿಟರ್ಸ್): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಖಾನೆವಾಲ್ ಜಿಲ್ಲೆಯ ಮಿಯಾನ್ ಚಾನು ಕುಗ್ರಾಮ. ಇಲ್ಲಿನ ಇಟ್ಟಿಗೆ ಮಿಶ್ರಿತ ಮಣ್ಣಿನ ಮನೆಯೊಂದರಲ್ಲಿ ಕಟ್ಟಡ ಕಾರ್ಮಿಕನ ಮಗನಾಗಿ ಹುಟ್ಟಿದ ಅರ್ಷದ್ ನದೀಮ್ ಸಾಧನೆ ಸ್ಫೂರ್ತಿದಾಯಕವಾದುದು.

ಎಂಟು ಮಕ್ಕಳಲ್ಲಿ ನದೀಮ್ ಮೂರನೆಯವರು. ಮನೆಯಲ್ಲೇ ತಯಾರು ಮಾಡಿದ್ದ ‘ದೇಸಿ ಜಾವೆಲಿನ್’ ಎಸೆಯಲು ಗೋಧಿ ಹೊಲಗಳನ್ನೇ ಆಶ್ರಯಿಸಿದ್ದರು. ಅವರ ಒಲಿಂಪಿಕ್ಸ್ ಕನಸು ಚಿಗುರೊಡೆದಿದ್ದು ಇದೇ ಹಳ್ಳಿಯಲ್ಲಿ. ರಾಜಧಾನಿಯಿಂದ ದೂರದ ಗ್ರಾಮಗಳ ರೀತಿ ಇಲ್ಲೂ ಕುಡಿಯುವ ನೀರಿಗೆ ಸಮರ್ಪಕ ವ್ಯವಸ್ಥೆಯಿಲ್ಲ. ವಿದ್ಯುತ್ ಸಂಪರ್ಕವೂ ಅಷ್ಟಕ್ಕಷ್ಟೇ. ಕ್ರೀಡಾ ಸೌಲಭ್ಯಗಳ ಮಾತಂತೂ ದೂರ.

ಕಳೆದ ಗುರುವಾರ ತಡರಾತ್ರಿ ನದೀಮ್ ಚಿನ್ನ ಗೆದ್ದಾಗ ಇದೇ ಗ್ರಾಮದಲ್ಲಿ ಸಂಭ್ರಮ ಮುಗಿಲುಮುಟ್ಟಿತ್ತು. ಈ ಹಳ್ಳಿಯ ಹುಡುಗ ದೂರದ ಪ್ಯಾರಿಸ್‌ನಲ್ಲಿ, ಫೆವರೀಟ್ ಆಗಿದ್ದ ನೀರಜ್ ಚೋಪ್ರಾ ಅವರನ್ನು ಎರಡನೇ ಸ್ಥಾನಕ್ಕೆ ಸರಿಸಿದ್ದರು. ಅದೂ ದಾಖಲೆಯೊಡನೆ.

‘ಅಂದು ರಾತ್ರಿ ನಾವು ನಿದ್ದೆ ಮಾಡಲಿಲ್ಲ. ಇಡೀ ದಿನ ಬಂಧುಗಳು, ಮಾಧ್ಯಮದವರು, ಅಭಿಮಾನಿಗಳು ಅಭಿನಂದಿಸುತ್ತಲೇ ಇದ್ದರು. ಖುದ್ದಾಗಿ ಬಂದವರೂ ಇದ್ದರು’ ಎಂದು ಅವರ ದೊಡ್ಡ ಅಣ್ಣ ಶಹೀದ್ ನದೀಮ್ ತಿಳಿಸಿದರು.

ನದೀಮ್ ಗೆದ್ದ ಪದಕ, ಪಾಕಿಸ್ತಾನಕ್ಕೆ 1992ರ ಬಾರ್ಸಿಲೋನಾ ಕ್ರೀಡೆಗಳ ನಂತರ ಮೊದಲನೆಯದು. 1984ರ ಲಾಸ್ ಏಂಜಲೀಸ್ ಕ್ರೀಡೆಗಳ ನಂತರ ಮೊದಲ ಚಿನ್ನ. ‘ಇದು ದೇಶದ ಸ್ವಾತಂತ್ರ್ಯೋತ್ಸವಕ್ಕೆ ನನ್ನ ಕಾಣಿಕೆ’ ಎಂದು ನದೀಮ್ ಎಕ್ಸ್‌ನಲ್ಲಿ ಪೋಸ್ಟ್ ಹಾಕಿದ್ದರು. 27 ವರ್ಷದ ನದೀಮ್ ಎರಡು ಮಕ್ಕಳ ತಂದೆ.

‘ನಾವು ನೀಲಗಿರಿ ಕಾಂಡದಿಂದ ಜಾವೆಲಿನ್ ತಯಾರಿಸಿ, ಅದರ ತುದಿಗೆ ತಗಡನ್ನು ಹೊದಿಸುತ್ತಿದ್ದೆವು. ಗೋಧಿ ಹೊಲಗಳು ನಮಗೆ ತರಬೇತಿಯ ತಾಣವಾಗಿದ್ದವು’ ಎಂದು ಶಹೀದ್ ಕಳೆದುಹೋದ ದಿನಗಳನ್ನು ನೆನಪಿಸಿದರು.

‘ನಾವು ದೇಸಿ ರೀತಿಯಲ್ಲಿ ತೂಕ ನಿರ್ವಹಣೆ ತರಬೇತಿ ನಡೆಸುತ್ತಿದ್ದೆವು. ಕಬ್ಬಿಣದ ಸಲಾಕೆ, ಸಿಮೆಂಟ್ ತುಂಬಿದ ಎಣ್ಣೆ ಡಬ್ಬ, ಗಟ್ಟಿ ಕಾಂಕ್ರಿಟ್ – ಇವೆಲ್ಲವೂ ಜಿಮ್ ಪರಿಕರಗಳಾಗಿದ್ದವು’ ಎಂದರು.

ನದೀಮ್ ಪಾಕಿಸ್ತಾನ ನೀರು ಮತ್ತು ಇಂಧನ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಮೇಲೆ ಅವರಿಗೆ ಕ್ರೀಡಾ ಸೌಲಭ್ಯಗಳು ದೊರೆತವು ಎಂದು ಹೇಳಿದರು.

ಕೆಲವೇ ತಿಂಗಳ ಹಿಂದಿನವರೆಗೆ ಅವರು ಕಡಿಮೆ ದರ್ಜೆಯ, ಸವಕಲಾದ ಜಾವೆಲಿನ್ ಬಳಸುತ್ತಿದ್ದರು. ಪ್ಯಾರಿಸ್‌ಗೆ ಹೋಗುವ ಕೆಲವೇ ತಿಂಗಳ ಹಿಂದೆ ಕೊನೆಯ ಕ್ಷಣದ ಮನವಿಗೆ ಸರ್ಕಾರ ಸ್ಪಂದಿಸಿತು ಎಂದು ಅವರ ತಾಯಿ ರಝಿಯಾ ಪರ್ವೀನ್ ‘ರಾಯಿಟರ್ಸ್’ಗೆ ತಿಳಿಸಿದರು.

‘ಸರ್ಕಾರ ಜಾವೆಲಿನ್‌ಗಳಿಗೆ ಮತ್ತು ಇತರ ಸೌಲಭ್ಯಗಳಿಗೆ ಪ್ರಾಯೋಜಕತ್ವ ನೀಡಿತು. ಅವನು ದಕ್ಷಿಣ ಆಫ್ರಿಕಾಕ್ಕೆ ಹೋಗಿ ಅಂತರರಾಷ್ಟ್ರೀಯ ದರ್ಜೆಯ ಮೂರು ಜಾವೆಲಿನ್‌ಗಳನ್ನು ಕೊಂಡು ತಂದ’ ಎಂದು ಅವರು ತಿಳಿಸಿದರು.

ನೀರಜ್‌ಗೂ ಅಭಿನಂದನೆ: ‘ನದೀಮ್ ಮತ್ತು ಪಾಕಿಸ್ತಾನಕ್ಕೆ ಪದಕ ಬಂದಿದ್ದರಿಂದ ಸಂಸತವಾಗಿದೆ’ ಎಂದರು. ನದೀಮ್ ಜೊತೆ ಬೆಳ್ಳಿ ಗೆದ್ದ ನೀರಜ್ ಚೋಪ್ರಾ ಅವರನ್ನೂ ರಝಿಯಾ ಅಭಿನಂದಿಸಿದರು. ‘ಅವರ ತಾಯಿ ಮತ್ತು ಕುಟುಂಬಕ್ಕೂ ಅಭಿನಂದನೆ ಸಲ್ಲಿಸುವೆ. ಸೋಲು ಗೆಲುವು ವಿಧಿಲಿಖಿತ’ ಎಂದರು.

ನೀರಜ್ ಚೋಪ್ರಾ ತಾಯಿ ಕೂಡ ಶುಕ್ರವಾರ ನದೀಮ್ ಅವರನ್ನು ಅಭಿನಂದಿಸಿದ್ದು, ಆತನೂ ತಮ್ಮ ಮಗನ ಹಾಗೆ ಎಂದಿದ್ದರು.

ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಚಿನ್ನ ಗೆದ್ದ ಅರ್ಷದ್ ನದೀಮ್ ಅವರ ಪಾಕ್‌ನ ಪಂಜಾಬ್ ಪ್ರಾಂತ್ಯದ ಮಿಯಾನ್ ಚಾನ್ನು ಗ್ರಾಮದ ಮನೆಯಲ್ಲಿ ಬಂಧುಗಳು ಆಗಸ್ಟ್ 9ರಂದು ಉಪಾಹಾರಕ್ಕೆ ಸಿದ್ಧತೆ ನಡೆಸುತ್ತಿದ್ದ ಚಿತ್ರ –ಎಎಫ್‌ಪಿ ಚಿತ್ರ

ನದೀಮ್‌ಗೆ ಪಾಕ್‌ನ 2ನೇ ಅತ್ಯುನ್ನತ ಪ್ರಶಸ್ತಿ

ಇಸ್ಲಾಮಾಬಾದ್ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಜಾವೆಲಿನ್ ಎಸೆಗಾರ ಅರ್ಷದ್ ನದೀಮ್ ಅವರ ಸಾಧನೆಯನ್ನು ಗುರುತಿಸಿ ಪಾಕಿಸ್ತಾನ ಸರ್ಕಾರವು ದೇಶದ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ‘ಹಿಲಾಲ್–ಇ–ಇಮ್ತಿಯಾಜ್’ ಪ್ರದಾನ ಮಾಡುವುದಾಗಿ ಶನಿವಾರ ಪ್ರಕಟಿಸಿದೆ.

ಕ್ರಿಕೆಟ್‌ನ ನಷ್ಟ, ಅಥ್ಲೆಟಿಕ್ಸ್‌ಗೆ ಲಾಭ

ಅರ್ಷದ್ ನದೀಮ್‌ಗೆ ಶಾಲಾ ದಿನಗಳಲ್ಲಿ ಕ್ರಿಕೆಟ್ ಅಚ್ಚುಮೆಚ್ಚು.ಕೆಲಕಾಲ ಟೇಬಲ್ ಟೆನಿಸ್ ಆಡಿದ್ದರು ಸಹ. ಆದರೆ ಕ್ರಿಕೆಟ್ ಆದ್ಯತೆಯಾಯಿತು. ವೇಗದ ಬೌಲರ್ ಆಗುವ ಆಸೆಹೊತ್ತರು. ಫುಟ್‌ಬಾಲ್, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್ ಸ್ಪರ್ಧೆಗಳಲ್ಲೂ ಭಾಗವಹಿಸಿದ್ದರು. ಆದರೆ ಕ್ರಿಕೆಟ್‌ನಲ್ಲೇ ನೆಲೆಕಂಡುಕೊಳ್ಳುವ ಆಸೆ ಹೊತ್ತ ಅವರ ಕ್ರೀಡಾಬದುಕಿಗೆ ತಿರುವು ದೊರೆತಿದ್ದು ಶಾಲಾ ಕ್ರೀಡಾಕೂಟವೊಂದರ ಸಂದರ್ಭದಲ್ಲಿ. ಅದೂ ದಶಕದ ಹಿಂದೆ. ಅವರನ್ನು ಗಮಿಸಿದ ಅಥ್ಲೆಟಿಕ್ ಕೋಚ್ ರಶೀದ್ ಅಹ್ಮದ್ ಸಾಖಿ ಅವರು ನದೀಮ್ ಒಳ್ಳೆಯ ಜಾವೆಲಿನ್ ಥ್ರೋವರ್ ಆಗಬಲ್ಲರೆನ್ನುವ ಸಾಮರ್ಥ್ಯ ಗುರುತಿಸಿದರು.

2016ರ ಸುಮಾರಿಗೆ ಜಾವೆಲಿನ್‌ನಲ್ಲೇ ತೊಡಗಿಸಿಕೊಳ್ಳುವ ನಿರ್ಧಾರಕ್ಕೆ ಬಂದರು. ಉಳಿದಿದ್ದೆಲ್ಲಾ ಇತಿಹಾಸ.